# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 2271 |
| ಸದಸ್ಯರ ಹೆಸರು | : ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : 26.03.2026. |
| ಉತ್ತರಿಸುವ ಸಚಿವರು | : ಗೃಹ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಜೈಲುಗಳ ಸುಧಾರಣೆ ಕುರಿತಂತೆ ಸರ್ಕಾರ ಇಲ್ಲಿಯವರೆಗೆ ಯಾವ ವರದಿಗಳನ್ನು ಯಾವಾಗ ಪಡೆಯಲಾಗಿದೆ: (ಈ ಕುರಿತು ಪ್ರಮುಖ ಅಂಶಗಳು ಅಥವಾ ವರದಿಗಳ ಪ್ರತಿಗಳನ್ನು ಒದಗಿಸುವುದು)</td><td>ಜೈಲುಗಳ ಸುಧಾರಣೆ ಕುರಿತಂತೆ ರಚಿಸಲಾಗಿರುವ ಸಮಿತಿಗಳ ವಿವರಗಳು ಈ ಕೆಳಕಂಡಂತಿದೆ:-
<table>
<tr><th>ಕ್ರ. ಸಂ.</th><th>ಸಮಿತಿಗಳು</th><th>ವರದಿ ಸ್ವೀಕೃತ ಗೊಂಡ ವರ್ಷ</th></tr>
<tr><td>1</td><td>ಪಬ್ಲಿಕ್ ಆಡಿಟ್ ಕಮಿಟಿ.</td><td>2009</td></tr>
<tr><td>2</td><td>ಶ್ರೀ ಬಿಪಿನ್ ಗೋಪಾಲಕೃಷ್ಣ, ಐ.ಪಿ.ಎಸ್, ಇವರ ಅಧ್ಯಕ್ಷತೆಯಲ್ಲಿ - ಹೈಪವರ್ಡ್ ಕಮಿಟಿ ಆನ್ ಅಪ್ ಗ್ರೇಡೇಷನ್ ಅಂಡ್ ಸೆಕ್ಯುರಿಟಿ ಆಫ್ ಕರ್ನಾಟಕ ಪ್ರಿಸನ್ಸ್.</td><td>2013</td></tr>
<tr><td>3</td><td>ಶ್ರೀ ವಿನಯ್ ಕುಮಾರ್, ನಿವೃತ್ತ ಐ.ಎ.ಎಸ್ ರವರ ಕಮಿಟಿ.</td><td>2017</td></tr>
<tr><td>4</td><td>ಶ್ರೀ ಮುರುಗನ್, ಐ.ಪಿ.ಎಸ್ ರವರ ವರದಿ</td><td>2022</td></tr>
<tr><td>5</td><td>ಶ್ರೀ ಚಂದ್ರಗುಪ್ತ ಐ.ಪಿ.ಎಸ್ ರವರ ಕಮಿಟಿ.</td><td>2025</td></tr>
<tr><td>6</td><td>ಶ್ರೀ ಆರ್.ಹಿತೇಂದ್ರ, ಐ.ಪಿ.ಎಸ್ ರವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ.</td><td>2026</td></tr>
</table>
ಸಮಿತಿಗಳು ಸಲ್ಲಿಸಿರುವ ಪ್ರಮುಖ ಅಂಶಗಳ / ಶಿಫಾರಸ್ಸುಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಆ)</td><td>ಜೈಲುಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್‌ಗಳ ವಿಚಾರಣಾಧೀನ ಖೈದಿಗಳಿಗೆ ಪ್ರತ್ಯೇಕ ಜೈಲುಗಳನ್ನು ಸ್ಥಾಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ:</td><td>ಜೈಲುಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್‌ಗಳ ವಿಚಾರಣಾಧೀನ ಖೈದಿಗಳಿಗೆ ಪ್ರತ್ಯೇಕ ಜೈಲುಗಳನ್ನು ಸ್ಥಾಪಿಸುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ.</td></tr>
<tr><td>ಇ)</td><td>3 ಕ್ರಿಮಿನಲ್ ಅಧಿಕಾರಿಗಳಿಗೆ ಪ್ರತ್ಯೇಕ ಜೈಲು ಸ್ಥಾಪಿಸುವುದರ ಅಗತ್ಯ ಸರ್ಕಾರಕ್ಕೆ ತಿಳಿದು ಬಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರದ ಕ್ರಮ ಮತ್ತು ಯೋಜನೆಗಳೇನು:</td><td>ಪ್ರತ್ಯೇಕ ಜೈಲು ಸ್ಥಾಪಿಸುವ ಬಗ್ಗೆ ಯಾವುದೇ ಯೋಜನೆಗಳನ್ನು ರೂಪಿಸಿರುವುದಿಲ್ಲ.</td></tr>
</table>

| | | |
|---|---|---|
| ಈ) | ಪ್ರಸ್ತುತ ಜೈಲಿನ ವ್ಯವಸ್ಥೆಯನ್ನು ಎಲ್ಲಾ ರೀತಿಯ ಆರೋಪಿಗಳು ಮತ್ತು ಅಪರಾಧಿಗಳು ಒಟ್ಟಿಗೆ ಇರುವುದರಿಂದ ಬಿಡುಗಡೆಗೊಂಡವರು ಸಮಾಜದೊಂದಿಗೆ Negetive ಆಗಿ ಪ್ರಭಾವಿತರಾಗಿ ಸಮಾಜದ ಮೇಲೆ ದುಷ್ಪರಿಣಾಮಗಳು ಉಂಟಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಕಾರಾಗೃಹಗಳಲ್ಲಿ ದಾಖಲಾಗುವ ವಿಚಾರಣಾ, ಸಜಾ ಮತ್ತು ಮಹಿಳಾ ಬಂದಿಗಳನ್ನು ಈ ಕೆಳಗಿನಂತೆ ವರ್ಗೀಕರಿಸಿ, ಪ್ರತ್ಯೇಕವಾಗಿ ಇಡಲಾಗುತ್ತಿದ್ದು, ವಿವರಗಳು ಈ ಕೆಳಕಂಡಂತಿದೆ:-<br>• 21 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಬಂದಿಗಳು.<br>• ಮೊದಲನೇ ಬಾರಿಯ ಅಪರಾಧ ಎಸಗಿದ ಬಂದಿಗಳು.<br>• 07 ವರ್ಷಗಳ ಕಡಿಮೆ ಅವಧಿಗೆ ಶಿಕ್ಷೆ ವಿಧಿಸಬಹುದಾದ ಅಪರಾಧ ಎಸಗಿದ ಬಂದಿಗಳು. |

ಸಂಖ್ಯೆ: ಹೆಚ್‌ಡಿ 67 ಪಿಆರ್‌ಎ 2026

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು

<u>ಅನುಬಂಧ –1</u>

## ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ

## ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಶಿಫಾರಸ್ಸಿನ ಮೇಲೆ ಕೈಗೊಂಡ ಕ್ರಮವನ್ನು ತೋರಿಸುವ ವಿವರಣಾ ಪತ್ರ

| ಕ್ರ. ಸಂ. | ವರದಿಯ ಪುಟ ಅಥವಾ ಕಂಡಿಕೆಗೆ ಉಲ್ಲೇಖ | ಶಿಫಾರಸ್ಸಿನ ವಿವರಗಳು | ಕೈಗೊಂಡ ಕ್ರಮ : ಕೈಗೊಳ್ಳಲು ಉದ್ದೇಶಿಸಿರುವ ಕ್ರಮಕ್ಕೆ ಸಂಬಂಧಿಸಿದಂತೆ ಉತ್ತರ |
|---|---|---|---|
| 1) | ವರದಿಯ ಕಂಡಿಕೆ 4.1.2.1<br>(ಎ) ಕಾರಾಗೃಹಗಳನ್ನು ಪ್ರವೇಶಿಸುವ ಕೈದಿಗಳ ಮತ್ತು ಅನ್ಯ ವ್ಯಕ್ತಿಗಳ ದೈಹಿಕ ತಪಾಸಣೆ | i)ನಿಷೇಧಿತ ವಸ್ತುಗಳಾದ ಮೊಬೈಲ್ ಫೋನ್‌ಗಳು, ಸಿಮ್ ಕಾರ್ಡ್‌ಗಳು, ಮಾದಕ ವಸ್ತುಗಳು ಕಾರಾಗೃಹಗಳಲ್ಲಿ ಅಪಾರ ಪ್ರಮಾಣದಲ್ಲಿ ಪತ್ತೆಯಾಗಿರುವುದಕ್ಕೆ ಸಮಿತಿಯು ತೀವ್ರ ಅತೃಪ್ತಿ ವ್ಯಕ್ತಪಡಿಸುತ್ತದೆ. ನಿಷೇಧಿತ ವಸ್ತುಗಳು ಕಾರಾಗೃಹಗಳನ್ನು ಪ್ರವೇಶಿಸದಂತೆ ತಡೆಯಲು ನಿಗದಿಪಡಿಸಿರುವ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೇ, ಅಂತಹ ವಸ್ತುಗಳ ಪ್ರವೇಶಕ್ಕೆ ಜವಾಬ್ದಾರರಾದ ಅಧಿಕಾರಿಗಳು / ಸಿಬ್ಬಂದಿಯವರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. | – ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳು ಪ್ರವೇಶಿಸದಂತೆ ತಡೆಯಲು ನಿಗಧಿಪಡಿಸಿರುವ ನಿಯಂತ್ರಣ ಕ್ರಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸದೇ ಅಂತಹ ವಸ್ತುಗಳ ಪ್ರವೇಶಕ್ಕೆ ಜವಾಬ್ದಾರರಾದ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗಿದ್ದು, 2012 ರಿಂದ 2024ರ ಅವಧಿಯಲ್ಲಿನ ಶಿಸ್ತು ಕ್ರಮ ಜರುಗಿಸಲಾದ ವಿವರ ಈ ಕೆಳಕಂಡಂತಿದೆ: |

| ವರ್ಷ | ಪ್ರಕರಣಗಳ ಸಂಖ್ಯೆ | ಕರ್ತವ್ಯ ಲೋಪವೆಸಗಿದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ದೋಷ ಮುಕ್ತಗೊಂಡ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಶಿಸ್ತು ಕ್ರಮಕ್ಕೆ ಒಳಗಾದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ವಿಚಾರಣೆ ಎದುರಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ |
|---|---|---|---|---|---|
| 2012 | 02 | 04 | 00 | 04 | – |
| 2013 | 04 | 07 | 02 | 05 | – |
| 2014 | 00 | 00 | 00 | 00 | – |
| 2015 | 00 | 00 | 00 | 00 | – |
| 2016 | 04 | 21 | 00 | 21 | – |
| 2017 | 02 | 02 | 02 | 00 | – |
| 2018 | 01 | 01 | 00 | 01 | – |
| 2019 | 01 | 01 | 00 | 01 | – |
| 2020 | 02 | 02 | 01 | 01 | – |
| 2021 | 06 | 42 | – | 42 | – |

| | | | | | |
|---|---|---|---|---|---|
| 2022 | 08 | 78 | – | 16 | 62 |
| 2023 | 04 | 28 | – | 02 | 26 |
| 2024 | 24 | 126 | – | – | 126 |
| **ಒಟ್ಟು** | **58** | **312** | **5** | **93** | **214** |

- ಶಿಸ್ತು ಕ್ರಮಕ್ಕೆ ಒಳಗಾದ / ವಿಚಾರಣೆ ಎದುರಿಸುತ್ತಿರುವ 312 ಅಧಿಕಾರಿ/ ಸಿಬ್ಬಂದಿಗಳ ಪೈಕಿ 93 ಅಧಿಕಾರಿ/ ಸಿಬ್ಬಂದಿಗಳಿಗೆ ಈಗಾಗಲೇ ದಂಡನೆ ವಿಧಿಸಲಾಗಿದ್ದು, ಈ ಪೈಕಿ 02 ಸಿಬ್ಬಂದಿಗಳನ್ನು ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ.
- ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳ ಪ್ರವೇಶಿಸದಂತೆ ತಡೆಯಲು ಜವಾಬ್ದಾರರಾದ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು ವಿವರ ಈ ಕೆಳಕಂಡಂತಿದೆ:

| ವರ್ಷ | ಪ್ರಕರಣಗಳ ಸಂಖ್ಯೆ | ಕರ್ತವ್ಯ ಲೋಪವೆಸಗಿದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ದೋಷ ಮುಕ್ತಗೊಂಡ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಶಿಸ್ತು ಕ್ರಮಕ್ಕೆ ಒಳಗಾದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ವಿಚಾರಣೆ ಎದುರಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ |
|---|---|---|---|---|---|
| 2022 | – | – | – | – | – |
| 2023 | 03 | 03 | – | – | 03 |
| 2024 | 05 | 18 | – | – | 18 |
| 2025 | 01 | 01 | – | – | 01 |
| **ಒಟ್ಟು** | **09** | **22** | – | – | **22** |

| | |
|---|---|
| ii) ರಾಜ್ಯದ ಎಲ್ಲಾ ಕಾರಾಗೃಹಗಳ ಮುಖ್ಯಸ್ಥರು ಪ್ರತಿನಿತ್ಯ ತಪಾಸಣೆ ನಡೆಸಿ, ಅಕ್ರಮವಾಗಿ ನಿಷೇಧಿತ ವಸ್ತುಗಳ ಬಳಕೆ / ಬಳಕೆಯಾಗದಿರುವ ಬಗ್ಗೆ ಕೇಂದ್ರ ಕಛೇರಿಗೆ ದೃಢೀಕರಣ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲು ಇಲಾಖಾ ಮುಖ್ಯಸ್ಥರಿಗೆ | – ಪ್ರತಿನಿತ್ಯ ಕಾರಾಗೃಹಗಳಲ್ಲಿ ತಪಾಸಣೆ ಕುರಿತಂತೆ ವಿವರದ ವರದಿಗಳನ್ನು ಪ್ರಧಾನ ಕಛೇರಿಗೆ Daily Situation Report (DSR) ನೀಡುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿರುತ್ತದೆ. ತಪಾಸಣೆ ಕುರಿತಂತೆ ದೃಢೀಕೃತ ಪ್ರಮಾಣ ಪತ್ರಗಳನ್ನು ಸಲ್ಲಿಸಲಾಗುತ್ತಿರುತ್ತದೆ.<br>– ಪ್ರಧಾನ ಕಛೇರಿ ಸುತ್ತೋಲೆ ದಿನಾಂಕ: 15.04.2024 ರಲ್ಲಿ ಕಾರಾಗೃಹಗಳ ಪರಿಶೀಲನೆ, ತಪಾಸಣೆ ಮತ್ತು ಭದ್ರತಾ ಉಪಕರಣಗಳ ಬಳಕೆ ವರದಿಯನ್ನು ಕಾರಾಗೃಹಗಳ ಉಪಮಹಾನಿರೀಕ್ಷಕರು, ಪ್ರತಿ 15 ದಿನಗಳಿಗೊಮ್ಮೆ ವರದಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.<br>– ಕಾರಾಗೃಹಗಳಲ್ಲಿ ಪ್ರತಿನಿತ್ಯ ಬೀಗಮುದ್ರೆ ತೆರವಿನ ಮತ್ತು ಬೀಗಮುದ್ರೆ ಸಮಯದಲ್ಲಿ ತಪಾಸಣೆ ... ಕೆಗೆ |

ಸಮಿತಿಯು ಆಗ್ರಹಿಸುತ್ತದೆ.

ಅನಿರೀಕ್ಷಿತ ತಪಾಸಣೆಯನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವಂತೆ ವಿವಿಧ ಸುತ್ತೋಲೆಗಳಲ್ಲಿ ಸೂಚಿಸಲಾಗಿದ್ದು ಅದರಂತೆ ಎಲ್ಲಾ ಕಾರಾಗೃಹಗಳಲ್ಲಿ ತಪಾಸಣಾ ಕ್ರಮವಹಿಸಲಾಗುತ್ತಿದೆ.

- ರಾಜ್ಯದ ಕಾರಾಗೃಹಗಳಲ್ಲಿ ಮೊಬೈಲ್ ಮತ್ತು ಇನ್ನಿತರೇ ನಿಷೇಧಿತ ವಸ್ತುಗಳನ್ನು ಪತ್ತೆ ಹಚ್ಚಲು ಕಾಲಕಾಲಕ್ಕೆ ಪೊಲೀಸ್ ಇಲಾಖೆ ಮತ್ತು ಕಾರಾಗೃಹ ಇಲಾಖೆಯ ಸಿಬ್ಬಂದಿಗಳಿಂದ ತಪಾಸಣೆ ಕೈಗೊಳ್ಳಲಾಗುತ್ತಿದೆ.
- ಇಲಾಖೆ ಸುತ್ತೋಲೆಗಳಲ್ಲಿ ಆಡಳಿತಾತ್ಮಕ ವಿದ್ಯಮಾನಗಳ ಮಾಹಿತಿಯನ್ನು ಪ್ರಧಾನ ಕಛೇರಿಗೆ ಸಲ್ಲಿಸುವಂತೆ ಎಲ್ಲಾ ಕಾರಾಗೃಹಗಳ ಮುಖ್ಯಸ್ಥರುಗಳಿಗೆ ತಿಳಿಸಲಾಗಿದ್ದು, ಸ್ವೀಕೃತಗೊಂಡ ಮಾಹಿತಿಯನ್ನು ಪರಿಶೀಲಿಸಿ. ನಿಷೇಧಿತ ವಸ್ತುಗಳ ನಿಯಂತ್ರಣಕ್ಕೆ ಅಗತ್ಯ ನಿರ್ದೇಶಗಳನ್ನು ಸಹ ನೀಡಲಾಗುತ್ತದೆ.
- **ಸರ್ಕಾರದ ಸುತ್ತೋಲೆ ಸಂಖ್ಯೆ: ಹೆಚ್ ಡಿ 03 ಪಿಆರ್ಎ 2010, ದಿನಾಂಕ: 22-03-2010** ರನ್ವಯ ಅನಿರೀಕ್ಷಿತ ತಪಾಸಣೆಗಳನ್ನು ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಆದೇಶಿಸಲಾಗಿರುತ್ತದೆ. ಈ ಕುರಿತು ಎಲ್ಲಾ ಕಾರಾಗೃಹಗಳ ಮುಖ್ಯಸ್ಥರುಗಳಿಗೆ ಸೂಚಿಸಲಾಗಿದ್ದು ಅದರಂತೆ ಕ್ರಮವಹಿಸಲಾಗುತ್ತಿದೆ. ತಪಾಸಣಾ ವಿವರಗಳು ಕೆಳಕಂಡಂತಿದೆ:-

| ಕ್ರ.ಸಂ. | ವರ್ಷ | ಅನಿರೀಕ್ಷಿತ ತಪಾಸಣೆ |
|---|---|---|
| 1 | 2019 | 38 |
| 2 | 2020 | 02 (ಕೋವಿಡ್ ನಿಮಿತ್ತ) |
| 3 | 2021 | 53 |
| 4 | 2022 | 93 |
| 5 | 2023 | 154 |
| 6 | 2024 | 107 |

- ಪ್ರಧಾನ ಕಛೇರಿಯಿಂದ ದಿನಾಂಕ: 10.10.2024 ರಂದು ಸುತ್ತೋಲೆ ಹೊರಡಿಸಿ ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಹೊರಭಾಗ ಮತ್ತು ಒಳಭಾಗದಲ್ಲಿ ನಿಷೇಧಿತ ವಸ್ತುಗಳ ಕುರಿತಂತೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸೂಚನಾ ಫಲಕಗಳನ್ನು ಅಳವಡಿಸಿ ಜಾಗ್ರತಿ ಮೂಡಿಸಲು ಸೂಚಿಸಿದ್ದು, ಅದರಂತೆ ಎಲ್ಲಾ ಕಾರಾಗೃಹಗಳಲ್ಲಿ ಕ್ರಮವಹಿಸಲಾಗಿದೆ.
- ಕಾರಾಗೃಹಗಳಲ್ಲಿ ಬಂದಿಗಳು ಅನುಸರಿಸಬೇಕಾದ ಕ್ರಮಗಳು ನಿಯಮಗಳ ಕುರಿತಂತೆ ಪ್ರತಿಯೊಂದು ಕಾರಾಗೃಹದಲ್ಲಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ಬಂದಿಗಳಲ್ಲಿ Dos and Don'ts ಬಗ್ಗೆ ಅರಿವು

<table>
<tr><td></td><td></td><td></td><td>ಮೂಡಿಸಲು ನಿರ್ದೇಶನ ನೀಡಲಾಗಿರುತ್ತದೆ.<br>– ಸಂಬಂಧಪಟ್ಟ ಜಿಲ್ಲೆಗಳ ಪೊಲೀಸ್ ಅಧೀಕ್ಷಕರು ಹಾಗೂ ಪೊಲೀಸ್ ಆಯುಕ್ತರ ಅಧ್ಯಕ್ಷತೆಯಲ್ಲಿ ಕಾರಾಗೃಹಗಳಲ್ಲಿ ಅಪರಾಧಗಳು ಮತ್ತು ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಸಮಿತಿಗಳನ್ನು ಆದೇಶ ಸಂಖ್ಯೆ: CRM-3/03/2022 ದಿನಾಂಕ: 17.02.2022 ಪುನರ್ ರಚಿಸಲಾಗಿದ್ದು, ತ್ರೈಮಾಸಿಕವಾಗಿ ಸಭೆಗಳನ್ನು ನಡೆಸಲು ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ.<br>– ಕಾರಾಗೃಹಗಳಲ್ಲಿ ಜಂಟಿ ಭದ್ರತಾ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ.</td></tr>
<tr><td></td><td></td><td>iii) ಹೆಚ್ಚುವರಿ ಅಗತ್ಯತೆಗಳನ್ನು ಪೂರೈಸಲು ಹಾಗೂ ನಿಷ್ಕ್ರಿಯವಾದ ಸಾಧನ ಸಾಮಗ್ರಿಗಳ ದುರಸ್ತಿ ಮತ್ತು ಪುನರ್ಬಳಕೆಯ ಮೌಲ್ಯಮಾಪನ ನಡೆಸುವಂತೆ ಹಾಗೂ ಸುರಕ್ಷತಾ ಸಾಧನ ಸಾಮಗ್ರಿಗಳಿಗೆ ವಾರ್ಷಿಕ ನಿರ್ವಹಣೆಯ ಗುತ್ತಿಗೆಯನ್ನು ಪಡೆಯಲು ಇಲಾಖೆಯು ಜರೂರಾಗಿ ಕ್ರಮ ಕೈಗೊಳ್ಳುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.</td><td>– ಇಲಾಖೆಯಲ್ಲಿ ಲಭ್ಯವಿರುವ ಎಲ್ಲಾ ಭದ್ರತಾ ಉಪಕರಣಗಳನ್ನು ದುರಸ್ಥಿ ಪುನರ್‌ಬಳಕೆಗಾಗಿ ಮುಖ್ಯ ಅಧೀಕ್ಷಕರು / ಅಧೀಕ್ಷಕರ ವಿತ್ತಾಧಿಕಾರ ವ್ಯಾಪ್ತಿಯಡಿಯಲ್ಲಿ ತಕ್ಷಣವೇ ಭದ್ರತಾ ಉಪಕರಣಗಳನ್ನು ದುರಸ್ತಿ ಮತ್ತು ವಾರ್ಷಿಕ ನಿರ್ವಹಣೆ ಮಾಡಲು ಕ್ರಮ ವಹಿಸುವಂತೆ ಸೂಚಿಸಲಾಗಿದ್ದು, ಅದರಂತೆ ಎಲ್ಲಾ ಕಾರಾಗೃಹಗಳಲ್ಲಿ ಕ್ರಮವಹಿಸಲಾಗುತ್ತಿದೆ.<br>– ಭದ್ರತಾ ಉಪಕರಣಗಳನ್ನು ಖರೀದಿಯ ಜೊತೆಗೆ ವಾರ್ಷಿಕ ನಿರ್ವಹಣೆಗೆ ಸಹಾ ಷರತ್ತುಗಳನ್ನು ದರಖಾಸ್ತಿನಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ.<br>– ಪ್ರಸ್ತುತ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳ ನಿಯಂತ್ರಣಕ್ಕೆ ಅತ್ಯಾಧುನಿಕ ಮಾದರಿಯ ತಪಾಸಣಾ ಉಪಕರಣಗಳನ್ನು ಖರೀದಿಸಿದ್ದು ಭದ್ರತಾ ಉಪಕರಣಗಳ ವಿವರ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ಭದ್ರತಾ ಉಪಕರಣಗಳ ವಿವರ</th><th>ಭದ್ರತಾ ಉಪಕರಣಗಳ ಸಂಖ್ಯೆ</th></tr>
<tr><td>01</td><td>X-Ray Baggage Scanner</td><td>18</td></tr>
<tr><td>02</td><td>FG-1 Security Pole</td><td>12</td></tr>
<tr><td>03</td><td>HHMD</td><td>612</td></tr>
<tr><td>04</td><td>DFMD</td><td>131</td></tr>
<tr><td>05</td><td>Non Linear Junction Detector (NLJD)</td><td>11</td></tr>
<tr><td>06</td><td>Mobility Enhanced Spectrum Analyser (MESA)</td><td>02</td></tr>
<tr><td>07</td><td>Deep Search Metal Detector (DSMD)</td><td>134</td></tr>
<tr><td>08</td><td>T-HCBS (Tower of Hormonius call Blocking system)</td><td>03</td></tr>
<tr><td>09</td><td>Mobile Jammer</td><td>66</td></tr>
<tr><td>10</td><td>Body worn Camera</td><td>555</td></tr>
<tr><td>11</td><td>CCTV</td><td>1734</td></tr>
</table>
– ಕೇಂದ್ರ ಕಾರಾಗೃಹ ಬೆಂಗಳೂರಿನಲ್ಲಿರುವ 280 ಸಂಖ್ಯೆ ಸಿಸಿಟಿವಿಗಳಿಗೆ **AI-Powered Audio Video**</td></tr>
</table>

Analytics System ಗಳನ್ನು ಅಳವಡಿಸಲು ಕ್ರಮ ವಹಿಸಲಾಗಿದೆ, ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.

- ರಾಜ್ಯದ 08 ಕಾರಾಗೃಹಗಳಲ್ಲಿರುವ 66 ಸಂಖ್ಯೆ ಹಳೆಯ 2ಜಿ ಮೊಬೈಲ್ ಜಾಮಾರ್‌ಗಳನ್ನು ರಿಪೇರಿ, 4ಜಿ/5ಜಿ ಗೆ ಮೇಲ್ದರ್ಜೆಗೇರಿಸಿ ಮತ್ತು 03 ವರ್ಷಗಳ ವಾರ್ಷಿಕ ನಿರ್ವಹಣೆ ಕೈಗೊಳ್ಳಲು ಆದೇಶಿಲಾಗಿದೆ. ಕೇಂದ್ರ ಕಾರಾಗೃಹ ಬೆಂಗಳೂರು ಮತ್ತು ಬೆಳಗಾವಿಯಲ್ಲಿರುವ ಮೊಬೈಲ್ ಜಾಮಾರ್‌ಗಳ ರಿಪೇರಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಮುಕ್ತಾಯಗೊಂಡಿದೆ. ಉಳಿದ ಕಾರಾಗೃಹಗಳ ಕಾಮಾಗಾರಿ ಪ್ರಗತಿಯಲ್ಲಿದೆ.
- ರಾಜ್ಯದ 07 ಕಾರಾಗೃಹಗಳಲ್ಲಿ ಅತ್ಯಾಧುನಿಕ 11 ಸಂಖ್ಯೆ T-HCBS (Tower of Hormonious call blocking system) ಗಳನ್ನು ಅಳವಡಿಸಲು ಕ್ರಮವಹಿಸಲಾಗಿದ್ದು ಆದರಲ್ಲಿ ಕೇಂದ್ರ ಕಾರಾಗೃಹ ಬೆಂಗಳೂರಿನಲ್ಲಿ 03 ಸಂಖ್ಯೆ ಟವರ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಉಳಿದ 08 ಸಂಖ್ಯೆಯ ಟವರ್ ಗಳ ಸ್ಥಾಪನೆ ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಅನುಮತಿ ನಿರೀಕ್ಷಿಸಲಾಗಿದೆ.
- ಅತ್ಯಾಧುನಿಕ ಮಾದರಿಯ 19 ಸಂಖ್ಯೆಯ ಬ್ಯಾಗೇಜ್ ಸ್ಕ್ಯಾನರ್ ಖರೀದಿಸಲು ಟೆಂಡರ್ ಕರೆಯಲಾಗಿದ್ದು ಪ್ರಕ್ರಿಯೆ ಮುಕ್ತಾಯವಾಗಿದ್ದು, ಸರಬರಾಜು ಪ್ರಕ್ರಿಯೆ ಚಾಲನೆಯಲ್ಲಿದೆ.
- 2025-26 ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ ಕಾರಾಗೃಹಗಳಿಗೆ ಅತ್ಯಾಧುನಿಕ ಮಾದರಿಯ ಭದ್ರತಾ ಉಪಕರಣಗಳನ್ನು ಖರೀದಿಸುವ ಸಲುವಾಗಿ ಅನುದಾನ ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

| ಕ್ರ.ಸಂ. | ಭದ್ರತಾ ಉಪಕರಣಗಳ ವಿವರ | ಅಗತ್ಯವಿರುವ ಉಪಕರಣಗಳ ಸಂಖ್ಯೆ |
|---|---|---|
| 1. | Full Body Scanner | 08 |
| 2. | CCTV | 1067 |
| 3. | Walkie - Talkie | 905 |
| 4. | Under Vehicle Scanning System (UVSS) | 8 |
| 5. | HHMD | 126 |
| 6. | DFMD | 36 |
| 7. | MESA | 16 |
| 8. | NLJD | 14 |

| | | | |
|---|---|---|---|
| | | | 9. DSMD — 8 |
| | | iv) ಕಾರಾಗೃಹಗಳನ್ನು ಪ್ರವೇಶಿಸುವ ವ್ಯಕ್ತಿಗಳ ದೈಹಿಕ ತಪಾಸಣೆ ಹಾಗೂ ವಾಹನಗಳ ತಪಾಸಣೆಗೆ ಸಂಬಂಧಿಸಿದಂತೆ ಹಾಲಿಯಿರುವ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಶೀಘ್ರದಲ್ಲಿ ಜಾರಿಗೊಳಿಸುವಂತೆ ಇಲಾಖೆಗೆ ಸಮಿತಿಯು ಸೂಚಿಸುತ್ತದೆ. | See below |

- ಸರ್ಕಾರದ ಆದೇಶ ಸಂಖ್ಯೆ: ಒಇ 143 ಪೊಸಇ 2015 ಬೆಂಗಳೂರು ದಿನಾಂಕ: 28-05-2015 ರ ನಡವಳಿಯಲ್ಲಿ ತಿಳಿಸಿರುವಂತೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.
- ರಾಜ್ಯದ ಕೇಂದ್ರ ಕಾರಾಗೃಹಗಳಾದ ಬೆಂಗಳೂರು, ಬಳ್ಳಾರಿ, ಬೆಳಗಾವಿ. ಕಲಬುರಗಿ. ಧಾರವಾಡ, ವಿಜಯಪುರ, ಮೈಸೂರು, ಶಿವಮೊಗ್ಗ ಮತ್ತು ಮಂಗಳೂರು ಜಿಲ್ಲಾ ಕಾರಾಗೃಹಗಳಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯನ್ನು ನಿಯೋಜಿಸಲಾಗಿರುತ್ತದೆ.

| Sl.No. | Name of the Post | Sanctioned | Working | Vacancies |
|---|---|---|---|---|
| 1. | Asst. Commandant (AC) | 1 | 1 | 00 |
| 2. | Police Inspector (PI) | 11 | 10 | 01 |
| 3. | Police Sub Inspector (PSI) | 30 | 19 | 11 |
| 4. | Asst. Sub Inspector (ASI) | 36 | 33 | 03 |
| 5. | Head Police Constable (HPC)\ Police Constable (PC) | 315 | 243 | 72 |
| 6. | Followers | 8 | 0 | 8 |
| | Total | **401** | **306** | **95** |

- ಪ್ರತಿನಿತ್ಯ ಕಾರಾಗೃಹಗಳಿಗೆ ಪ್ರವೇಶ ನೀಡುವ ವ್ಯಕ್ತಿಗಳು ಮತ್ತು ವಾಹನಗಳನ್ನು 03 ಹಂತದಲ್ಲಿ ಪರಿಶೀಲನೆಗೆ ಒಳಪಡಿಸಲಾಗುತ್ತಿದೆ.
- ಕಾರಾಗೃಹದ ಅಧಿಕಾರಿ/ಸಿಬ್ಬಂದಿಗಳಿಗೆ ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಿಬ್ಬಂದಿಗಳಿಗೆ ಪ್ರತಿನಿತ್ಯ ಬರುವ ವ್ಯಕ್ತಿಗಳನ್ನು ಹಾಗೂ ವಾಹನಗಳನ್ನು ತಪಾಸಣೆ ಮಾಡಲು ಸೂಕ್ತ ಮಾರ್ಗಸೂಚಿಗಳನ್ನು (SOP) ನೀಡಲಾಗಿರುತ್ತದೆ.
- ಮುಖ್ಯದ್ವಾರದಲ್ಲಿ ಭದ್ರತಾ ಉಪಕರಣಗಳನ್ನು ಅಳವಡಿಸಲಾಗಿದ್ದು, ಅವುಗಳಿಂದ ತಪಾಸಣೆಗೊಳಪಡಿಸಿ ದಾಖಲೆಗಳನ್ನು ನಿರ್ವಹಿಸಲಾಗುತ್ತಿದೆ.

| | | | |
|---|---|---|---|
| | | v) ಕರ್ನಾಟಕ ಕಾರಾಗೃಹ ಕೈಪಿಡಿ, 1978 ಅನ್ನು ಕಾರಾಗೃಹದ ಸುರಕ್ಷತೆಗಾಗಿ ಸಂಗ್ರಹಿಸಿರುವ ಹೊಸ ತಾಂತ್ರಿಕ ಸಾಧನ ಸಾಮಗ್ರಿಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ಯಥೋಕ್ತವಾಗಿ ಅಳವಡಿಸಿ ಪರಿಷ್ಕರಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಇಲಾಖೆಯು ತೆಗೆದುಕೊಂಡು, ಪರಿಷ್ಕೃತ ಕೈಪಿಡಿಯ ಪ್ರತಿಯನ್ನು ಜರೂರಾಗಿ ಸಲ್ಲಿಸುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. | – ಭಾರತ ಸರ್ಕಾರದ ಗೃಹ ಮಂತ್ರಾಲಯವು ಜಾರಿಗೆ ತಂದಿರುವ "ಮಾದರಿ ಕಾರಾಗೃಹ ಕೈಪಿಡಿ–2016" ರಲ್ಲಿನ ಅಂಶಗಳ ಆಧಾರದ ಮೇಲೆ ಕರ್ನಾಟಕ ಕಾರಾಗೃಹ ಕೈಪಿಡಿ–1978 ಅನ್ನು ಪರಿಷ್ಕರಿಸಿ, ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ–2021ಯನ್ನು ದಿನಾಂಕ: 02.02.2022 ರಂದು ಅಳವಡಿಕೊಳ್ಳಲಾಗಿದೆ.<br>– ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ–2021 ಪ್ರತಿಯನ್ನು ಸಲ್ಲಿಸಿದೆ. |
| | | vi) ಬಂದಿಗಳ ಚಲನ–ವಲನಗಳನ್ನು ಗಮನಿಸಲು ಕೆಲವೊಂದು ಕಾರಾಗೃಹಗಳಲ್ಲಿ ಸಿ.ಸಿ.ಟಿ.ವಿ. ವ್ಯವಸ್ಥೆಗಳನ್ನು ಅಳವಡಿಸಲಾಗಿದೆಯೆಂದು, ಆ ಪೈಕಿ, 3 ಕಾರಾಗೃಹಗಳ ಕೆಲವು ಸಿ.ಸಿ.ಟಿ.ವಿ.ಗಳು, ಅಳವಡಿಸಲಾಗಿದ್ದ ಎಕ್ಸ್–ರೇ ಬ್ಯಾಗೇಜ್ ಉಪಕರಣಗಳ ಪೈಕಿ, 64 ಉಪಕರಣಗಳು, 210 ಸಂಖ್ಯೆಯ ಹೆಚ್.ಹೆಚ್.ಎಂ.ಡಿ. ಮತ್ತು ಡಿ.ಎಫ್.ಎಂ.ಡಿ. ಉಪಕರಣಗಳು ಹಾಗೂ 4 ಸಂಖ್ಯೆ ಡೀಪ್ ಸರ್ಚ್ ಉಪಕರಣಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿದ್ದನ್ನು ಸಮಿತಿಯು ಪರಾಮರ್ಶಿಸಿತು. ಆ ಉಪಕರಣಗಳನ್ನು ಶೀಘ್ರವಾಗಿ ದುರಸ್ತಿಪಡಿಸಿ, ಸದ್ಬಳಕೆ ಮಾಡಿಕೊಳ್ಳುವಂತೆ ಸಮಿತಿಯು ಪರಾಮರ್ಶಿಸಿತು. ಆ ಉಪಕರಣಗಳನ್ನು ಶೀಘ್ರವಾಗಿ ದುರಸ್ಥಿಪಡಿಸಿ, | – ರಾಜ್ಯದ ಕಾರಾಗೃಹಗಳ ಭದ್ರತಾ ಹಿತದೃಷ್ಟಿಯಿಂದ ಒದಗಿಸಲಾಗಿರುವ ವಿವಿಧ ಭದ್ರತಾ ಉಪಕರಣಗಳನ್ನು 24X7 ಕಾರ್ಯನಿರ್ವಹಿಸುವಂತೆ ಹಾಗೂ ದುರಸ್ತಿಗೆ ಬಂದಂತಹ ಉಪಕರಣಗಳನ್ನು ಆಗಿಂದಾಗ್ಗೆ ದುರಸ್ತಿಗೆ ಕ್ರಮವಹಿಸುವಂತೆ ಎಲ್ಲಾ ಕಾರಾಗೃಹಗಳ ಮುಖ್ಯಸ್ಥರುಗಳಿಗೆ ಸೂಚಿಸಲಾಗಿರುತ್ತದೆ. ಅದರನ್ವಯ, ಎಲ್ಲಾ ಕಾರಾಗೃಹಗಳ ಮುಖ್ಯಸ್ಥರು ಕಾಲಕಾಲಕ್ಕೆ ಭದ್ರತಾ ಉಪಕರಣಗಳ ದುರಸ್ತಿ ಮತ್ತು ನಿರ್ವಹಣೆಗೆ ಕ್ರಮಗಳನ್ನು ಕೈಗೊಳ್ಳುತ್ತಿರುತ್ತಾರೆ.<br>– ಕಾರಾಗೃಹಗಳಲ್ಲಿ ಬಂದಿಗಳ ಚಲನ–ವಲನ ಪರಿವೀಕ್ಷಣೆಗಾಗಿ ಮೊದಲ ಹಂತದಲ್ಲಿ ಬೆಂಗಳೂರು, ಮೈಸೂರು ಬಳ್ಳಾರಿ, ಧಾರವಾಡ, ಕಲಬುರ್ಗಿ ಮತ್ತು ಬೆಳಗಾವಿ ಕೇಂದ್ರ ಕಾರಾಗೃಹಗಳಲ್ಲಿ ವೀಕ್ಷಣಾ ಗೋಪುರವನ್ನು ನಿರ್ಮಿಸಲಾಗಿದ್ದು, ಅಗತ್ಯವಿರುವ ಉಪಕಾರಣಗಳನ್ನು ಒದಗಿಸಿ ಕಾರ್ಯಾರಂಭಗೊಳಿಸಲಾಗಿದೆ.<br>– 2025–26 ನೇ ಸಾಲಿನ ಆಯವ್ಯಯದಲ್ಲಿ ಐದು ಜಿಲ್ಲಾ ಕಾರಾಗೃಹಗಳಾದ ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು, ಮಂಡ್ಯ ಮತ್ತು ಉಡುಪಿ ಕಾರಾಗೃಹಗಳಲ್ಲಿ ಭದ್ರತಾ ವೀಕ್ಷಣಾ ಗೋಪುರಗಳನ್ನು ನಿರ್ಮಿಸುವ ಯೋಜನೆಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.<br>– ರಾಜ್ಯದ ಎಲ್ಲಾ ಕೇಂದ್ರ ಕಾರಾಗೃಹಗಳು ಮತ್ತು ಜಿಲ್ಲಾ ಮತ್ತು ತಾಲ್ಲೂಕು ಕಾರಾಗೃಹಗಳ ಮುಖ್ಯ ಗೋಡೆ ಮೇಲೆ ಭದ್ರತಾ ದೃಷ್ಟಿಯಿಂದ ರೇಜರ್ ಬ್ಲೇಡ್ ಫೆನ್ಸಿಂಗ್ ಅಳವಡಿಕೆ ಮಾಡಲಾಗಿರುತ್ತದೆ.<br>– ಕಾರಾಗೃಹಗಳ ಮುಖ್ಯ ಹೊರಗೋಡೆಗಳನ್ನು ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವಾ ಕೈಪಿಡಿ–2021 ರನ್ವಯ 21 ಅಡಿಯನ್ನು ನಿಗಧಿಪಡಿಸಿಕೊಳ್ಳಲಾಗಿದೆ. ಸಮಿತಿಯ ಶಿಫಾರಸ್ಸಿನಂತೆ ಬಹುತೇಕ |

| | | | |
|---|---|---|---|
| | | ಸದ್ಬಳಕೆ ಮಾಡಿಕೊಳ್ಳುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. ವೀಕ್ಷಣಾ ಗೋಪುರಗಳಿಗೆ ಅವಶ್ಯವಿರುವ ಸರ್ಚ್ ಲೈಟ್‌ಗಳು ಮತ್ತು ಬೈನಾಕ್ಯುಲರ್ಗಳನ್ನು ಖರೀದಿಸಲು ಹಾಗೂ ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಭದ್ರತೆಯ ದೃಷ್ಟಿಯಿಂದ ಎಲೆಕ್ಟ್ರಿಕಲ್ ಫೆನ್ಸಿಂಗ್ ಅಳವಡಿಸುವಂತೆ ಸಮಿತಿಯು ಆಗ್ರಹಿಸುತ್ತದೆ. ನಿಷೇಧಿತ ವಸ್ತುಗಳನ್ನು ರಕ್ಷಣಾ ಗೋಡೆಯ ಮೇಲಿನಿಂದ ಎಸೆಯಲು ಸಾಧ್ಯವಾಗದಂತೆ ಗೋಡೆಗಳ ಎತ್ತರವನ್ನು ಅಗತ್ಯ ಮಟ್ಟಕ್ಕೆ ಹೆಚ್ಚಿಸಲು ಇಲಾಖೆಯು ಸೂಕ್ತ ಕ್ರಮ ಕೈಗೊಳ್ಳುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. | ಕಾರಾಗೃಹಗಳು 21 ಅಡಿಗಳಿಗಿಂತ ಮೇಲಿದ್ದು, ಕೆಲವು ತಾಲ್ಲೂಕು ಕಾರಾಗೃಹಗಳು ಮುಖ್ಯಗೋಡೆಯು 15 ಅಡಿಯಿಂದ 18 ಅಡಿ ಇದ್ದು, ಸದರಿ ಮುಖ್ಯಗೋಡೆಯು ಹಳೆಯ ಕಟ್ಟಡಗಳಾಗಿದ್ದು, ಶಿಥಿಲಾವಸ್ಥೆಯಲ್ಲಿರುವುದರಿಂದ ಮುಖ್ಯಗೋಡೆಯನ್ನು ಎತ್ತರಿಸಲು ಸಾಧ್ಯವಾಗದ ಕಾರಣ ರೇಜರ್ ಬ್ಲೇಡ್ ಫೆನ್ಸಿಂಗ್ ಅಳವಡಿಸಲಾಗಿರುತ್ತದೆ.<br>- ಕಾರಾಗೃಹಗಳ ಒಳಗೆ ನಿಷೇಧಿತ ವಸ್ತುಗಳನ್ನು ಎಸೆಯುವುದನ್ನು ನಿಯಂತ್ರಿಸಲು ಮುಖ್ಯ ಹೊರಗೋಡೆಯ ಸುತ್ತಲೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ, ಕಾರಾಗೃಹ ಇಲಾಖಾ ಸಿಬ್ಬಂದಿಗಳು ಮತ್ತು ಗೃಹರಕ್ಷಕ ಸಿಬ್ಬಂದಿಗಳು ಗಸ್ತಿಗಾಗಿ ನಿಯೋಜಿಸಲಾಗಿರುತ್ತದೆ.<br>- ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗಿದ್ದು, ಇನ್ನುಳಿದ ಬೆಳಗಾವಿ, ಧಾರವಾಡ, ಮೈಸೂರು, ಬಳ್ಳಾರಿ ಮತ್ತು ಕಲಬುರ್ಗಿ ಕೇಂದ್ರ ಕಾರಾಗೃಹಗಳಲ್ಲಿ ವೀಕ್ಷಣಾ ಗೋಪುರಗಳ ನಿರ್ಮಾಣ ಕಾಮಗಾರಿ ಅಂತಿಮ ಹಂತದಲ್ಲಿದೆ. ವೀಕ್ಷಣಾ ಗೋಪುರಗಳಿಗೆ ಸರ್ಚ್ ಲೈಟ್ ಹಾಗೂ ಬೈನಾಕ್ಯುಲರ್ ಅಳವಡಿಸಲು ಕ್ರಮವಹಿಸಲಾಗುವುದು.<br>- 2025-26ನೇ ಸಾಲಿನಲ್ಲಿ 5 ಜಿಲ್ಲಾ ಕಾರಾಗೃಹಗಳ ವೀಕ್ಷಣಾ ಗೋಪುರ ನಿರ್ಮಾಣ ಕಾಮಗಾರಿಗೆ ಅನುದಾನ ಒದಗಿಸುವಂತೆ ಕೋರಲಾಗಿರುತ್ತದೆ. |
| 2) | (ಬಿ) ಅನಿರೀಕ್ಷಿತ ತಪಾಸಣೆಗಳನ್ನು ನಡೆಸುವುದು. | ಭಾರತ ಸರ್ಕಾರವು ಕಾರಾಗೃಹಗಳಲ್ಲಿನ ಮಾದಕ ವಸ್ತುಗಳನ್ನು ಮತ್ತು ಮಾದಕ ವ್ಯಸನಿಗಳನ್ನು ಪತ್ತೆ ಹಚ್ಚಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು 2010ರ ಅವಧಿಯಲ್ಲಿಯೇ ಸೂಚಿಸಿದ್ದರೂ, ಇಲಾಖೆಯು ಆ ಸೂಚನೆಗಳನ್ನು ಪಾಲಿಸದಿರುವುದಕ್ಕೆ ಸಮಿತಿಯು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತದೆ. ಇನ್ನು ಮುಂದಾದರೂ, ಇಲಾಖೆಯು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. | - ಕಾರಾಗೃಹಗಳಲ್ಲಿ ತಂಬಾಕು ಮತ್ತು ಮಾದಕ ವ್ಯಸನ ಮುಕ್ತ ಕೇಂದ್ರಗಳನ್ನು ಸ್ಥಾಪಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕಾರಾಗೃಹದ ವೈದ್ಯಾಧಿಕಾರಿಗಳ ಸಹಯೋಗದೊಂದಿಗೆ ಶಿಬಿರಗಳನ್ನು ಆಯೋಜಿಸಿ ಕಾರಾಗೃಹವನ್ನು ತಂಬಾಕು ಮತ್ತು ಮಾದಕ ವ್ಯಸನ ಮುಕ್ತ ಕೇಂದ್ರಗಳಾಗಿ ಮಾಡಲು ಕ್ರಮವಹಿಸಲಾಗಿದೆ.<br>- ಕಾರಾಗೃಹಗಳಲ್ಲಿ ತಂಬಾಕು ಮತ್ತು ಮಾದಕ ವ್ಯಸನ ಮುಕ್ತ ಕೇಂದ್ರ (Tobacco and Drug De-addiction Center) ಗಳನ್ನು ಸ್ಥಾಪನೆ ಮಾಡಲಾಗಿದೆ.<br>- ಕಾರಾಗೃಹಗಳ ಉಪಮಹಾನಿರೀಕ್ಷಕರು, ಕರ್ನಾಟಕ ಕಾರಾಗೃಹ ಅಕಾಡೆಮಿ ರವರನ್ನು ತಂಬಾಕು ಮತ್ತು ಮಾದಕ ವ್ಯಸನ ಮುಕ್ತ ಕೇಂದ್ರಗಳ ಮೇಲುಸ್ತುವಾರಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಈ ಕುರಿತಂತೆ ನಿರಂತರವಾಗಿ ಹಿಂಬಾಲಿಕ ಕ್ರಮಗಳನ್ನು ಅನುಸರಿಸಿ ಪ್ರತಿ ತಿಂಗಳು ವರದಿಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.<br>- ಕಾರಾಗೃಹಕ್ಕೆ ದಾಖಲಾಗುವ ಮಾದಕ ವ್ಯಸನಿಗಳನ್ನು ಗುರುತಿಸಿ ಪ್ರತ್ಯೇಕಿಸಲಾಗುತ್ತಿದೆ.<br>- ಸದರಿ ಬಂದಿಗಳಿಗೆ Random Checks for drugs consumption test ಗಳನ್ನು ಮಾಡಿ ಮಾದಕ |

ವ್ಯಸನಿಗಳನ್ನು ಗುರ್ತಿಸಿ ಪ್ರತ್ಯೇಕಿಸಲಾಗುತ್ತಿದೆ. ಈಗಾಗಲೇ ಮಂಗಳೂರು ಮತ್ತು ಚಿಕ್ಕಮಗಳೂರಿನಲ್ಲಿ ಕ್ರಮವಹಿಸಿದ್ದು, ಉಳಿದ ಕಾರಾಗೃಹಗಳಲ್ಲಿ ಕ್ರಮವಹಿಸಲು ಸೂಚಿಸಲಾಗಿದೆ.

- ಮಾದಕ ವ್ಯಸನಿ ಬಂದಿಗಳಿಗೆ Psychiatric ಮತ್ತು Psychiatric social worker ಮೂಲಕ ಆಪ್ತ ಸಮಾಲೋಚನೆ ಮಾಡಿ ಬಂದಿಗಳನ್ನು ವ್ಯಸನ ಮುಕ್ತಗೊಳಿಸಲು ಕ್ರಮವಹಿಸಲಾಗಿದೆ.
- ಕಾರಾಗೃಹಗಳಲ್ಲಿ Medical Camp ಗಳನ್ನು ಆಯೋಜಿಸಿ ಬಂದಿಗಳನ್ನು ವ್ಯಸನ ಮುಕ್ತಗೊಳಿಸಲು ಕ್ರಮವಹಿಸಲಾಗಿದೆ.

| ಕ್ರ ಸಂ. | ಕಾರಾಗೃಹ | ಒಟ್ಟು ವ್ಯಸನಿ ಬಂದಿಗಳು | ವ್ಯಸನ ಮುಕ್ತ ಬಂದಿಗಳು | ಚಿಕಿತ್ಸೆ ನೀಡುತ್ತಿರುವ ಬಂದಿಗಳು |
|---|---|---|---|---|
| 1. | ಬಳ್ಳಾರಿ | 52 | 15 | 37 |
| 2. | ಬೆಳಗಾವಿ | 110 | 35 | 75 |
| 3. | ಧಾರವಾಡ | 282 | 70 | 212 |
| 4. | ಕಲಬುರ್ಗಿ | 35 | 33 | 2 |
| 5. | ಮೈಸೂರು | 80 | 22 | 58 |
| 6. | ಶಿವಮೊಗ್ಗ | 40 | 23 | 17 |
| 7. | ವಿಜಯಪುರ | 55 | 15 | 40 |

- ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಚಿಕಿತ್ಸೆ ನೀಡಲಾಗುತ್ತಿರು ಬಂದಿಗಳು 452, ಕಾರಾಗೃಹದ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಮಾಡಿರುವ ಬಂದಿಗಳು 135. ಜನವರಿ 2024 ರಿಂದ ಡಿಸೆಂಬರ್ ವರೆಗೆ ಒಟ್ಟು 1690 ಮದ್ಯವ್ಯಸನಿಗಳು, 1291 ತಂಬಾಕು ವ್ಯಸನಿಗಳು, 443 ಗಾಂಜಾ ವ್ಯಸನಿಗಳನ್ನು ಗುರ್ತಿಸಿ ಆಪ್ತ ಸಮಾಲೋಚನೆ ಮಾಡಿ ಚಿಕಿತ್ಸೆ ನೀಡಲಾಗಿದೆ.

| | | | |
|---|---|---|---|
| | | ii) ಬೆಳಗಾವಿ, ಚಿಕ್ಕಮಗಳೂರು, ಹಾವೇರಿ, ಬೀದರ್, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ಬಳ್ಳಾರಿ ಕಾರಾಗೃಹಗಳಲ್ಲಿ ಅನಿರೀಕ್ಷಿತ ತಪಾಸಣೆಗಳನ್ನು ನಡೆಸದಿರುವುದರ ಕುರಿತು ವರದಿಯಲ್ಲಿನ ಆಕ್ಷೇಪಣೆಗಳನ್ನು ಸಮಿತಿಯು ವಿಮರ್ಶಿಸಿತು, ಇಲಾಖೆಯು ಕಾಲಕಾಲಕ್ಕೆ ಸದರಿ ಕಾರಾಗೃಹಗಳಲ್ಲಿ ತಪಾಸಣೆಗಳನ್ನು ನಡೆಸುವಂತೆ ಸಮಿತಿಯು ಸೂಚಿಸುತ್ತದೆ. | – ಕಾರಾಗೃಹಗಳಲ್ಲಿ ಪ್ರತಿನಿತ್ಯ ಬೀಗಮುದ್ರೆ ತೆರವಿನ ಮತ್ತು ಬೀಗಮುದ್ರೆ ಸಮಯದಲ್ಲಿ ತಪಾಸಣೆ ಜೊತೆಗೆ ಅನಿರೀಕ್ಷಿತ ತಪಾಸಣೆಯನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವಂತೆ ವಿವಿಧ ಸುತ್ತೋಲೆಗಳಲ್ಲಿ ಸೂಚಿಸಲಾಗಿದ್ದು ಅದರಂತೆ ಎಲ್ಲಾ ಕಾರಾಗೃಹಗಳಲ್ಲಿ ಕ್ರಮವಹಿಸಲಾಗುತ್ತಿದೆ.<br>– ಸರ್ಕಾರದ ಸುತ್ತೋಲೆ ಸಂಖ್ಯೆ: ಹೆಚ್ ಡಿ 03 ಪಿಆರ್ಎ 2010, ದಿನಾಂಕ: 22–03–2010 ರನ್ವಯ ಅನಿರೀಕ್ಷಿತ ತಪಾಸಣೆಗಳನ್ನು ಕೈಗೊಳ್ಳುವಂತೆ ಮೊಲೀಸ್ ಇಲಾಖೆಯನ್ನೂ ಕೋರಲಾಗಿರುತ್ತದೆ. ಈ ಕುರಿತು ಎಲ್ಲಾ ಕಾರಾಗೃಹಗಳ ಮುಖ್ಯಸ್ಥರುಗಳಿಗೆ ಸೂಚಿಸಲಾಗಿದ್ದು.<br>– ಸಮಿತಿಯು ಪ್ರಸ್ತಾಪಿಸಿರುವ ಈ ಕೆಳಕಂಡ ಕಾರಾಗೃಹಗಳಲ್ಲಿ ಮೊಲೀಸ್ ಇಲಾಖೆಯ ಸಹಯೋಗದೊಂದಿಗೆ ಕೈಗೊಳ್ಳಲಾದ ಅನಿರೀಕ್ಷೀತ ತಪಾಸಣಾ ವಿವರಗಳು. |

| ಕ್ರಸಂ | ಕಾರಾಗೃಹ | ಅನಿರೀಕ್ಷಿತ ತಪಾಸಣಾ ದಿನಾಂಕ |
|---|---|---|
| 01 | ಕೇಂದ್ರ ಕಾರಾಗೃಹ ಬೆಳಗಾವಿ | 19.02.2021 20.07.2022, 18.03.2023, 31.03.2024, 10.08.2024 |
| 02 | ಕೇಂದ್ರ ಕಾರಾಗೃಹ ಬಳ್ಳಾರಿ | 16.12.2021, 19.05.2022, 15.07.2022, 21.03.2023, 23.04.2024, 24.07.2024 |
| 03 | ಜಿಲ್ಲಾ ಕಾರಾಗೃಹ ಚಿಕ್ಕಮಗಳೂರು | 14.03.2023, 21.07.2023, 25.09.2023, 22.03.2024, 09.08.2024 |
| 04 | ಜಿಲ್ಲಾ ಕಾರಾಗೃಹ ಹಾವೇರಿ | 06.04.2021, 09.06.2022, 27.09.2022, 21.03.2023, 27.05.2023, 03.09.2023, 30.1.2024, |
| 05 | ಜಿಲ್ಲಾ ಕಾರಾಗೃಹ ಬೀದರ್ | 14.08.2024, 21.8.2024, 18.11.2024 |
| 06 | ಜಿಲ್ಲಾ ಕಾರಾಗೃಹ ರಾಮನಗರ | 30.03.2021, 28.06.2021, 21.04.2023 26.1.2024, 25.03.2024 |
| 07 | ಜಿಲ್ಲಾ ಕಾರಾಗೃಹ ಚಿಕ್ಕಬಳ್ಳಾಪುರ | 04.06.2022, 17.03.2023, 20.07.2023, 29.01.2024 |
| 08 | ಜಿಲ್ಲಾ ಕಾರಾಗೃಹ ತುಮಕೂರು | 03.12.2021, 09.03.2022, 18.03.2023, 27.04.2023, 25.08.2023, 22.02.2024 |

– ಕಾರಾಗೃಹಗಳಲ್ಲಿ ಪ್ರತಿನಿತ್ಯ ಬೀಗಮುದ್ರೆ ತೆರವಿನ ಮತ್ತು ಬೀಗಮುದ್ರೆ ಸಮಯದಲ್ಲಿ ತಪಾಸಣೆ ಜೊತೆಗೆ ಅನಿರೀಕ್ಷಿತ ತಪಾಸಣೆಯನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವಂತೆ ವಿವಿಧ ಸುತ್ತೋಲೆಗಳಲ್ಲಿ ಸೂಚಿಸಲಾಗಿದ್ದು ಅದರಂತೆ

ಎಲ್ಲಾ ಕಾರಾಗೃಹಗಳಲ್ಲಿ ತಪಾಸಣಾ ಕ್ರಮವಹಿಸಲಾಗುತ್ತಿದೆ.

- ರಾಜ್ಯದ ಕಾರಾಗೃಹಗಳಲ್ಲಿ ಮೊಬೈಲ್ ಮತ್ತು ಇನ್ನಿತರೇ ನಿಷೇಧಿತ ವಸ್ತುಗಳನ್ನು ಪತ್ತೆ ಹಚ್ಚಲು ಕಾಲಕಾಲಕ್ಕೆ ಪೊಲೀಸ್ ಇಲಾಖೆ ಮತ್ತು ಕಾರಾಗೃಹ ಇಲಾಖೆಯ ಸಿಬ್ಬಂದಿಗಳಿಂದ ತಪಾಸಣೆ ಕೈಗೊಳ್ಳಲಾಗುತ್ತಿದೆ.
- Karnataka Prison (Amendment) Act -2022 ನಂತರ ದಿನಾಂಕ: 05-04-2022 ರಿಂದ 15-03-2025 ರವರೆಗೆ ರಾಜ್ಯದ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳ ಕುರಿತಂತೆ ವಿವಿಧ ಕಾರಾಗೃಹಗಳಲ್ಲಿ 251 **FIR** ದಾಖಲಾಗಿರುತ್ತದೆ. ಕಾರಾಗೃಹ ಅಧಿಕಾರಿ ಸಿಬ್ಬಂದಿಗಳ ತಪಾಸಣೆಯಲ್ಲಿ 133 ಹಾಗೂ ಪೊಲೀಸ್ ಅಧಿಕಾರಿ ಸಿಬ್ಬಂದಿಗಳ ತಪಾಸಣೆಯಲ್ಲಿ 51, ಕೆ.ಎಸ್.ಐ.ಎಸ್.ಎಫ್ ಅಧಿಕಾರಿ ಸಿಬ್ಬಂದಿಗಳ ತಪಾಸಣೆಯಲ್ಲಿ 67 ಒಟ್ಟು 251 ಪ್ರಕರಣಗಳು ದಾಖಲಾಗಿರುತ್ತವೆ.

| Sl. No | Name of the Prison | Number of cases | Name of the Prison | Number of cases |
|---|---|---|---|---|
| 01 | Central Prison, Bengaluru | 69 | Taluka Prison, Bailahongala | - |
| 02 | Open Prison, Devanahalli | 01 | District Prison, Karwar | 03 |
| 03 | District Prison, Ramanagara | 05 | Taluka Prison, Haliyala | - |
| 04 | District Prison, Kolar | 02 | Central Prison, Dharwad | 07 |
| 05 | Taluka Prison, K.G.F. | 04 | Taluka Prison, Hubballi | - |
| 06 | District Prison, Tumakuru | 03 | District Prison, Haveri | - |
| 07 | Taluka Prison, Tiptur | - | District Prison, Gadag | - |
| 08 | District Prison, Chikkaballapura | - | Central Prison, Vijayapura | 09 |
| 09 | Taluka Prison, Chinthamani | 02 | District Prison, Bagalkote | - |
| 10 | Central Prison, Mysuru | 26 | Taluka Prison, Jamkhandi | - |
| 11 | Taluka Prison, K.R. Nagar | - | Central Prison, Kalaburagi | 39 |
| 12 | Taluka Prison, Nanjangud | - | District Prison, Yadgiri | - |
| 13 | District Prison, Chamarajnagar | - | Taluka Prison, Shorapur | 01 |
| 14 | District Prison, Mandya | 05 | District Prison, Bidar | - |
| 15 | District Prison, Hassan | 11 | Taluka Prison, Aurad | - |
| 16 | Taluka Prison, Sakaleshpur | - | Taluka Prison, Humnabad | - |
| 17 | District Prison, Madikeri | 01 | Central Prison, Ballari | 19 |

| | | | | | | |
|---|---|---|---|---|---|---|
| | | | 18 | Central Prison, Shivamogga | 16 | Taluka Prison, Hosapete | 01 |
| | | | 19 | Women Central Prison, Shivamogga | - | Taluka Prison, Hadagali | 01 |
| | | | 20 | Taluka Prison, Sagara | - | Taluka Prison, Harappanahalli | - |
| | | | 21 | District Prison, Mangaluru | 09 | District Prison, Raichur | - |
| | | | 22 | District Prison, Chikkamagaluru | 02 | Taluka Prison, Devadurga | - |
| | | | 23 | District Prison, Udupi | 01 | Taluka Prison, Lingasugur | - |
| | | | 24 | District Prison, Davangere | 02 | District Prison, Koppal | - |
| | | | 25 | District Prison, Chitradurga | 01 | Revenue Prison, Sirsi | - |
| | | | 26 | Central Prison, Belagavi | 11 | Revenue Prison, Sedam | - |
| | | | 27 | Taluka Prison, Gokak | - | Revenue Prison, Madhugiri | - |
| | | | | | | TOTAL | 251 |

| | | | |
|---|---|---|---|
| | | iii) ಕಾರಾಗೃಹಗಳಲ್ಲಿ ವಶಪಡಿಸಿಕೊಳ್ಳಲಾಗಿದ್ದ ಮಾದಕ ವಸ್ತುಗಳು, ಮೊಬೈಲ್‌ಗಳು, ಸಿಮ್ ಕಾರ್ಡ್‌ಗಳು, ಪೆನ್‌ಡ್ರೈವ್‌ಗಳು, ಸ್ಕ್ರೂಡ್ರೈವರ್‌ಗಳ ಕುರಿತಂತೆ ಇಲಾಖೆಯು ನಡೆಸುತ್ತಿರುವ ವಿಚಾರಣೆಯನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸಿ, ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಯವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಹಾಗೂ ಆ ಬಗ್ಗೆ ವರದಿಯನ್ನು ಜರೂರಾಗಿ ನೀಡುವಂತೆ ಸಮಿತಿಯು ಆಗ್ರಹಿಸುತ್ತದೆ. | 2012 ರಿಂದ 2024 ರ ಅವಧಿಯಲ್ಲಿ ನಿಷೇಧಿತ ಮತ್ತು ಮಾದಕ ವಸ್ತುಗಳು ದೊರೆತ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೈಗೊಂಡ ಶಿಸ್ತು ಕ್ರಮದ ವಿವರ :-<br>– ಒಟ್ಟು ಪ್ರಕರಣ – 58<br>– ಶಿಸ್ತು ಕ್ರಮಕ್ಕೆ ಒಳಗಾದ / ವಿಚಾರಣೆ ಎದುರಿಸುತ್ತಿರುವ<br>– ಅಧಿಕಾರಿ/ ಸಿಬ್ಬಂದಿಗಳು – 312<br>– ದಂಡನೆಗೊಳಗಾದ ಅಧಿಕಾರಿ/ಸಿಬ್ಬಂದಿಗಳು – 93<br>– **(ಸೇವೆಯಿಂದ ಬಿಡುಗಡೆಗೊಂಡವರು – 02)**<br>– ದೋಷಮುಕ್ತರಾದ ಅಧಿಕಾರಿ / ಸಿಬ್ಬಂದಿಗಳು – 05<br>– ವಿಚಾರಣೆ ಬಾಕಿಯಿರುವ ಅಧಿಕಾರಿ / ಸಿಬ್ಬಂದಿಗಳು – 214 |
| 3) | (ಸಿ) ಸಿ.ಸಿ.ಟಿ.ವಿ. ಕ್ಯಾಮರಾಗಳ ಅಳವಡಿಕೆ | ಕಾರಾಗೃಹಗಳ ಆವರಣದೊಳಗೆ ಕೈದಿಗಳ ಚಲನ-ವಲನಗಳ ಮೇಲೆ ಕಟ್ಟುನಿಟ್ಟಾದ ನಿಗಾ ವಹಿಸಲು ಸಿ.ಸಿ.ಟಿ.ವಿ. ಮತ್ತಿತರ ಆಧುನಿಕ ಉಪಕರಣಗಳನ್ನು ಅಳವಡಿಸಲು ಸಮಿತಿಯು 2009ರ ವರದಿಯಲ್ಲಿ ಶಿಫಾರಸ್ಸು ನೀಡಿದ್ದಾಗ್ಯೂ ಸಹ ಇಲಾಖೆಯು | – ರಾಜ್ಯದ ಕೇಂದ್ರ, ಜಿಲ್ಲಾ ಮತ್ತು ತಾಲ್ಲೂಕು ಕಾರಾಗೃಹಗಳಲ್ಲಿ ಬಂದಿಗಳ ಚಲನ–ವಲನಗಳ ಮೇಲೆ ಕಟ್ಟುನಿಟ್ಟಾದ ನಿಗಾವಹಿಸಲು ಒಟ್ಟು 1734 ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.<br>– ಸಂಬಂಧಪಟ್ಟ ಕಾರಾಗೃಹಗಳ ಅಧೀಕ್ಷಕರು ಸಿಸಿಟಿವಿ ಕ್ಯಾಮೆರಾಗಳನ್ನು ಕಾಲಕಾಲಕ್ಕೆ ದುರಸ್ತಿ ಮತ್ತು ನಿರ್ವಹಣೆಯನ್ನು ಕೈಗೊಳ್ಳುತ್ತಿರುತ್ತಾರೆ.<br>– ಕೇಂದ್ರ ಕಾರಾಗೃಹ ಬೆಂಗಳೂರಿನಲ್ಲಿರುವ 280 ಸಂಖ್ಯೆ ಸಿಸಿಟಿವಿಗಳಿಗೆ **AI-Powered Audio Video** |

| | | | |
|---|---|---|---|
| | | ವಿಳಂಬ ನೀತಿಯನ್ನು ಅನುಸರಿಸಿ 2013-14ರ ಅವಧಿಯಲ್ಲಿ ಸಿ.ಸಿ.ಟಿ.ವಿ. ಗಳ ಅಳವಡಿಕೆಯನ್ನು ಪ್ರಾರಂಭಿಸಿದ್ದಕ್ಕೆ ಸಮಿತಿಯು ಅಸಮಾಧಾನ ವ್ಯಕ್ತಪಡಿಸುತ್ತದೆ.<br>ಸಿ.ಸಿ.ಟಿ.ವಿ. ಕ್ಯಾಮರಾಗಳ ಅಳವಡಿಕೆಯನ್ನು ಎಲ್ಲಾ ಕಾರಾಗೃಹಗಳಿಗೂ ವಿಸ್ತರಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಹಾಗೂ ನಿಯಮಿತವಾಗಿ ಅವುಗಳ ನಿರ್ವಹಣೆಯನ್ನು ಖಚಿತ ಪಡಿಸಿಕೊಳ್ಳಲು ಸೂಕ್ತ ಕ್ರಮ ವಹಿಸುವಂತೆ ಇಲಾಖೆಗೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. | Analytics System ಗಳನ್ನು ಫೆಬ್ರವರಿ 2025 ರಲ್ಲಿ ಅಳವಡಿಸಲಾಗಿದೆ.<br>- 2025-26ನೇ ಆಯವ್ಯಯದಲ್ಲಿ 1067.00 ಲಕ್ಷ ಅನುದಾನದಲ್ಲಿ 1067 ಸಿ.ಸಿ.ಟಿ.ವಿ.ಗಳು ಹಾಗೂ ಪೂರಕ ಉಪಕರಣಗಳನ್ನು ಖರೀದಿಸಲು ಪ್ರಸ್ತಾವನೆ ಸಲ್ಲಿಸಿದೆ.<br>- ಪ್ರತಿನಿತ್ಯ ಉಪಕರಣಗಳ ಕಾರ್ಯಕ್ಷಮತೆಯ ಬಗ್ಗೆ ಕಾರಾಗೃಹಗಳಿಂದ ವರದಿ ಪಡೆಯಲಾಗುತ್ತಿದೆ. |
| 4) | (ಡಿ) ಮೊಬೈಲ್ ಜಾಮರ್‌ಗಳ ಅಳವಡಿಕೆ | i) ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಮೊಬೈಲ್ ಜಾಮರ್ಗಳನ್ನು ಅಳವಡಿಸಿದ್ದ ವಿವರಗಳನ್ನು ಇಲಾಖೆಯು ತನ್ನ ಉತ್ತರದಲ್ಲಿ ನೀಡಿದ್ದನ್ನು ಸಮಿತಿಯು ಪರಾಮರ್ಶಿಸಿತು. ಬೆಂಗಳೂರಿನಲ್ಲಿ-19, ಮೈಸೂರಿನಲ್ಲಿ-04, ಕಲಬುರಗಿಯಲ್ಲಿ-10 ಅಳವಡಿಸಲಾಗಿದ್ದ ಜಾಮರ್ಗಳು ಕಾಯನಿರ್ವಹಿಸದಿರುವುದಕ್ಕೆ ಸಮಿತಿಯು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿ, ಜರೂರಾಗಿ ಸದರಿ ಉಪಕರಣಗಳನ್ನು ದುರಸ್ತಿಪಡಿಸುವಂತೆ ಇಲಾಖೆಗೆ ಸೂಚಿಸುತ್ತದೆ. ಮೊಬೈಲ್ ಜ್ಯಾಮರ್ಗಳ ಉಪಕರಣಗಳ ಬಗ್ಗೆ ವಾರ್ಷಿಕ ನಿರ್ವಹಣೆಯ ಕಾರ್ಯವನ್ನು ಆದ್ಯತೆಯ ಮೇರೆಗೆ ಇಲಾಖೆಯು ಕೈಗೊಳ್ಳುವಂತೆ ಸಮಿತಿಯು ಆಗ್ರಹಿಸುತ್ತದೆ. ಕಾರಾಗೃಹಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ / | - ರಾಜ್ಯದ ಕಾರಾಗೃಹಗಳಲ್ಲಿ ಅಳವಡಿಸಲಾಗಿರುವ ಮೊಬೈಲ್ ಜಾಮರ್ ಉಪಕರಣಗಳು 2ಜಿ ತಂತ್ರಾಂಶವನ್ನು ಒಳಗೊಂಡಿದ್ದು, ಪ್ರಸ್ತುತ 4ಜಿ/5ಜಿ ತಂತ್ರಾಂಶಕ್ಕೆ ಉನ್ನತೀಕರಿಸಲು M/s TCIL ನವದೆಹಲಿರವರಿಗೆ ಕಾರ್ಯದೇಶ ನೀಡಲಾಗಿದೆ.<br>- ರಾಜ್ಯದ 08 ಕಾರಾಗೃಹಗಳಲ್ಲಿರುವ 66 ಸಂಖ್ಯೆ ಹಳೆಯ ಮೊಬೈಲ್ ಜಾಮಾರ್‌ಗಳ ರಿಪೇರಿ, 4ಜಿ/5ಜಿ ಜಾಮಾರ್‌ಗಳನ್ನಾಗಿ ಮೇಲ್ದರ್ಜೆ ಮತ್ತು 03 ವರ್ಷಗಳ ವಾರ್ಷಿಕ ನಿರ್ವಹಣೆ ಕೈಗೊಳ್ಳಲು ಆದೇಶಿಲಾಗಿದೆ.<br>- ಕೇಂದ್ರ ಕಾರಾಗೃಹ ಬೆಂಗಳೂರು ಮತ್ತು ಬೆಳಗಾವಿಯಲ್ಲಿರುವ ಮೊಬೈಲ್ ಜಾಮಾರ್‌ಗಳ ರಿಪೇರಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಮುಕ್ತಾಯಗೊಂಡಿರುತ್ತದೆ.<br>- ಉಳಿದ 08 ಕಾರಾಗೃಹಗಳ ಕಾಮಾಗಾರಿ ಪ್ರಗತಿಯಲ್ಲಿದೆ.<br>- ಮೊಬೈಲ್ ಜಾಮರ್ ಉಪಕರಣಗಳ ತಾಂತ್ರಿಕ ವೈಶಿಷ್ಟ್ಯಯ ಮತ್ತು ಕಾರ್ಯ ನಿರ್ವಹಿಸುವ ಕುರಿತು ಕಾರಾಗೃಹಗಳಲ್ಲಿ ತಾಂತ್ರಿಕ ವಿದ್ಯಾರ್ಹತೆ ಹೊಂದಿರುವ ಅಧಿಕಾರಿ / ಸಿಬ್ಬಂದಿಗಳಿಗೆ ಅಳವಡಿಕೆ ಸಂಸ್ಥೆಗಳಿಂದ ನಿರ್ವಹಣೆಯ ಕುರಿತು ಮಾರ್ಗದರ್ಶನ ಕೊಡಿಸಲಾಗಿದೆ. |

| | | | |
|---|---|---|---|
| | | ಸಿಬ್ಬಂದಿಯವರಿಗೆ ಉಪಕರಣಗಳ ಬಗ್ಗೆ ತಾಂತ್ರಿಕ ನೈಪುಣ್ಯತೆಯನ್ನು ಹೆಚ್ಚಿಸಲು, ಇಲಾಖೆಯು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಸಮಿತಿಯು ಶಿಫಾರಸ್ಸು ನೀಡುತ್ತದೆ. | |
| | | ii) ಮೊಬೈಲ್ ಜ್ಯಾಮರ್ಗಳ ಪರಿಣಾಮಕಾರಿ ಕಾರ್ಯಾಚರಣೆಗೆ ಸಂಬಂಧಿಸಿದ ಸಮನ್ವಯ ವಿಷಯಗಳನ್ನು ಇಲಾಖೆಯು ಪರೀಕ್ಷಿಸಿದ ನಂತರ ರಾಜ್ಯದಲ್ಲಿನ ಎಲ್ಲಾ ಕಾರಾಗೃಹಗಳಲ್ಲಿ ಉನ್ನತೀಕರಿಸುವ ಕಾರ್ಯವನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳುವಂತೆ ಇಲಾಖೆಗೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. | - ಹಾಲಿ ಇರುವಂತಹ ಮೊಬೈಲ್ ಜಾಮರ್‌ಗಳ ಪರಿಣಾಮಕಾರಿ ಕಾರ್ಯಾಚರಣೆಗೆ ಸಂಬಂಧಿಸಿದ ಸಮನ್ವಯ ವಿಷಯಗಳನ್ನು ಇಲಾಖೆಯು ಪರೀಕ್ಷಿಸಿದ ನಂತರ ಇತರೇ ಕಾರಾಗೃಹಗಳಿಗೂ ಅಳವಡಿಸಲು ಕ್ರಮವಹಿಸಲಾಗುವುದು. |
| | | iii) ಮೊಬೈಲ್ ಸೇವೆ ಒದಗಿಸುತ್ತಿರುವ ಸೇವಾ ಪೂರೈಕೆದಾರರಲ್ಲಿ, ಕೆಲವರು ನಿಗದಿತ ಮಟ್ಟವನ್ನು ಮೀರಿ ತರಂಗಾಂತರಗಳನ್ನು ಹೆಚ್ಚಿಸುವುದರಿಂದ, ಕಾರಾಗೃಹಗಳಲ್ಲಿ ಜ್ಯಾಮರ್ಗಳನ್ನು ಅಳವಡಿಸಿದ್ದರೂ ಸಿಗ್ನಲ್‌ಗಳು ದೊರೆಯುತ್ತಿವೆ ಎಂದು ಜ್ಯಾಮರ್ ಅಳವಡಿಕೆದಾರರು ತಿಳಿಸಿದ್ದನ್ನು ಇಲಾಖಾ ಮುಖ್ಯಸ್ಥರು ಸಮಿತಿಗೆ ಮಾಹಿತಿ ಒದಗಿಸಿದ್ದು, ಮೊಬೈಲ್‌ಗಳಲ್ಲಿ ತರಂಗಾಂತರಗಳನ್ನು ಹೆಚ್ಚಿಸಿದ್ದರೂ ಕಾರಾಗೃಹಗಳಲ್ಲಿ ಸಿಗ್ನಲ್‌ಗಳು ಸಿಗದಿರುವ ರೀತಿಯಲ್ಲಿ ಅವುಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವಂತಹ ವ್ಯವಸ್ಥೆಯನ್ನು ಅಳವಡಿಸಲು ಸಂಬಂಧಪಟ್ಟ ಸೇವಾ ಪೂರೈಕೆದಾರರಿಗೆ ಇಲಾಖೆಯು ಕಟ್ಟುನಿಟ್ಟಿನ ನಿರ್ದೇಶನ ನೀಡುವಂತೆ | - ರಾಜ್ಯದ ಕಾರಾಗೃಹಗಳಿಗೆ 4ಜಿ/5ಜಿ ತಂತ್ರಾಂಶದ ಮೊಬೈಲ್ ಜಾಮರ್‌ಗಳನ್ನು ಅಳವಡಿಸಿ ಕಾರಾಗೃಹಗಳಲ್ಲಿ ಮೊಬೈಲ್ ಸಿಗ್ನಲ್‌ಗಳು ದೊರೆಯದಂತೆ ಪರಿಣಾಮಕಾರಿಯಾಗಿ ತಡೆಗಟ್ಟಲು ಕ್ರಮವಹಿಸಲಾಗುತ್ತಿದೆ.<br>- ರಾಜ್ಯದ 07 ಕಾರಾಗೃಹಗಳಲ್ಲಿ ಅತ್ಯಾಧುನಿಕ 11 ಸಂಖ್ಯೆ T-HCBS (Tower of Hormonious call blocking system) ಗಳನ್ನು ಅಳವಡಿಸಲು ಕ್ರಮವಹಿಸಲಾಗಿದ್ದು ಆದರಲ್ಲಿ ಕೇಂದ್ರ ಕಾರಾಗೃಹ ಬೆಂಗಳೂರಿನಲ್ಲಿ 03 ಸಂಖ್ಯೆ ಟವರ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಉಳಿದ 08 ಸಂಖ್ಯೆಯ ಟವರ್ ಗಳ ಸ್ಥಾಪನೆ ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಅನುಮತಿ ನಿರೀಕ್ಷಿಸಲಾಗಿದೆ. |

| | | | |
|---|---|---|---|
| | | ಸಮಿತಿಯು ಶಿಫಾರಸ್ಸು ಮಾಡುತ್ತದೆ. | |
| 5) | 4.1.2.2<br>ವಿಚಾರಣಾಧೀನ ಕೈದಿಗಳನ್ನು ನ್ಯಾಯಾಲಯದಲ್ಲಿ ಹಾಜರಿಗೊಳಿಸುವುದು. | i) ವಿಚಾರಣಾಧೀನ ಕೈದಿಗಳನ್ನು ನ್ಯಾಯಾಲಯಗಳಿಗೆ ಹಾಜರುಪಡಿಸುವಲ್ಲಿ ಉಂಟಾಗುತ್ತಿರುವ ವಿಪರೀತ ವಿಳಂಬವನ್ನು ಪರಾಮರ್ಶಿಸಿ, ಸಮಿತಿಯು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತದೆ. ಇಲಾಖೆಯಿಂದ ಪ್ರತ್ಯೇಕವಾಗಿ ಪೊಲೀಸ್ ಬೆಂಗಾವಲು ಪಡೆಯನ್ನು ನೇಮಕಾತಿ ಮಾಡದಿದರುವುದನ್ನು ಗಮನಿಸಿ, ನಿರ್ದಿಷ್ಟ ಉದ್ದೇಶಕ್ಕೆ ಅಗತ್ಯವಾದ ಸಿಬ್ಬಂದಿಯನ್ನು ನೇಮಿಸುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. ಬೆಂಗಾವಲಿನ ಅಸಮರ್ಪಕ ವ್ಯವಸ್ಥೆಯಿಂದಾಗಿ ಕೈದಿಗಳನ್ನು ನ್ಯಾಯಾಲಯಗಳಿಗೆ ಹಾಜರುಪಡಿಸುವಲ್ಲಿ ಉಂಟಾಗುತ್ತಿರುವ ವಿಳಂಬದಿಂದ ಕೈದಿಗಳು ಅನುಭವಿಸುತ್ತಿರುವ ಮಾನಸಿಕ ವೇದನೆ/ ತೊಂದರೆಗಳನ್ನು ಪರಿಹರಿಸಲು ದೋಷರಹಿತ ಪದ್ಧತಿಯನ್ನು ಇಲಾಖೆಯು ಜಾರಿಗೊಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಸಮಿತಿಯು ತಾಕೀತು ಮಾಡುತ್ತದೆ. ಮುಂದುವರೆದು, ವಿಚಾರಣಾಧೀನ ಕೈದಿಗಳಿಗೆ ಸಂಬಂಧಿಸಿದ ಮಾಸಿಕ ವರದಿಯನ್ನು ನ್ಯಾಯಾಲಯಕ್ಕೆ ನಿಯತವಾಗಿ ಸಲ್ಲಿಸುವಂತೆ ಇಲಾಖೆಗೆ ಸೂಚಿಸುತ್ತದೆ. | – ರಾಜ್ಯದ ಎಲ್ಲಾ ಕೇಂದ್ರ / ಜಿಲ್ಲಾ / ತಾಲ್ಲೂಕು ಕಾರಾಗೃಹಗಳಲ್ಲಿ 330 ವಿಡಿಯೋ ಕಾನ್ಫರೆನ್ಸ್ ಉಪಕರಣಗಳನ್ನು ಈಗಾಗಲೇ ಅಳವಡಿಸಲಾಗಿದೆ.<br>– ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಕೋರಿಕೆಯಂತೆ ಬಂದಿಗಳನ್ನು ವಿಚಾರಣಾ ದಿನಾಂಕಗಳಂದು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರುಪಡೆಯಲು ರಿಜಿಸ್ಟ್ರಾರ್ ಜನರಲ್, ಗೌ। ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರು ಈಗಾಗಲೇ ಎಲ್ಲಾ ಅಧೀನ ನ್ಯಾಯಾಲಯಗಳಿಗೆ ನಿರ್ದೇಶನವನ್ನು ನೀಡಿರುತ್ತಾರೆ.<br>– ಬಂದಿಗಳನ್ನು ವಿಚಾರಣಾ ದಿನಾಂಕಗಳಂದು ಗೌ। ನ್ಯಾಯಾಲಯಗಳ ಮುಂದೆ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಗುತ್ತಿದೆ.<br>– 2024–25ನೇ 100.00 ಲಕ್ಷ ಅನುದಾನದಲ್ಲಿ 27 ಸಂಖ್ಯೆ ವಿಡಿಯೋ ಕಾನ್ಫರೆನ್ಸ್‌ಗಳನ್ನು ಖರೀದಿಸಲು ಕಾರ್ಯದೇಶ ನೀಡಲಾಗಿದೆ.<br>– ಪ್ರತಿನಿತ್ಯ ಬಂದಿಗಳ ವಿಡಿಯೋ ಕಾನ್ಫರೆನ್ಸ್ ಕಾರ್ಯಕ್ಷಮತೆಯ ಬಗ್ಗೆ ಕಾರಾಗೃಹಗಳಿಂದ ವರದಿ ಪಡೆಯಲಾಗುತ್ತಿದೆ.<br>– ವಿಚಾರಣಾಧೀನ ಖೈದಿಗಳಿಗೆ ಸಂಬಂಧಪಟ್ಟಂತೆ ಮಾಸಿಕ ವರದಿಗಳನ್ನು ಗೌ। ನ್ಯಾಯಾಲಯಗಳಿಗೆ ಸಲ್ಲಿಸಲಾಗುತ್ತಿದೆ.<br>– ದಿನಾಂಕ:01–01–2020 ರಿಂದ 31–12–2024 ರವರೆಗೆ ಬಂದಿಗಳನ್ನು ಗೌ। ನ್ಯಾಯಾಲಯಗಳಿಗೆ ವಿಡೀಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿತ್ತಿದ್ದು, ಬಂದಿಗಳ ಹಾಜರಾತಿಯಲ್ಲಿ ಯಾವುದೇ ವಿಳಂಭವಾಗುತ್ತಿರುವುದಿಲ್ಲ. ವಿವರ ಈ ಕೆಳಕಂಡಂತಿದೆ. |

| Year | Nos. of prisoners tobe produced to courts physically | Nos. of prisoners actually produced before the courts | Percentage of Physical Production | Nos. of prisoners produced through VC | Nos. of prisoners actually produced before the courts | Percentage of VC production |
|---|---|---|---|---|---|---|
| 2020-2021 | 67544 | 28993 | 43% | 86276 | 79842 | 93% |
| 2021-2022 | 59292 | 33879 | 57% | 149120 | 138929 | 93% |
| 2022-2023 | 102752 | 69051 | 67% | 164192 | 157694 | 96% |

| | | | | | | |
|---|---|---|---|---|---|---|
| 2023-2024 | 111433 | 74984 | 67% | 226525 | 212523 | 94% |
| 2024-2025 | 102478 | 55651 | 54% | 187709 | 178650 | 95% |

| | | | |
|---|---|---|---|
| 6) | (ಎ) ಲೋಕ್ ಅದಾಲತ್ ಶಿಬಿರಗಳು | 2010–15 ರ ಅವಧಿಯಲ್ಲಿ, ಮಹಾಲೇಖಪಾಲರು ಪರೀಕ್ಷಾ-ತನಿಖೆ ನಡೆಸಿದ ಘಟಕಗಳಲ್ಲಿ, ಮೂರು ಕೇಂದ್ರಿಯ ಕಾರಾಗೃಹ ಹಾಗೂ ಎರಡು ಜಿಲ್ಲಾ ಕಾರಾಗೃಹಗಳಲ್ಲಿ ಏಳು ಲೋಕ್ ಅದಾಲತ್ ಶಿಬಿರಗಳು ನಡೆದಿರುವುದನ್ನು ಸಮಿತಿಯು ವಿಶ್ಲೇಷಿಸಿತು. ಅಲ್ಲದೆ, ಮೂರು ತಿಂಗಳಿಗೂ ಮೀರಿ ಇತ್ಯರ್ಥವಾಗದ 3,283 ಮೊಕದ್ದಮೆಗಳಲ್ಲಿ ಕೇವಲ 448 ಮೊಕದ್ದಮೆಗಳನ್ನು ಲೋಕ್ ಅದಾಲತ್‌ಗೆ ಒಪ್ಪಿಸಿದ್ದಕ್ಕೆ ಇಲಾಖೆಯು ಸಾಧಿಸಿರುವ ಪ್ರಗತಿಯು ಅತ್ಯಲ್ಪವಾಗಿತ್ತೆಂದು ಸಮಿತಿಯು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ, ಇಲಾಖೆಯು ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ಹೆಚ್ಚು ಪರಿಣಾಮಕಾರಿಯಾಗಿ ಸಮನ್ವಯಿಸಿ, ಪ್ರಕರಣಗಳನ್ನು ವಿಲೇವಾರಿ ಮಾಡಲು ಅಗತ್ಯವಾದ ವಾರ್ಷಿಕ ಗುರಿಯನ್ನು ನಿಗದಿಪಡಿಸಿ, ಅಧಿಕ ಪ್ರಮಾಣದ ಪ್ರಕರಣಗಳ ವಿಲೇವಾರಿಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. | – ಲೋಕ್ ಅದಾಲತ್ ಶಿಬಿರಗಳನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಕಾರದೊಂದಿಗೆ ನಡೆಸಲು ಅಗತ್ಯ ಕ್ರಮವಹಿಸಲಾಗುತ್ತದೆ.<br>– ವಿಚಾರಣಾ ಬಂದಿಗಳ ಪ್ರಕರಣಗಳ ತ್ವರಿತ ವಿಲೇವಾರಿಗೆ ಅಗತ್ಯ ಕ್ರಮ ವಹಿಸಲಾಗುತ್ತಿದೆ.<br>– ಗೌ॥ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಯನ್ವಯ ಎಲ್ಲಾ ಕಾರಾಗೃಹಗಳಲ್ಲಿ Jail Legal Aid Clinics ಕಾರ್ಯನಿರ್ವಹಿಸುತ್ತಿದ್ದು, ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ವಕೀಲರುಗಳು ನಿಯಮಿತವಾಗಿ ಕಾರಾಗೃಹಗಳಿಗೆ ಭೇಟಿ ನೀಡಿ ಬಂದಿಗಳಿಗೆ ಕಾನೂನು ನೆರವು ಮತ್ತು ಅರಿವನ್ನು ಒದಗಿಸುತ್ತಿರುತ್ತಾರೆ.<br>– ಗೌ॥ ಉಚ್ಚ ನ್ಯಾಯಾಲಯದ ನಿರ್ದೇಶನುಸಾರ ಕಾರಾಗೃಹಗಳಲ್ಲಿ ಬಂದಿಗಳು e-Filing ಮೂಲಕ ಜಾಮೀನು ಅರ್ಜಿಗಳನ್ನು ಗೌ॥ ನ್ಯಾಯಾಲಯಗಳಿಗೆ ಸಲ್ಲಿಸಲು ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಈವರೆವಿಗೂ ರಾಜ್ಯದ ವಿವಿಧ ಕಾರಾಗೃಹಗಳಿಂದ ಸುಮಾರು 17,856 ಬಂದಿಗಳನ್ನು e-Filing ವ್ಯವಸ್ಥೆಯ ಮೂಲಕ ಕಾರಾಗೃಹಗಳಿಂದ ಜಾಮೀನಿನ ಮುಖಾಂತರ ಬಿಡುಗಡೆಗೊಳಿಸಲಾಗಿರುತ್ತದೆ.<br>– ಗೌ॥ ಸರ್ವೋಚ್ಚ ನ್ಯಾಯಾಲಯದ ನಿರ್ದೇಶಾನುಸಾರ ಹಾಗೂ BNSS 2023 ಕಲಂ 479 ರ ಪ್ರಕಾರ ಅರ್ಹ ವಿಚಾರಣಾ ಬಂದಿಗಳನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸುವ ಸಂಬಂಧ, ಸಂಬಂಧಿಸಿದ ಗೌ॥ ನ್ಯಾಯಾಲಯಗಳಿಗೆ ಮಾಹಿತಿಯನ್ನು ನೀಡಿ ಅಗತ್ಯ ಕ್ರಮವಹಿಸಲಾಗುತ್ತಿದೆ. |
| 7) | (ಬಿ) ವಿಚಾರಣಾಧೀನ ಕೈದಿಗಳನ್ನು ವಿಡಿಯೋ ಕಾನ್ಫರೆನ್ಸಿಗೆ | i) ಮಾನ್ಯ ಉಚ್ಚ ನ್ಯಾಯಾಲಯದ ತಾಂತ್ರಿಕ ಸಲಹಾ ಸಮಿತಿಯು, ರಾಜ್ಯದ ಎಲ್ಲಾ ಕಾರಾಗೃಹಗಳಿಗೆ ಹಾಗೂ ಸಂಬಂಧಿಸಿದ ಎಲ್ಲಾ ನ್ಯಾಯಾಲಯಗಳಿಗೆ ಅತ್ಯಾಧುನಿಕ ತಂತ್ರಜ್ಞಾನದ | – ರಾಜ್ಯದ ಎಲ್ಲಾ ಕೇಂದ್ರ / ಜಿಲ್ಲಾ / ತಾಲ್ಲೂಕು ಕಾರಾಗೃಹಗಳಲ್ಲಿ 330 ವಿಡಿಯೋ ಕಾನ್ಫರೆನ್ಸ್ ಉಪಕರಣಗಳನ್ನು ಈಗಾಗಲೇ ಅಳವಡಿಸಲಾಗಿದೆ.<br>– ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಕೋರಿಕೆಯಂತೆ ಬಂದಿಗಳನ್ನು ವಿಚಾರಣಾ ದಿನಾಂಕಗಳಂದು ವಿಡಿಯೋ ಕಾನ್ಫಿರೆನ್ಸ್ ಮುಖಾಂತರ ಹಾಜರುಪಡೆಯಲು ರಿಜಿಸ್ಟ್ರಾರ್ ಜನರಲ್ – ಗೌ॥ |

<table>
<tr><td></td><td>ಹಾಜರುಪಡಿಸುವುದು.</td><td>ವಿಡಿಯೋ ಕಾನ್ಫರೆನ್ಸಿಂಗ್ ಉಪಕರಣಗಳನ್ನು ಅಳವಡಿಸಲು ಇಲಾಖೆಗೆ ನಿರ್ದೇಶನ ನೀಡಿದ್ದನ್ನು ಪರಾಮರ್ಶಿಸಿ, ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ವ್ಯವಸ್ಥೆಯನ್ನು ಇ-ಗೌರ್ನೆನ್ಸ್ ಇಲಾಖೆಯ ಸಹಯೋಗದೊಂದಿಗೆ ಹೆಚ್ಚಿನ ಪ್ರಮಾಣದಲ್ಲಿ ಬಳಸಲು ಇಲಾಖೆಯು ಆದ್ಯತೆಯ ಮೇರೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಮಿತಿಯು ಸೂಚಿಸುತ್ತದೆ. ಈ ನಿಟ್ಟಿನಲ್ಲಿ, ಸರ್ಕಾರ ಹಾಗೂ ನ್ಯಾಯಾಲಯದ ನಡುವೆ ಸಮನ್ವಯವನ್ನು ಸಾಧಿಸಲು ಇಲಾಖೆಯು ಪ್ರಾಮಾಣಿಕ ಪ್ರಯತ್ನ ಮಾಡತಕ್ಕದ್ದೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.</td><td>ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರು ಈಗಾಗಲೇ ಎಲ್ಲಾ ಅಧೀನ ನ್ಯಾಯಾಲಯಗಳಿಗೆ ನಿರ್ದೇಶನವನ್ನು ನೀಡಿರುತ್ತಾರೆ.<br>- ಬಂದಿಗಳನ್ನು ವಿಚಾರಣಾ ದಿನಾಂಕಗಳಂದು ಗೌ। ನ್ಯಾಯಾಲಯಗಳ ಮುಂದೆ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಗುತ್ತಿದೆ.<br>- 2024-25ನೇ 100.00 ಲಕ್ಷ ಅನುದಾನದಲ್ಲಿ 27 ಸಂಖ್ಯೆ ವಿಡಿಯೋ ಕಾನ್ಫರೆನ್ಸ್‌ಗಳನ್ನು ಖರೀದಿಸಲು ಕಾರ್ಯದೇಶ ನೀಡಲಾಗಿದೆ.<br>- ಪ್ರತಿನಿತ್ಯ ಬಂದಿಗಳ ವಿಡಿಯೋ ಕಾನ್ಫರೆನ್ಸ್ ಕಾರ್ಯಕ್ಷಮತೆಯ ಬಗ್ಗೆ ಕಾರಾಗೃಹಗಳಿಂದ ವರದಿ ಪಡೆಯಲಾಗುತ್ತಿದೆ.<br>- ವಿಚಾರಣಾಧೀನ ಬಂದಿಗಳಿಗೆ ಸಂಬಂಧಪಟ್ಟಂತೆ ಮಾಸಿಕ ವರದಿಗಳನ್ನು ಗೌ। ನ್ಯಾಯಾಲಯಗಳಿಗೆ ಸಲ್ಲಿಸಲಾಗುತ್ತಿದೆ.<br>- ದಿನಾಂಕ:01-01-2020 ರಿಂದ 31-12-2024 ರವರೆಗೆ ಬಂದಿಗಳನ್ನು ಗೌ। ನ್ಯಾಯಾಲಯಗಳಿಗೆ ವಿಡೀಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿತ್ತಿದ್ದು, ಬಂದಿಗಳ ಹಾಜರಾತಿಯಲ್ಲಿ ಯಾವುದೇ ವಿಳಂಭವಾಗುತ್ತಿರುವುದಿಲ್ಲ. ವಿವರ ಈ ಕೆಳಕಂಡಂತಿದೆ.
<table>
<tr><th>Year</th><th>Nos. of prisoners tobe produced to courts physically</th><th>Nos. of prisoners actually produced before the courts</th><th>Percentage of Physical Production</th><th>Nos. of prisoners produced through VC</th><th>Nos. of prisoners actually produced before the courts</th><th>Percentage of VC production</th></tr>
<tr><td>2020-2021</td><td>67544</td><td>28993</td><td>43%</td><td>86276</td><td>79842</td><td>93%</td></tr>
<tr><td>2021-2022</td><td>59292</td><td>33879</td><td>57%</td><td>149120</td><td>138929</td><td>93%</td></tr>
<tr><td>2022-2023</td><td>102752</td><td>69051</td><td>67%</td><td>164192</td><td>157694</td><td>96%</td></tr>
<tr><td>2023-2024</td><td>111433</td><td>74984</td><td>67%</td><td>226525</td><td>212523</td><td>94%</td></tr>
<tr><td>2024-2025</td><td>102478</td><td>55651</td><td>54%</td><td>187709</td><td>178650</td><td>95%</td></tr>
</table></td></tr>
<tr><td>8)</td><td>4.1.2.3<br>ಅಭಿರಕ್ಷಣೆಯಿಂದ</td><td>i) ಕಾರಾಗೃಹಗಳಿಂದ ಪರಾರಿಯಾಗಿದ್ದ 31 ಬಂದಿಗಳನ್ನು ಮರುಬಂದಿಸುವ ಕಾರ್ಯವನ್ನು ಇಲಾಖೆಯು ಶೀಘ್ರದಲ್ಲಿಯೇ ಕೈಗೊಂಡು ಆ ಬಗ್ಗೆ</td><td>- ದಿನಾಂಕ: 01-01-2010 ರಿಂದ 03-02-2025 ರ ಅವಧಿಯಲ್ಲಿ ಒಟ್ಟು 204 ಬಂದಿಗಳು ಕಾರಾಗೃಹಗಳಿಂದ ಪರಾರಿಯಾಗಿದ್ದು, ಆ ಪೈಕಿ 178 ಬಂದಿಗಳನ್ನು ಮರುಬಂಧಿಸಲಾಗಿದ್ದು, ಇನ್ನುಳಿದ 26 ಬಂದಿಗಳನ್ನು ಮರು ಬಂದಿಸಲು ಪೋಲೀಸ್ ಇಲಾಖೆಯನ್ನು ಕೋರಲಾಗಿದ್ದು, ಸದರಿ ಬಂದಿಗಳ ಮರುಬಂಧನಕ್ಕೆ ಪೋಲೀಸ್</td></tr>
</table>

| | | | |
|---|---|---|---|
| | ತಪ್ಪಿಸಿಕೊಂಡ ಕೈದಿಗಳು | ವರದಿಯನ್ನು ಸಲ್ಲಿಸತಕ್ಕದ್ದೆಂದು ಸಮಿತಿಯು ಆಗ್ರಹಿಸುತ್ತದೆ. 58 ಜನ ಕಾರಾಗೃಹ ಸಿಬ್ಬಂದಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳಡಿಯಲ್ಲಿ ವಿಚಾರಣೆಯನ್ನು ನಡೆಸಲಾಗಿದ್ದು, ಕೆಲವೊಂದು ಪ್ರಕರಣಗಳಲ್ಲಿ ಅಂತಿಮ ನಿರ್ಣಯ ಕೈಗೊಳ್ಳಲು ಬಾಕಿ ಇರುವ ಕುರಿತು ಇಲಾಖಾ ಟಿಪ್ಪಣಿಯಲ್ಲಿ ತಿಳಿಸಲಾಗಿದ್ದು, ಅತಿ ಶೀಘ್ರದಲ್ಲಿಯೇ ವಿಚಾರಣೆಯನ್ನು ಮುಕ್ತಾಯಗೊಳಿಸಿ, ಆ ಬಗ್ಗೆ ಜರೂರಾಗಿ ಮಾಹಿತಿಯನ್ನು ಒದಗಿಸುವಂತೆ ಸಮಿತಿಯು ಇಲಾಖೆಗೆ ತಾಕೀತು ಮಾಡುತ್ತದೆ. | ಇಲಾಖೆಯೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ.<br>– 2012 ರಿಂದ 2024 ರ ಅವಧಿಯಲ್ಲಿ ಬಂದಿಗಳ ಪರಾರಿ ಪ್ರಕರಣಗಳಿಗೆ ಸಂಬಂಧಿಸಿದಂತೆ, ಕಾರಾಗೃಹ ಇಲಾಖೆಯ 113 ಜನ ಕಾರಾಗೃಹ ಸಿಬ್ಬಂದಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳಡಿಯಲ್ಲಿ ವಿಚಾರಣೆಯನ್ನು ನಡೆಸಲಾಗಿದ್ದು, ಅವರ ಪೈಕಿ 78 ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗಿದೆ. ಉಳಿದ 34 ಅಧಿಕಾರಿ / ಸಿಬ್ಬಂದಿಗಳು ದೋಷಮುಕ್ತಗೊಂಡಿರುತ್ತಾರೆ. |

| ವರ್ಷ | ಪ್ರಕರಣಗಳ ಸಂಖ್ಯೆ | ಕರ್ತವ್ಯ ಲೋಪವೆಸಗಿದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ದೋಷ ಮುಕ್ತಗೊಂಡ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಶಿಸ್ತು ಕ್ರಮಕ್ಕೆ ಒಳಗಾದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ವಿಚಾರಣೆ ಎದುರಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ |
|---|---|---|---|---|---|
| 2012 | 6 | 11 | – | 11 | – |
| 2013 | 4 | 12 | 08 | 04 | – |
| 2014 | 4 | 05 | – | 05 | – |
| 2015 | 7 | 21 | 02 | 19 | – |
| 2016 | 4 | 13 | 10 | 03 | – |
| 2017 | 6 | 17 | 05 | 12 | – |
| 2018 | 2 | 02 | 01 | 01 | – |
| 2019 | 1 | 12 | 08 | 04 | – |
| 2020 | 2 | 09 | – | 09 | – |
| 2021 | 2 | 09 | – | 09 | – |
| 2022 | 1 | 01 | – | 01 | – |
| 2023 | 1 | 01 | – | – | 01 |
| 2024 | – | – | – | – | – |
| **ಒಟ್ಟು** | **40** | **113** | **34** | **78** | **01** |

| | | | |
|---|---|---|---|
| | | ii) ಶಿಥಿಲಾವಸ್ಥೆಯನ್ನು ತಲುಪಿರುವ ಕಾರಾಗೃಹಗಳ ಬದಲಾಗಿ ನೂತನ ಕಾರಾಗೃಹಗಳನ್ನು ನಿರ್ಮಿಸಲು ಇಲಾಖೆಯು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಜರೂರಾಗಿ ಅಗತ್ಯ ಕ್ರಮಕೈಗೊಳ್ಳುವಂತೆ ಹಾಗೂ ಕಾರಾಗೃಹ ಗೋಡೆಯ ಎತ್ತರವನ್ನು ಸೂಕ್ತ ಮಟ್ಟಕ್ಕೆ ಎತ್ತರಿಸುವುದರ ಬಗ್ಗೆಯೂ ಸಹ ಗಂಭೀರವಾಗಿ ಚಿಂತನೆ ನಡೆಸುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. | – ವಿಜಯಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ಒಟ್ಟು 2000 ಬಂದಿಗಳ ಸಾಮರ್ಥ್ಯದ ನೂತನ ಕೇಂದ್ರ ಕಾರಾಗೃಹಗಳ ನಿರ್ಮಾಣ ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.<br>– ಬೆಂಗಳೂರು ಗರಿಷ್ಠ ಭದ್ರತೆ ಮತ್ತು ಮಂಗಳೂರು ಕೇಂದ್ರ ಕಾರಾಗೃಹಗಳು ಒಟ್ಟು 2000 ಬಂದಿಗಳ ಸಾಮರ್ಥ್ಯದ ನೂತನ ಕೇಂದ್ರ ಕಾರಾಗೃಹಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ.<br>– ಅರಸೀಕೆರೆ, ಹಳಿಯಾಳ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ನೂತನ ತಾಲ್ಲೂಕು ಕಾರಾಗೃಹಗಳ ನಿರ್ಮಾಣ ಕಾಮಗಾರಿಗಳು ಮುಕ್ತಾಯಗೊಂಡಿರುತ್ತದೆ. |

| ಕ್ರ ಸಂ. | ನೂತನ ಕಾರಾಗೃಹಗಳ ನಿರ್ಮಾಣ | ಬಂದಿಗಳ ಸ್ಥಳಾವಕಾಶ | ಷರಾ |
|---|---|---|---|
| 1. | ಕೇಂದ್ರ ಕಾರಾಗೃಹ, ವಿಜಯಪುರ | 1000 | ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ. |
| 2. | ಕೇಂದ್ರ ಕಾರಾಗೃಹ, ಬೀದರ್ | 1000 | |
| 3. | ಗರಿಷ್ಠ ಭದ್ರತಾ ಕೇಂದ್ರ ಕಾರಾಗೃಹ, ಬೆಂಗಳೂರು | 1000 | |
| 4. | ಕೇಂದ್ರ ಕಾರಾಗೃಹ, ಮಂಗಳೂರು | 1000 | 2ನೇ ಹಂತದ ಕಾಮಗಾರಿ ಪ್ರಾರಂಭಿಸಬೇಕಿದೆ. |
| 5. | ಕೇಂದ್ರ ಕಾರಾಗೃಹ, ಬೆಂಗಳೂರು ಗ್ರಾಮಾಂತರ, ದೇವನಹಳ್ಳಿ | 600 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 6. | ಬಯಲು ಬಂದೀಖಾನೆ ಕಡೂರು | 75 | ಮುಖ್ಯ ಗೋಡೆ ನಿರ್ಮಾಣ ಮುಕ್ತಾಯವಾಗಿದ್ದು, ಬ್ಯಾರಕ್ ನಿರ್ಮಾಣ ಕಾಮಗಾರಿ ಪ್ರಾರಂಭಿಸಬೇಕಿದೆ. |
| 7. | ತಾಲ್ಲೂಕು ಕಾರಾಗೃಹ ಅರಸೀಕೆರೆ | 50 | ಕಾಮಗಾರಿ ಮುಕ್ತಾಯಗೊಂಡಿರುತ್ತದೆ. |
| 8. | ತಾಲ್ಲೂಕು ಕಾರಾಗೃಹ ಹಳಿಯಾಳ | 100 | |
| 9. | ತಾಲ್ಲೂಕು ಕಾರಾಗೃಹ ಹರಪ್ಪನಹಳ್ಳಿ | 100 | |

| | | | |
|---|---|---|---|
| 10. | ತಾಲ್ಲೂಕು ಕಾರಾಗೃಹ ವಿರಾಜಪೇಟೆ | 80 | ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ. |
| 11. | ತಾಲ್ಲೂಕು ಕಾರಾಗೃಹ ಅಳಂದ | 125 | |
| | ಒಟ್ಟು | 5130 | |

- ರಾಜ್ಯದ 10 ವಿವಿಧ ಕಾರಾಗೃಹಗಳ ಆವರಣದಲ್ಲಿ 1,475 ಬಂದಿಗಳಿಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲು ಹೆಚ್ಚುವರಿ ಬ್ಯಾರಕ್ ನಿರ್ಮಾಣ ಕಾಮಗಾರಿ ಮುಕ್ತಾಯಗೊಂಡಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ. | ಕಾರಾಗೃಹ | ಹೆಚ್ಚುವರಿ ಸ್ಥಳಾವಕಾಶ |
|---|---|---|
| 1. | ಕೇಂದ್ರ ಕಾರಾಗೃಹ, ಕಲಬುರ್ಗಿ | 300 |
| 2. | ಕೇಂದ್ರ ಕಾರಾಗೃಹ, ಮೈಸೂರು | 255 |
| 3. | ಕೇಂದ್ರ ಕಾರಾಗೃಹ, ಬಳ್ಳಾರಿ | 300 |
| 4. | ಜಿಲ್ಲಾ ಕಾರಾಗೃಹ, ಕೊಪ್ಪಳ | 150 |
| 5. | ಜಿಲ್ಲಾ ಕಾರಾಗೃಹ, ಹಾವೇರಿ | 100 |
| 6. | ಜಿಲ್ಲಾ ಕಾರಾಗೃಹ, ರಾಮನಗರ | 80 |
| 7. | ಜಿಲ್ಲಾ ಕಾರಾಗೃಹ, ತುಮಕೂರು | 100 |
| 8. | ತಾಲ್ಲೂಕು ಕಾರಾಗೃಹ, ಹುಬ್ಬಳ್ಳಿ | 80 |
| 9. | ತಾಲ್ಲೂಕು ಕಾರಾಗೃಹ, ಗೋಕಾಕ | 60 |
| 10. | ಬಯಲು ಕಾರಾಗೃಹ ದೇವನಹಳ್ಳಿ | 50 |
| | ಒಟ್ಟು | **1475** |

- ರಾಜ್ಯದ ಶಿಥಿಲಾವಸ್ಥೆ ತಲುಪಿರುವ ಕಾರಾಗೃಹ ಕಟ್ಟಡಗಳ ಬದಲಾಗಿ ನೂತನ ಕಾರಾಗೃಹ ಕಟ್ಟಡಗಳನ್ನು ನಿರ್ಮಿಸಲು ಹಾಸನ, ರಾಯಚೂರು, ಯಾದಗಿರಿ, ದಾವಣಗೆರೆ, ಕೋಲಾರ, ಗದಗ, ವಿಜಯನಗರ, ಗಂಗಾವತಿ, ತಿಪಟೂರು ಮತ್ತು ತರೀಕೆರೆಯಲ್ಲಿ ಜಿಲ್ಲಾಡಳಿದಿಂದ ಜಮೀನು ಮಂಜೂರಾಗಿರುತ್ತದೆ.
- 2025-26ನೇ ಆಯವ್ಯಯದಲ್ಲಿ ಶಿಥಿಲಾವಸ್ಥೆ ತಲುಪಿರುವ ಕಾರಾಗೃಹಗಳ ಬದಲಾಗಿ ನೂತನ ಕಾರಾಗೃಹಗಳ

| | | | |
|---|---|---|---|
| | | | ನಿರ್ಮಾಣಕ್ಕೆ ಸರ್ಕಾರಕ್ಕೆ ಅನುದಾನ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಸ್ಥಳಗಳಲ್ಲಿ ನೂತನ ಕಾರಾಗೃಹ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು. ವಿವರ ಕೆಳಕಂಡಂತಿದೆ. |

| ಕ್ರ. ಸಂ. | ನೂತನ ಕಾರಾಗೃಹಗಳ ನಿರ್ಮಾಣ | ಬಂದಿಗಳ ಸ್ಥಳಾವಕಾಶ | ಷರಾ |
|---|---|---|---|
| 1. | ಕೇಂದ್ರ ಕಾರಾಗೃಹ ಹಾಸನ | 1000 | 2025–26ನೇ ಅಯವ್ಯಯದಲ್ಲಿ ಶಿಥಿಲಾವಸ್ಥೆ ತಲುಪಿರುವ ಕಾರಾಗೃಹಗಳ ಬದಲಾಗಿ ನೂತನ ಕಾರಾಗೃಹಗಳ ನಿರ್ಮಾಣಕ್ಕೆ ಸರ್ಕಾರಕ್ಕೆ ಅನುದಾನ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| 2. | ಜಿಲ್ಲಾ ಕಾರಾಗೃಹ ರಾಯಚೂರು | 300 | |
| 3. | ಜಿಲ್ಲಾ ಕಾರಾಗೃಹ ದಾವಣಗೆರೆ | 500 | |
| 4. | ಜಿಲ್ಲಾ ಕಾರಾಗೃಹ ಯಾದಗಿರಿ | 300 | |
| 5. | ಜಿಲ್ಲಾ ಕಾರಾಗೃಹ ಗದಗ | 300 | |
| 6. | ಜಿಲ್ಲಾ ಕಾರಾಗೃಹ ವಿಜಯನಗರ | 300 | |
| 7. | ಜಿಲ್ಲಾ ಕಾರಾಗೃಹ ಕೋಲಾರ | 300 | |
| 8. | ತಾಲ್ಲೂಕು ಕಾರಾಗೃಹ ಮಧುಗಿರಿ | 50 | |
| 9. | ತಾಲ್ಲೂಕು ಕಾರಾಗೃಹ ತಿಪಟೂರು | 50 | |
| 10. | ತಾಲ್ಲೂಕು ಕಾರಾಗೃಹ ತರೀಕೆರೆ | 50 | |
| 11. | ತಾಲ್ಲೂಕು ಕಾರಾಗೃಹ ಗಂಗಾವತಿ | 50 | |
| | ಒಟ್ಟು | **3200** | |

- ರಾಜ್ಯದ ಎಲ್ಲಾ ಕೇಂದ್ರ ಕಾರಾಗೃಹಗಳು, ಜಿಲ್ಲಾ ಮತ್ತು ತಾಲ್ಲೂಕು ಕಾರಾಗೃಹಗಳ ಮುಖ್ಯ ಗೋಡೆ ಮೇಲೆ ಭದ್ರತಾ ದೃಷ್ಟಿಯಿಂದ ರೇಜರ್ ಬ್ಲೇಡ್ ಫೆನ್ಸಿಂಗ್ ಅಳವಡಿಕೆ ಮಾಡಲಾಗಿರುತ್ತದೆ.
- ಕಾರಾಗೃಹಗಳ ಮುಖ್ಯ ಹೊರಗೋಡೆಗಳನ್ನು ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ–2021 ರನ್ವಯ ರೇಜರ್ ಬ್ಲೇಡ್ ಸೇರಿಸಿ 21 ಅಡಿಯನ್ನು ನಿಗಧಿಪಡಿಸಿಕೊಳ್ಳಲಾಗಿದೆ. ಸಮಿತಿಯ ಶಿಫಾರಸ್ಸಿನಂತೆ ಬಹುತೇಕ ಕಾರಾಗೃಹಗಳು 18 ಅಡಿಗಳಿಗಿಂತ ಮೇಲಿದ್ದು, ಕೆಲವು ತಾಲ್ಲೂಕು ಕಾರಾಗೃಹಗಳು ಮುಖ್ಯಗೋಡೆಯು 15 ಅಡಿಯಿಂದ 18 ಅಡಿ ಇದ್ದು, ಸದರಿ ಮುಖ್ಯಗೋಡೆಯು ಹಳೆಯ ಕಟ್ಟಡಗಳಾಗಿದ್ದು, ಶಿಥಿಲಾವಸ್ಥೆಯಲ್ಲಿರುವುದರಿಂದ ಮುಖ್ಯಗೋಡೆಯನ್ನು ಹೆಚ್ಚಿಸಲು ಸಾಧ್ಯವಾಗದ ಕಾರಣ ರೇಜರ್ ಬ್ಲೇಡ್ ಫೆನ್ಸಿಂಗ್ ಅಳವಡಿಸಲಾಗಿರುತ್ತದೆ.

| | | | |
|---|---|---|---|
| 9) | (ಬಿ) ಸರ್ಕಾರದ ಮಟ್ಟದಲ್ಲಿ ತ್ರೈಮಾಸಿಕ ಸಮೀಕ್ಷಾ ಸಭೆ ನಡೆಸುವುದು. | i) ಕಾರಾಗೃಹಗಳ ವಶದಿಂದ ತಪ್ಪಿಸಿಕೊಂಡಿರುವ ಕೆಲವು ಕೈದಿಗಳನ್ನು ಮರುಬಂದಿಸಲು ಕೈಗೊಂಡ ಕ್ರಮಗಳನ್ನು ಸಮೀಕ್ಷಿಸಲು ಸರ್ಕಾರದ ಮಟ್ಟದಲ್ಲಿ ತ್ರೈ-ಮಾಸಿಕವಾಗಿ ವಿಮರ್ಶಿಸುವ ಪದ್ಧತಿಯನ್ನು ಜಾರಿಗೆ ತರಬೇಕೆಂದೂ ಸಮಿತಿಯು 2009ರ ಅವಧಿಯಲ್ಲಿಯೇ ಶಿಫಾರಸ್ಸು ನೀಡಿದ್ದರೂ, ಇಲಾಖೆಯು ನಿರ್ಲಕ್ಷ್ಯ ಧೋರಣೆಯನ್ನು ಅನುಸರಿಸಿ 2013ರಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದ್ದನ್ನು ಮತ್ತು ಜುಲೈ-2017 ರಲ್ಲಿ ಕೇವಲ ಒಂದು ಸಭೆಯನ್ನು ನಡೆಸಿರುವುದಕ್ಕೆ ಸಮಿತಿಯು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತದೆ. ಮುಂದಿನ ದಿನಗಳಲ್ಲಿ ತ್ರೈ-ಮಾಸಿಕ ಸಭೆಗಳನ್ನು ಕಟ್ಟುನಿಟ್ಟಾಗಿ ಆಯೋಜಿಸುವಂತೆ ಇಲಾಖೆಗೆ ಸಮಿತಿಯು ಆಗ್ರಹಿಸುತ್ತದೆ. | - ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಕಾರಾಗೃಹದಿಂದ ಮತ್ತು ಪೊಲೀಸರ ವಶದಿಂದ ಪರಾರಿಯಾಗಿರುವ ಬಂದಿಗಳನ್ನು ಮರು ಬಂದಿಸುವ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ತ್ರೈಮಾಸಿಕವಾಗಿ ಪರಿಶೀಲಿಸಲು ಅಧಿಕಾರಿಗಳ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್.ಡಿ 124 ಪಿಆರ್ಎ 2022, ದಿನಾಂಕ 06.07.2022 ರಲ್ಲಿ ರಚಿಸಲಾಗಿರುತ್ತದೆ.<br>- ಸದರಿ ಸಮಿತಿಯು ದಿನಾಂಕ: 24.01.2023 ಮತ್ತು 09.07.2024 ರಂದು ಸಭೆಯನ್ನು ಸೇರಿ ಕಾರಾಗೃಹದಿಂದ ಮತ್ತು ಪೊಲೀಸರ ವಶದಿಂದ ಪರಾರಿಯಾಗಿರುವ ಬಂದಿಗಳನ್ನು ಮರು ಬಂದಿಸುವ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನೆ ಕೈಗೊಂಡು ಬಂದಿಗಳ ಮರು ಬಂಧನಕ್ಕೆ ಶೀಘ್ರ ಕ್ರಮವಹಿಸುವಂತೆ ಪೊಲೀಸ್ ಇಲಾಖೆಗೆ ಸೂಚಿಸಲಾಗಿರುತ್ತದೆ.<br>- ಕಾರಾಗೃಹಗಳಿಂದ ಬಂದಿಗಳನ್ನು ಹೊರಗೆ ಕರೆದುಕೊಂಡು ಹೋಗುವ ಯಾವುದೇ ಸಂದರ್ಭದಲ್ಲಿ ಪೊಲೀಸ್ ಪಡೆಯ ಬಿಗಿ ಭದ್ರತೆಗೆ ಕ್ರಮವಹಿಸುವಂತೆ ಸೂಚಿಸಲಾಗಿರುತ್ತದೆ.<br>- ಗೌ॥ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನದನುಸಾರ ರಾಜ್ಯದ ಕಾರಾಗೃಹಗಳಿಂದ ಪೆರೋಲ್ ರಜೆಯಲ್ಲಿ ತೆರಳಿ ತಲೆಮರೆಸಿಕೊಂಡಿರುವ ಶಿಕ್ಷಾಬಂದಿಗಳ ಮರುಬಂಧನಕ್ಕೆ ಪೊಲೀಸ್ ಇಲಾಖೆಯಿಂದ ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಮರುಬಂಧನ ಕಾರ್ಯದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಆಯಾ ಘಟಕಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. |
| 10) | 4.1.2.4 ವೈದ್ಯಕೀಯ ಸೌಲಭ್ಯಗಳು | I) ಈ ಹಿಂದೆ ಜೂನ್-2009 ರಲ್ಲಿ ಸಮಿತಿಯು ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಕೈದಿಗಳಿಗೆ ಅಸಮರ್ಪಕ ವೈದ್ಯಕೀಯ ಸೌಲಭ್ಯಗಳನ್ನು ನೀಡುತ್ತಿದ್ದನ್ನು ಗಮನಿಸಿ, ಕಾರಾಗೃಹಗಳಲ್ಲಿರುವ ಕೈದಿಗಳ ಆರೋಗ್ಯವನ್ನು ಕಾಲಕಾಲಕ್ಕೆ ಪರೀಕ್ಷಿಸಲು ಅಗತ್ಯವಿರುವ ವೈದ್ಯರ ಮತ್ತು ತಜ್ಞರನ್ನು ನಿಯೋಜಿಸಲು ವೈದ್ಯಕೀಯ ಚಿಕಿತ್ಸೆಗಳು ಸಮರ್ಪಕವಾಗಿ ದೊರಕುವಂತೆ ಶಿಫಾರಸ್ಸು ನೀಡಿದ್ದಾಗ್ಯೂ ಸಹ ಕೈದಿಗಳಿಗೆ ವೈದ್ಯಕೀಯ | - ಮಾನ್ಯ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಪ್ರಕರಣ ಸಂಖ್ಯೆ: 2471/10/15/2019-JCD(FB) ರಲ್ಲಿ ದಿನಾಂಕ: 02.09.2020 ರಂದು ನೀಡಿರುವ ಶಿಫಾರಸ್ಸಿನನ್ವಯ ರಾಜ್ಯದ ಕಾರಾಗೃಹಗಳಲ್ಲಿರುವ ಬಂದಿಗಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಒದಗಿಸುವ ಸಂಬಂಧ ಕಾರಾಗೃಹಗಳಲ್ಲಿರುವ ಆಸ್ಪತ್ರೆಗಳನ್ನು ಪ್ರಸ್ತುತ ಇರುವ ಮೂಲಭೂತ ಸೌಲಭ್ಯಗಳೊಂದಿಗೆ, ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಲು ಸರ್ಕಾರವು ಆದೇಶ ಸಂಖ್ಯೆ:ಹೆಚ್‌ಡಿ 89 ಪಿಆರ್‌ಇ 2020, ದಿನಾಂಕ: 13.07.2022 ರಲ್ಲಿ ಆದೇಶಿಸಿರುತ್ತದೆ.<br>- ಅದರನ್ವಯ ರಾಜ್ಯದ ಕಾರಾಗೃಹಗಳಲ್ಲಿರುವ ಆಸ್ಪತ್ರೆಗಳನ್ನು ಪ್ರಸ್ತುತ ಇರುವ ಮೂಲಭೂತ ಸೌಲಭ್ಯಗಳೊಂದಿಗೆ, ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಲಾಗಿದೆ.<br>- ಪ್ರಸ್ತುತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಬಂದಿಗಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆಯನ್ನು |

| | | | |
|---|---|---|---|
| | | ಸೌಲಭ್ಯಗಳು ದೊರಕಿಸುವುದರಲ್ಲಿನ ಇಲಾಖೆಯ ವಿಫಲತೆಯನ್ನು ಸಮಿತಿಯು ಪರಾಮರ್ಶಿಸಿ, ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. | ಒದಗಿಸಲು ಅಗತ್ಯ ಕ್ರಮವಹಿಸುತ್ತಿದೆ.<br>– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಈ ಕೆಳಕಂಡ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಗೆ ನಿಯೋಜಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ. |

| Sl.No. | Name of the Post | Sanctioned | Working | Vacancies |
|---|---|---|---|---|
| 1. | Chief Medical Officer | 7 | 3 | 4 |
| 2. | Medical Officer | 20 | 16 | 4 |
| 3. | Psychiatrist | 8 | 6 | 2 |
| 4. | Clinical Psychiatrist | 1 | 1 | 0 |
| 5. | Psychiatrist Counsellor / Social Worker (Permanent Posts) | 1 | 0 | 1 |
| 6. | Psychiatrist Counsellor / Social Worker (Contract Basis) | 20 | 18 | 2 |
| 7. | Staff Nurse | 24 | 12 | 12 |
| 8. | Matron, Male/Female Nurse | 5 | 0 | 5 |
| 9. | Junior Lab Technician | 7 | 6 | 1 |
| 10. | Pharmacist | 17 | 9 | 8 |
| 11. | X-ray Technician | 8 | 3 | 1 |
| | Total | 114 | 74 | 40 |

– ಈ ಕುರಿತು ಸಂಬಂಧಪಟ್ಟ ಕಾರಾಗೃಹಗಳ ಮುಖ್ಯಸ್ಥರುಗಳು ಜಿಲ್ಲಾ / ತಾಲ್ಲೂಕು ಆರೋಗ್ಯ ಅಧಿಕಾರಿಗಳೊಂದಿಗೆ ನಿರಂತರವಾಗಿ ಸಮನ್ವಯತೆ ಹೊಂದಿ ಅವಶ್ಯಕ ಚಿಕಿತ್ಸೆಯನ್ನು ಸಕಾಲದಲ್ಲಿ ಕೊಡಿಸಲು ಕ್ರಮ ವಹಿಸಲಾಗುತ್ತಿದೆ.

– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಕಾರಾಗೃಹ ಆಸ್ಪತ್ರೆಗಳನ್ನು ಹಸ್ತಾಂತರಿಸಿದ ನಂತರ ಉದ್ಭವಿಸಿರುವ ಸಮಸ್ಯೆಗಳ ಪರಿಹಾರ ಕುರಿತಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಕಾರಾಗೃಹ ಇಲಾಖೆಗಳೊಂದಿಗೆ ದಿನಾಂಕ: 17.01.2025 ರಲ್ಲಿ ಸಮನ್ವಯ ಸಭೆ ನಡೆಸಿದ್ದು, ಅದರನ್ವಯ ಅಗತ್ಯ ಕ್ರಮ ವಹಿಸಲಾಗುತ್ತಿದೆ.

<table>
<tr>
<td></td>
<td></td>
<td>ii) ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮತ್ತು ತುಮಕೂರು ಉಪ ಕಾರಾಗೃಹಗಳಲ್ಲಿ ವೈದ್ಯರ ಹುದ್ದೆಗೆ ಮಂಜೂರಾತಿ ನೀಡದಿರುವುದನ್ನು ಸಮಿತಿಯು ವಿಶ್ಲೇಷಿಸಿ, ಕೈದಿಗಳ ಆರೋಗ್ಯದ ಹಿತದೃಷ್ಟಿಯಿಂದ ವೈದ್ಯಾಧಿಕಾರಿ ಹುದ್ದೆಗೆ ಮಂಜೂರಾತಿ ಪಡೆಯುವುದಕ್ಕೆ ಇಲಾಖೆಯು ತ್ವರಿತ ಕ್ರಮ ವಹಿಸುವಂತೆ ಸಮಿತಿಯು ಆಗ್ರಹಿಸುತ್ತದೆ.</td>
<td>– ಪ್ರಸ್ತುತ ಕಾರಾಗೃಹಗಳ ಆಸ್ಪತ್ರೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿರುವುದರಿಂದ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮತ್ತು ತುಮಕೂರು ಜಿಲ್ಲಾ ಕಾರಾಗೃಹಗಳಲ್ಲಿ ಹಾಗೂ ಇನ್ನುಳಿದ ಯಾವುದೇ ಕಾರಾಗೃಹಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕಾರಾಗೃಹ ಇಲಾಖೆ ವತಿಯಿಂದ ಭರ್ತಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.<br>
– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಸ್ಥಳೀಯ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳು ಪ್ರತಿ ವಾರಕ್ಕೊಮ್ಮೆ ಕಾರಾಗೃಹಕ್ಕೆ ಭೇಟಿ ನೀಡಿ ಬಂದಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ.
<table>
<tr><th>Sl.No.</th><th>Name of the Prison</th><th>Sanctioned Posts</th><th>Visits</th></tr>
<tr><td>1.</td><td>Chikkaballapura</td><td rowspan="4">Psychiatrist Counsellor</td><td>Medical Officer visits Prison once in a Week.</td></tr>
<tr><td>2.</td><td>Kolara</td><td>Medical Officer visits Prison twice in a Week.</td></tr>
<tr><td>3.</td><td>Ramanagara</td><td>Medical Officer & Pharmacist visit Prison twice in a Week.</td></tr>
<tr><td>4.</td><td>Tumakuru</td><td>Medical Officer visits daily.</td></tr>
</table>
– ಬಂದಿಗಳಿಗೆ ತುರ್ತು ಚಿಕಿತ್ಸೆ ಅಗತ್ಯವಿದ್ದ ಸಮಯದಲ್ಲಿ ಬೆಂಗಾವಲಿನಲ್ಲಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗುತ್ತದೆ.<br>
– ಜಿಲ್ಲಾ ಆಸ್ಪತ್ರೆಗಳಲ್ಲಿ ಬಂದಿಗಳ ಚಿಕಿತ್ಸೆಗಾಗಿ ಪ್ರತ್ಯೇಕವಾಗಿ ಜೈಲ್ ವಾರ್ಡ್‌ಗಳನ್ನು ನಿರ್ಮಿಸಿದೆ.</td>
</tr>
</table>

| | | | |
|---|---|---|---|
| | | iii) ಕರ್ನಾಟಕ ಕಾರಾಗೃಹಗಳ ನಿಯಮದ ಪ್ರಕಾರ ರಾಜ್ಯಾದ್ಯಂತ ಎಲ್ಲಾ ಕಾರಾಗೃಹಗಳಲ್ಲಿ ಕೈದಿಗಳಿಗೆ ಸೂಕ್ತ ವೈದ್ಯಕೀಯ ಸೌಲಭ್ಯಗಳನ್ನು ನೀಡಲು ತಜ್ಞರ ಮತ್ತು ಅವಶ್ಯವಿರುವ ಇತರೆ ವೈದ್ಯರನ್ನು ನೇಮಿಸುವುದು. ಮಾನಸಿಕ ಖಾಯಿಲೆಗಳಿಂದ ಬಳಲುತ್ತಿರುವ ಕೈದಿಗಳಿಗೆ ಚಿಕಿತ್ಸೆ ನೀಡಲು ಮಾನಸಿಕ ತಜ್ಞರ ನೇಮಕಾತಿಗೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಜರೂರಾಗಿ ಕೈಗೊಂಡು ಕೈದಿಗಳ ಮಾನಸಿಕ ಸ್ಥಿತಿಯನ್ನು ಸುಧಾರಿಸಿ, ಶಿಕ್ಷೆಯು ಮುಗಿಯುವ ವೇಳೆಗೆ ಸಮಾಜದ ಇತರೆ ಜನರೊಂದಿಗೆ ಬೆರೆತು ಬಾಳ್ವೆ ನಡೆಸಲು ಕೈದಿಗಳ ಮನಪರಿವರ್ತನೆ ಮಾಡುವ ನಿಟ್ಟಿನಲ್ಲಿ ಇಲಾಖೆಯು ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | - ಪ್ರಸ್ತುತ ಕಾರಾಗೃಹಗಳ ಆಸ್ಪತ್ರೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿರುವುದರಿಂದ, ಯಾವುದೇ ಕಾರಾಗೃಹಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕಾರಾಗೃಹ ಇಲಾಖೆ ವತಿಯಿಂದ ಭರ್ತಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.<br>- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಸ್ಥಳೀಯ ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿಗಳು ಕಾರಾಗೃಹಕ್ಕೆ ಭೇಟಿ ನೀಡಿ ಬಂದಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ.<br>- ಮಾನಸಿಕ ಚಿಕಿತ್ಸೆ ಅವಶ್ಯಕತೆಯಿರುವ ಬಂದಿಗಳಿಗೆ ಬೆಂಗಳೂರಿನ NIMHANS ಆಸ್ಪತ್ರೆ ಮತ್ತು ಧಾರವಾಡದ DIMHANS ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ.<br>- ಬಂದಿಗಳಿಗೆ ಕೌನ್ಸಿಲಿಂಗ್ ನೀಡುವ ಸಂಬಂಧ 2) Psychiatric Counsellors ಗಳನ್ನು ನೇಮಕಾತಿ ಮಾಡಲಾಗಿದೆ.<br>- ನವಚೇತನ ಕಾರ್ಯಕ್ರಮದಡಿ ಬಂದಿಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ವಿವಿಧ ಕಾರ್ಯಕ್ರಮಗಳನ್ನು (ಯೋಗ, ಧ್ಯಾನ ಇತ್ಯಾದಿ) ಹಮ್ಮಿಕೊಳ್ಳಲಾಗಿರುತ್ತದೆ. |
| | | iv) ಮುಂದುವರೆದು, ಯಾವುದೇ ಕಾರಾಗೃಹಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ನಿಯೋಜಿಸದಿರುವ ಬಗ್ಗೆ ಸಮಿತಿಯು ತೀವ್ರ ಅತೃಪ್ತಿ ವ್ಯಕ್ತಪಡಿಸಿ, ಈ ಕೂಡಲೇ ಮಹಿಳಾ ಕೈದಿಗಳ ಆರೋಗ್ಯ ಸುಧಾರಣೆಗಾಗಿ ಮಹಿಳಾ ವೈದ್ಯಾಧಿಕಾರಿಗಳನ್ನು ನಿಯೋಜಿಸಲು ಕ್ರಮ ವಹಿಸುವಂತೆ ಶಿಫಾರಸ್ಸು ಮಾಡುತ್ತದೆ. ಕಾರಾಗೃಹಗಳಲ್ಲಿ ಕೈದಿಗಳ ಸಂಖ್ಯೆಗಳಿಗನುಸಾರವಾಗಿ ಕೈದಿಗಳ ಆರೋಗ್ಯ ಸುಧಾರಣೆಗಾಗಿ ಅವಶ್ಯವಿರುವ ಹಾಸಿಗೆಗಳನ್ನು ಮತ್ತು ಇತರೆ ಸೌಲಭ್ಯಗಳನ್ನು ನೀಡುವಲ್ಲಿ | - ಪ್ರಸ್ತುತ ಕಾರಾಗೃಹಗಳ ಆಸ್ಪತ್ರೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿರುವುದರಿಂದ, ಅವಶ್ಯಕತೆಗೆ ಅನುಗುಣವಾಗಿ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.<br>- ಪ್ರಸ್ತುತ ಕಾರಾಗೃಹಗಳಲ್ಲಿ ಮಹಿಳಾ ಬಂದಿಗಳ ಮೇಲ್ವಿಚಾರಣೆ ಮತ್ತು ಯೋಗಕ್ಷೇಮವನ್ನು ಮಹಿಳಾ ವೈದ್ಯಾಧಿಕಾರಿಗಳು ನೋಡಿಕೊಳ್ಳುತ್ತಿರುತ್ತಾರೆ.<br>- ಕಾರಾಗೃಹದಲ್ಲಿನ ಅನಾರೋಗ್ಯ ಬಂದಿಗಳ ಸಂಖ್ಯೆಗೆ ಅನುಗಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಆರೋಗ್ಯ ಇಲಾಖೆಯಿಂದ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.<br>- ಈಗಾಗಲೇ ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಇಬ್ಬರು, ಮೈಸೂರು, ಬೆಳಗಾವಿ ಮತ್ತು ಕಲಬುರ್ಗಿಯಲ್ಲಿ ಒಬ್ಬರು ಮಹಿಳಾ ವೈದ್ಯಾಧಿಕಾರಿಗಳನ್ನು ನಿಯೋಜಿಸಲಾಗಿರುತ್ತದೆ. |

| | | | |
|---|---|---|---|
| | | ಇಲಾಖೆಯು ಜರೂರಾಗಿ ಕ್ರಮವಹಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ. | |
**14. Security Lighting**

Security lighting is another effective form of deterrence. Mischievous inmates are less likely to enter well-lit areas for fear of being sighted. Doors, gates, and other entrances, in particular, should be well lit to allow close observation of people entering and exiting. When lighting the grounds of a facility, widely-distributed low-intensity lighting is generally superior to small patches of high-intensity lighting, because the latter can have a tendency to create blind spots for security personnel and CCTV cameras. It is important to place lighting in a manner that makes it difficult to tamper with (e.g. suspending lights from tall poles and high mast lamps) and to ensure that there is a backup power supply so that security lights will not go out if the electricity is cut off. For example, Lajpore Central Prison in Surat has 13 electric high mast poles with five watch towers. It has been provided with 500 KVA electricity supply. To prevent any power outage / breakdown, 2 heavy duty electric generators with capacity of 250 KVA have also been installed as a back-up.

**15. PAROLE AND LEAVE**

Parole / leave provision under Section 650 of Karnataka Prison Manual, 1978 must be immediately amended to limit it to just 30 days in a year, as is the practice in Tamil Nadu and Kerala. Emergency Parole under Rule 191 of Karnataka Prison Rules, 1974 must be granted for 15 days (i.e., 6+3+3+3) to enable prisoners to attend funerals and obsequies in case of death of family members.

**16. Segregation of under trail prisoners**, convicted prisoners civil prisoners and detenues is a dire need in all the prisons of Karnataka. Under trial prisoners must not be allowed to interact with convicts, who are generally hardened criminals. Their bad influence on the UTPs can thus be prevented. Further, in Bangalore separate jails can be earmarked for convicts and fences put up initially to prevent them from mixing with under trials.

## 17. UNIFORM FOR UNDER TRIAL PRISONERS

Although this is not practiced anywhere in India, uniforms must be supplied for all under trials like in the developed countries. Also, bright coloured uniforms for all prisoners will enable easy identification of the prisoners and deter their escape. Section 349(i) of the Karnataka Prison Manual, 1978 must be suitably amended for this purpose.

## 18. LOCKER SYSTEM

Presently, loads of personal belongings of the prisoners are found in the barracks of all prisons of Karnataka. This needs to be regulated. Sections 348 and 349 of the Karnataka Prison Manual, 1978 must be amended to clearly prescribe the items that must be held by every prisoner. Additionally, the prisoners should be provided with locker facility. It must be ensured that they keep all their personal belongings in these lockers only.

## 19. AUTOMATIC WASHING MACHINES

These must be provided to all blocks in a prison. It will take care of the laundry requirement. This will do away with prisoners themselves washing and drying their clothes all over the prison premises.

## 20. VISITORS MANAGEMENT

The visitors' management system should be developed with each visitor being allowed to go into the visitors' room only after his finger print is taken in the finger print device.

Contactless visits through *Security Netting* during interviews must be made the norm in the new Prison Rules. Visitors must be limited to 2 persons per week for under trial prisoners and 2 persons per fortnight for convict prisoners. Section 592 of the Karnataka Prison Manual, 1978, needs to be amended.

An arrangement of visitors meeting the prisoners over video conference facility can also be thought of.

## 21. OPERATIONAL SUPPORT GROUP (OSG)

All contraband items must be strictly prohibited. Inmates and their belongings should be randomly searched. The OSG team will be a specialized wing in gathering intelligence and searching for illicit material. It should consist of 15 prison staff armed with non-lethal weapons and be totally dedicated to conducting raids in the prison.

## 22. VEHICULAR MOVEMENT

All vehicles which move into and out of the prison institution must be considered possible avenues of contraband movement. Hence, no vehicles must be allowed inside the jail, beyond the main gate.

Every movement within the prison must be managed with the use of vehicles. Movement of food from the kitchen to the barracks, visitation from barracks to other parts of the prison etc can be quick and meaningful with the use of vehicles.

## 23. MOVEMENT OF PRISON OFFICERS AND STAFF

Food must be supplied inside the prison for all prison officers and men, so that they do not keep moving in and out of the prison frequently.

## 24. e-PROCUREMENT OF RATION

The procurement of grains and other food articles in the prison is presently monopolized by a few selected vendors. This can be streamlined through e-procurement portal.

## 25. TRAINING

The only sure way of providing top-notch security is through education and training. The laws change every day and the officer must be quick and efficient when it comes to handling problem situations in the system.

Basic training of all jailors and Assistant Superintendents belonging to Karnataka State is imparted in Academy of Prisons and Correctional Administration (APCA) Vellore, Tamil Nadu at the cost of Rs.55 lakhs per annum. This practice should be immediately done away with. Training should be conducted in the Karnataka Police Academy, Mysore for the first 6 months and at the Karnataka Prison Academy / Prison Training Institute, Mysore for the next 6 months, under the close supervision of ADGP & IGP (Prisons) in the interest of effective training. A proposal from the ADGP & IGP (Prisons) dated 09:11:2012 is still pending with the Government in this regard.

The prison staff also needs to be trained in handling door-frame metal detectors, biometric locks and biometric attendance system, computers, etc. Till the security measures are in place, a massive training program in the use of X-ray baggage scanner, DFMD, HHMD etc needs to be taken up on a war footing. The staff at the cutting edge level in the prison is not sensitized about the security aspect and in few central prisons; the X-ray baggage scanner etc is installed but not being used by the staff members.

Regular refresher courses on anger management, social skills, stress management, moral education, drug abuse, leadership, human resources management, staff development, capacity building, etc need to be organized as part of in-service training.

## 26. PRISONER v/s STAFF RATIO

Whereas in Tamil Nadu there is a prison staff for every 3 prisoners, this ratio in Karnataka is 1:80. The BPR&D stipulated ratio i.e 1:3 must be maintained at

any given point in time. This would entail additional sanction of staff to the prison department by Government. It is relevant to point out that the Prisons department has a woeful shortage of manpower and the ratio is probably among the worst in the country.

In many States, the police department supplements the strength of the prison staff. This is peculiar only to India because no other country uses police personnel to guard jails. Responsibility cannot be fixed and duties assigned if there is dual control over the department.

## 27. PAY PARITY FOR PRISON OFFICERS

There is an anomaly in the scales of pay from Jailors to DIG of Prisons, which has to be rectified immediately. The scales of pay of different categories in 2007 are as follows:-

| Designation Prison Department | Pay Scale | Designation Police Department | Pay Scale |
|---|---|---|---|
| Jailor | (8825-16000) | Sub-Inspector of Police | (10000-18150) |
| Chief Jailor | (8825-16000) | Circle Inspector of Police | (10800-20025) |
| Asst Supdt Of Prisons | (10800-20025) | Deputy Supdt Of Police | (14050-25050) |
| Supdt Of Central Prisons | (14050-25050) | Supdt Of Police (Non - IPS) | (18150-26905) |
| DIG of Prisons | (20025-29725) | DIG of Police (Non IPS | (24450-31800) |

## 28. TRANSFERS OF OFFICERS AND STAFF

An indigenous transfer policy for the prison department must be urgently devised. Lower level men and middle level officers are working in the same place for years, which lowers their ability to deliver effectively.

## 29. PRISON STAFF WELFARE

It is one of the most neglected areas. The prison personnel are lowly paid, hence are highly de-motivated. They should be rewarded for good work and given incentives. Welfare programs for the prison staff should be on par with police personnel.

Risk allowance for the guarding staff can also be implemented, like the one in Lajpore Jail in Surat. A Group Accident Insurance scheme, covering risk of prison personnel can be introduced. Prison officials can be compensated in cases of accidental death, permanent disability or partial disability on par with their counterparts in the Police department. A Staff Welfare Fund similar to the Police Benevolent Fund should be started in the Prisons department with a one-time grant from government.

## 30. DISCIPLINARY SYSTEM

An effective inmate disciplinary system must be put in place. This will focus on the significance of expected inmate compliance and making sure that they take responsibility for their actions. This will also ensure that the inmates are disciplined. Withdrawal of leave, for example, will certainly instill a sense of fear amongst prisoners.

In the past, a study has been conducted on improvements to be made in the prisons system of the country by a Committee headed by Sri. Mulla. Also, periodic conferences of the IGPs (Head of Department) of the country have been held and many resolutions on prison management passed. When the Government decides to over haul the existing system, their recommendations may be taken into consideration.

## Conclusion

The Government directed us to suggest methods to upgrade the prisons in Karnataka as well as provide heightened security to them. To go about the task, we kept in mind the design of the jails in Karnataka, the existing infrastructure, the quality and the skills of the prisons staff, the over-crowding of jails and the fact that the Prisons department has for long not received due attention from Government.

We went about the task by visiting the Central Jails in the States of Tamil Nadu, Gujarat, West Bengal and Maharashtra. During our visits we had fruitful discussions with the prison authorities of these States. We gathered vital information regarding prison administration in other parts of the world through the Internet. The presentations made to us by International Experts contributed to our understanding of the situation.

Taking all this into consideration and keeping in view the escape from Central prison by notorious criminal Jaishankar, the committee *has made 10 important recommendations to Government*. There are no doubts in our mind that by implementing them we will go a long way in making our prisons the best in the country. It is therefore earnestly requested that these recommendations be implemented at the earliest.

Attention of Government has also been drawn to 20 other relevant issues in the field of Prison Management. The Government is requested to consider them in course of time.

## DETAIL OF THE PERI METER WALL LENGTH

| Sl. NO. | Name of the Central Prison | Length In Mts |
|---|---|---|
| 1 | Mysore | 540 Mts |
| 2 | Belgaum (Outer wall) | 1197 Mts |
| 3 | Another | 259 Mts |
| 4 | Gulbarga | 1002 Mts |
| 5 | Bellary | 1207 Mts |
| 6 | Bijapur | 466.1 Mts |
| 7 | Inner | 480.4 Mts |
| 8 | Dharwad | 1094 Mts |
| 9 | Bangalore | 1600 Mts |
| | **Total Lengh** | **7845.5 Mts** |

665

# GOVERNMENT OF KARNATAKA

# INQUIRY REPORT

# ON

# ALLEGED IRREGULARITIES IN BENGALURU CENTRAL JAIL

BY

VINAY KUMAR, I.A.S (RETD.)

## Observations and Recommendations

In the process of the Inquiry into seven specific issues, as well as matters related to them, we had an opportunity to see the overall situation of the Bangalore Central Prison. In this context, we had detailed discussions with Sri N S Megarikh IPS, who took over as the new Chief of the Prisons Department in July 2017 and Sri P K Garg IPS, Principal Secretary to Government, Home Department. Our discussions have also taken into account the Model Prison Manual brought out by the Government of India in 2016.

As of now, it has 4367 prisoners as against authorised capacity of 3016 i.e. over populated to the extent of 44%. But, it is managed by staff strength which is just 46% of the sanctioned strength. Staff deficit is highest at the crucial level i.e. the post of warders. With nearly 61% vacancy in the level of warders, the Prison management has tended to use the services of convicts themselves. Statements of witnesses recoded in the course of the inquiry have themselves raised the issue of security compromise due to shortage of warders, in the context of the incidents like attack on the Chief Medical Officer and misbehaviour of another prisoner with a female nurse. The staff position of the Prison Hospital is not much better. It works with 55% of the sanctioned strength.

We discussed the matter of staff deficit with Sir P K Garg IPS, Principal Secretary to Government, Home Department and have learnt that very recently the issue has been addressed. On 8.3.2017, the Home Department has issued an order sanctioning 1811 new posts, to the Prisons Department, as a whole. It includes 1434 posts of warders and 213 of Head warders. They are programmed to be recruited over a period of five years. As for the Hospital, it is heartening to learn from Sri P K Garg that permission to fill the vacancies of doctors and paramedical staff on contract basis is being considered.

Karnataka Prison Manual was last revised in 1978, nearly forty years ago. Several new issues, particularly those coming with the growth of technology, have come up in prison management. We were informed by the Principal Secretary, Sri P K Garg that the process of revision is nearly completed. But, from our discussion we also find that it is largely

based on the model code brought out by the Government of India in 2006. In the interregnum, the Government of India has already revised and redone the model code in 2016. Therefore, we request the Home Department to consider the recommendations in the Model Prison Manual brought out in 2016, even at this late stage.

The phenomenal growth in the area of mobile telephony has now become a major technological issue in prison management. Information on the Internet shows that we are not alone in this. Other developed countries too are grappling with it. From our discussions with the ECIL, Principal Secretary Home Department and the head of the Prisons Department we find that there are growing issues with use of jammers for blocking mobile phone signals. In the case of Bengaluru prison, the current status (at the time of our last visit on 8.8.2017) is that all 19 jammers are not functioning for the last one year. No single measure can be suggested as the final answer. But, as the first step, the existing jammers need to be made operational forthwith and used in conjunction with effective physical checking to prevent use of mobile phones by the prisoners.

Incidence of drug abuse appears to be very high. 18 out of 25 prisoners, who were given the urine test, have tested positive for drug dependence. The then Chief Superintendent himself said that nearly 80% prisoners are addicted to ganja. According to him it is smuggled into the Prison by prisoners returning from parole and also by visitors of Under Trial Prisoners. For de-addiction treatment, the prisoners who test positive are referred to the NIMHANS, Bengaluru. But action taken so far to measure and contain the magnitude of the problem appears to be very little. Prison doctors themselves have stated that when they indent for 500 testing kits for drug abuse, they receive 50 or even less. On this issue, the Model Prison Manual 2016 of the Government of India has made certain specific recommendations to prevent passing of prohibited articles by the visitors to the prisoners during interviews.

We had a video conference with the 20 prisoners who were shifted to different Prisons on 15.7.2017. They feel that they have been

punished for complaining to the then DIG, Prisons, D Roopa. Their common complaints are—

a. Paroles not being allowed
b. Abusive behaviour of senior officers
c. Bad food, and
d. Not getting early release on good behaviour.

We have also seen the video recording of the developments in the afternoon of 15.7.2017. While grievances of the prisoners would be genuine to an extent, their growing numbers and belligerency of representation was palpable. In her remarks in the visitors book, the DIG, Mrs D Roopa advised calm and patience in dealing with such a matter. In our view advance preparation and gathering of information on likely grievances would be equally important for positive outcome.

The Inquiry has also brought out another area requiring professional consideration. It can reasonably be argued that an individual, with high political exposure when he or she arrives at a prison to be kept there for a term determined by the court, would have faced a degree of threat to his/her personal security. But, in order to position appropriate security measures, the prison authorities would first need assessment of an expert intelligence agency as to the nature and source of the threat. If such assessment is not available, the arrangements may tend to be excessive and subjective. Significantly, the Model Prison Manual 2016, brought out by the Government of India has even suggested to involve the local intelligence branch to gather intelligence within the prison.

The system of CCTVs has played a very important part in monitoring. Going by what our team observed during the Inquiry, there is need for judicious extension of the same. The special visitors' room and the womens barracks would recommend themselves for priority coverage. Of course, the location of the cameras will need to ensure that privacy concerns are not overlooked.

---

Confidential.

# ಕರ್ನಾಟಕ ಸರ್ಕಾರ

(ಪೊಲೀಸ್ ಇಲಾಖೆ)

ಸಂಖ್ಯೆ: ಎಡಿಜಿಪಿ(ಸಿಎಲ್‌&ಎಂ)/ವಿಚಾರಣೆ/2022

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ಕಛೇರಿ,
ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ,
ನಂ.1, ಎಂ.ಜಿ.ರಸ್ತೆ, ಬೆಂಗಳೂರು.
ದಿನಾಂಕ: 07-06-2022

ಪೊಲೀಸ್ ಮಹಾನಿರ್ದೇಶಕರು,
ಕಾರಾಗೃಹ ಮತ್ತು ಸುಧಾರಣಾ ಸೇವೆಗಳು,
ಕರ್ನಾಟಕ ರಾಜ್ಯ,
ಬೆಂಗಳೂರು.

ಮಾನ್ಯರೆ,

ವಿಷಯ: ದಿನಾಂಕ: 25-01-2022 ರಂದು ವಿವಿಧ ದೃಶ್ಯ ಮಾಧ್ಯಮಗಳಲ್ಲಿ ಬೆಂಗಳೂರು ಕೇಂದ್ರ ಕಾರಾಗೃಹದ ಅಧೀಕ್ಷಕರ ವಿರುದ್ಧ ಸುದ್ದಿ ಪ್ರಸಾರವಾದ ಪ್ರಕರಣದ ಸಂಬಂಧದ ವಿಚಾರಣೆಯ ಅಂತಿಮ ವರದಿಯನ್ನು ಸಲ್ಲಿಸುತ್ತಿರುವ ಕುರಿತು.

ಉಲ್ಲೇಖ: [illegible] ಆದೇಶ ಸಂಖ್ಯೆ: ಹಜಾಡ/09/ಪಿಆರ್‌ಇ/2022 ದಿ: 29-01-2022.

[illegible] ಆದೇಶದಲ್ಲಿ ದಿನಾಂಕ: 25-01-2022 ರಂದು [illegible] ಕೇಂದ್ರ ಕಾರಾಗೃಹದ ಅಧೀಕ್ಷಕರ ವಿರುದ್ಧ ಸುದ್ದಿ ಪ್ರಸಾರವಾದ ಪ್ರಕರಣಕ್ಕೆ [illegible] ಮಾಧ್ಯಮಗಳಲ್ಲಿ [illegible] ಅಂಶಗಳನ್ನು ಗುರುತಿಸಿ ಕೂಲಂಕುಷವಾಗಿ ವಿಚಾರಣೆ ನಡೆಸಿ ಕೂಡಲೇ ವರದಿ [illegible] ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.

[illegible] ಕೂಲಂಕುಷವಾಗಿ ವಿಚಾರಣೆ ನಡೆಸಿ, ವಿಚಾರಣೆಯ ಅಂತಿಮ [illegible] ಸಂಪುಟ-1 ವಿಚಾರಣಾ ವರದಿ ಹಾಗೂ ಸಂಪುಟ-2 ವಿಚಾರಣಾ ವರದಿಯ [illegible] ಮುಂದಿನ ಅಗತ್ಯ ಕ್ರಮಕ್ಕಾಗಿ ನಿವೇದಿಸಿಕೊಳ್ಳಲಾಗಿದೆ.

[illegible]

ತಮ್ಮ ವಿಶ್ವಾಸಿ,

(ಎಸ್. ಮುರುಗನ್, ಐ.ಪಿ.ಎಸ್.)
ವಿಚಾರಣಾಧಿಕಾರಿಗಳು ಹಾಗೂ
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು
(ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ)
ಬೆಂಗಳೂರು.

## ವಿಚಾರಣೆಯ ಸಾರಾಂಶ ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮಗಳು:

*ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 09 ಪಿಆರ್‌ಇ 2022 ಬೆಂಗಳೂರು ದಿನಾಂಕ: 29-01-2022* ರಲ್ಲಿ ದಿನಾಂಕ: 25-01-2022 ರಂದು ವಿವಿಧ ದೃಶ್ಯ ಮಾಧ್ಯಮಗಳಲ್ಲಿ ಬೆಂಗಳೂರು ಕೇಂದ್ರ ಕಾರಾಗೃಹದ ಆಡಳಿತದ ವಿರುದ್ಧ ಸುದ್ದಿ ಪ್ರಸಾರವಾದ ಪ್ರಕರಣಕ್ಕೆ ಸಂಬಂಧಿಸಿದಂತೆ, ತಪ್ಪಿತಸ್ಥ ಅಧಿಕಾರಿ / ಸಿಬ್ಬಂದಿಗಳನ್ನು ಗುರುತಿಸಿ ಕೂಲಂಕುಷವಾಗಿ ವಿಚಾರಣೆ ನಡೆಸಿ ತುರ್ತಾಗಿ ವರದಿ ಸಲ್ಲಿಸಲು ಆದೇಶಿಸಲಾದ ಮೇರೆಗೆ ವಿವಿಧ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾದ ಸುದ್ದಿಗಳ 15 ವಿಡಿಯೋ ದೃಶ್ಯಗಳು ಹಾಗೂ ಸುವರ್ಣ ನ್ಯೂಸ್‌ನ ಸುದ್ದಿ ಸಂಪಾದಕರಾದ ಶ್ರೀ ಅಜಿತ್ ಹನುಮಕ್ಕನವರ್ ರವರು ನೀಡಿರುವ ಸಿ.ಡಿ. ಯಲ್ಲಿರುವ ಕಚ್ಚಾ ತುಣುಕುಗಳಲ್ಲಿ ಕಾರಾಗೃಹದ ಒಟ್ಟು 17 ಅಧಿಕಾರಿ / ಸಿಬ್ಬಂದಿಗಳು ಹಾಗೂ 25 ಬಂಧಿಗಳನ್ನು ಗುರುತಿಸುವ ಅಧಿಕಾರಿ / ಸಿಬ್ಬಂದಿಗಳು ಗುರುತಿಸಿ ಹೇಳಿಕೆ ನೀಡಿರುತ್ತಾರೆ.

ಗುರುತಿಸುವ ಅಧಿಕಾರಿ / ಸಿಬ್ಬಂದಿಗಳು ಗುರುತಿಸಿರುವ 17 ಅಧಿಕಾರಿ / ಸಿಬ್ಬಂದಿಗಳ ವಿಚಾರಣೆ ನಡೆಸಿ ಅವರುಗಳ ಹೇಳಿಕೆ ಪಡೆದುಕೊಳ್ಳಲಾಗಿದ್ದು, ಅವರುಗಳ ಭಾವಚಿತ್ರಗಳನ್ನು( 7 ಅಧಿಕಾರಿ / ಸಿಬ್ಬಂದಿಗಳ ಭಾವಚಿತ್ರಗಳನ್ನು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಶ್ರೀ ಸಂತೋಷ ಎಸ್.ಮುಂಜೆ ವೀಕ್ಷಕರು, ಬೆಂಗಳೂರು ಕೇಂದ್ರ ಕಾರಾಗೃಹ ರವರು ಸೆರೆಹಿಡಿದಿರುತ್ತಾರೆ, ಉಳಿದ 10 ಅಧಿಕಾರಿ / ಸಿಬ್ಬಂದಿಗಳ ಭಾವಚಿತ್ರಗಳನ್ನು ಶ್ರೀ ಚಂದನ್ ಜೆ. ಪಟೇಲ್ ಸಹಾಯಕ ಅಧೀಕ್ಷಕರು, ಬೆಂಗಳೂರು ಕೇಂದ್ರ ಕಾರಾಗೃಹ ರವರು ವಿಚಾರಣಾ ಸಮಯದಲ್ಲಿ ಸೆರೆಹಿಡಿದಿರುತ್ತಾರೆ) ಹಾಗೂ ವಿವಿಧ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾದ ದೃಶ್ಯಗಳ ತುಣುಕುಗಳು ಮತ್ತು ಸಿ.ಡಿ. ಯಲ್ಲಿರುವ ಕಚ್ಚಾ ತುಣುಕುಗಳನ್ನು ನಿರ್ದೇಶಕರು, ರಾಜ್ಯ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು (ಎಫ್.ಎಸ್.ಎಲ್.) ರವರಿಗೆ ಕಳುಹಿಸಿಕೊಟ್ಟು, ತಾಳೆಯಾಗುತ್ತಿರುವ ಬಗ್ಗೆ ವರದಿಯನ್ನು ಪಡೆದುಕೊಳ್ಳಲಾಗಿರುತ್ತದೆ. ವಿಚಾರಣೆಯ ಸಂದರ್ಭದಲ್ಲಿ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿರುವ ಒಬ್ಬ ಬಂಧಿಯ ಮೊಬೈಲ್ ಸಂಖ್ಯೆ ದೊರೆತಿದ್ದು, ಈ ಮೊಬೈಲ್ ಸಂಖ್ಯೆಯ ಸಿ.ಡಿ.ಆರ್. ವಿಶ್ಲೇಷಣೆ ಮಾಡಿ ಕಾರಾಗೃಹದಲ್ಲಿ ಬಳಕೆಯಾಗುತ್ತಿರುವ ಮೊಬೈಲ್‌ಗಳು ಹಾಗೂ ಸಿಬ್ಬಂದಿಗಳೊಂದಿಗೆ ಸಂಪರ್ಕವಿರುವ ಬಗ್ಗೆ ದೃಢಪಡಿಸಿಕೊಳ್ಳಲಾಗಿರುತ್ತದೆ.

ಗುರುತಿಸುವ ಅಧಿಕಾರಿ / ಸಿಬ್ಬಂದಿಗಳು ಗುರುತಿಸಿರುವ 25 ಬಂಧಿಗಳ ಪೈಕಿ 21 ಬಂಧಿಗಳ ವಿಚಾರಣೆ ನಡೆಸಿ ಅವರುಗಳ ಹೇಳಿಕೆ ಪಡೆದುಕೊಳ್ಳಲಾಗಿರುತ್ತದೆ. ಉಳಿದಂತೆ ಬಿಡುಗಡೆಗೊಂಡಿರುವ 4 ಬಂಧಿಗಳ ಪೈಕಿ ಇಬ್ಬರು ಬಂಧಿಗಳು ಮೃತಪಟ್ಟಿರುವುದಾಗಿ ತಿಳಿದು ಬಂದಿದ್ದು, ಒಬ್ಬ ಬಂಧಿಯು ಕಾರಾಗೃಹದ ದಾಖಲಾತಿಯಲ್ಲಿ ನೀಡಿರುವ ವಿಳಾಸದಲ್ಲಿ ವಾಸವಾಗಿರುವುದಿಲ್ಲ ಹಾಗೂ ಮತ್ತೊಬ್ಬ ಬಂಧಿಯು ವಿಚಾರಣೆಗೆ ಹಾಜರಾಗಿರುವುದಿಲ್ಲ.

ವಿವಿಧ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾದ ದೃಶ್ಯಗಳ ತುಣುಕುಗಳಲ್ಲಿ ಮತ್ತು ಸುವರ್ಣ ನ್ಯೂಸ್‌ನ ಸುದ್ದಿ ಸಂಪಾದಕರಾದ ಶ್ರೀ ಅಜಿತ್ ಹನುಮಕ್ಕನವರ್ ರವರು ನೀಡಿರುವ ಸಿ.ಡಿ. ಯಲ್ಲಿರುವ ಕಚ್ಚಾ ತುಣುಕುಗಳಲ್ಲಿ ಗುರುತಿಸಲ್ಪಟ್ಟಿರುವ 17 ಅಧಿಕಾರಿ / ಸಿಬ್ಬಂದಿಗಳಲ್ಲಿ 16 ಅಧಿಕಾರಿ / ಸಿಬ್ಬಂದಿಗಳು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ದೃಢಪಟ್ಟಿರುತ್ತದೆ. ಹಾಗಾಗಿ, ಸದರಿ ಅಧಿಕಾರಿ / ಸಿಬ್ಬಂದಿಯವರ ವಿರುದ್ಧ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇರುತ್ತದೆ.

Table 1: *ಅಧಿಕಾರಿ / ಸಿಬ್ಬಂದಿಗಳ ಮೇಲೆ ತೆಗೆದುಕೊಳ್ಳಬಹುದಾದ ಕ್ರಮಗಳು*

| ಅಧಿಕಾರಿ / ಸಿಬ್ಬಂದಿಗಳ ವಿವರ | ತೆಗೆದುಕೊಳ್ಳಬಹುದಾದ ಕ್ರಮಗಳು |
|---|---|
| ಚಿದಾನಂದ ಕೋಟ್ಯಾಳ್, ವೀಕ್ಷಕರು, ಕೇಂದ್ರ ಕಾರಾಗೃಹ, ಬೆಳಗಾವಿ | ಕಠಿಣ ಶಿಸ್ತು ಕ್ರಮ |
| ಹೆಚ್.ಓ.ಗಜೇಂದ್ರ ಕುಮಾರಪ್ಪ, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಕಠಿಣ ಶಿಸ್ತು ಕ್ರಮ |
| ಎನ್.ಅಶೋಕ್, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಕಠಿಣ ಶಿಸ್ತು ಕ್ರಮ |
| ಎಸ್.ಎನ್.ರಮೇಶ್, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಕಠಿಣ ಶಿಸ್ತು ಕ್ರಮ |
| ಮಹಂತೇಶ್ ಬಡಿಗೇರ್, ಸಹಾಯಕ ಜೈಲರ್, ತಾಲ್ಲೂಕು ಉಪ ಕಾರಾಗೃಹ, ಹುಬ್ಬಳ್ಳಿ | ಕಠಿಣ ಶಿಸ್ತು ಕ್ರಮ |
| ಬಿ.ಎಂ.ನಾಷ್ಠಿ, ಸಹಾಯಕ ಜೈಲರ್, ಜಿಲ್ಲಾ ಕಾರಾಗೃಹ, ಚಿತ್ರದುರ್ಗ | ಕಠಿಣ ಶಿಸ್ತು ಕ್ರಮ |
| ಎಲ್.ಲೋಕೇಶ್, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಕಲಬುರಗಿ | ಕಠಿಣ ಶಿಸ್ತು ಕ್ರಮ |
| ಶಿವಾನಂದ ಕೆ. ಗಾಣಿಗೇರ್, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಕಠಿಣ ಶಿಸ್ತು ಕ್ರಮ |
| ಮಹದೇವನಾಯ್ಕ ಪಿ., ಅಧೀಕ್ಷಕರು, ಕೇಂದ್ರ ಕಾರಾಗೃಹ, ಶಿವಮೊಗ್ಗ | ಅತೀ ಕಠಿಣ ಶಿಸ್ತು ಕ್ರಮ |
| ಎಸ್.ಎಂ.ಕರಗಾವಿ, ಸಹಾಯಕ ಜೈಲರ್, ಕೇಂದ್ರ ಕಾರಾಗೃಹ, ಬೆಂಗಳೂರು | ಶಿಸ್ತು ಕ್ರಮ |
| ಉಮೇಶ್ ಆರ್.ದೊಡ್ಡಮನಿ, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಶಿಸ್ತು ಕ್ರಮ |
| ಪಿ.ಲೋಕೇಶ್, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಶಿಸ್ತು ಕ್ರಮ |
| ಭೀಮಣ್ಣ ನೇದಲಗಿ, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಶಿಸ್ತು ಕ್ರಮ |
| ವಿ.ಎಂ.ಪ್ರಸಾದ್, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ವಿಜಯಪುರ | ಶಿಸ್ತು ಕ್ರಮ |
| ಎಂ.ಎಸ್.ಪಾಟೀಲ್, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಶಿಸ್ತು ಕ್ರಮ |
| ಲಕ್ಷ್ಮಣ ಎಸ್. ಬಿರಾದಾರ, ವೀಕ್ಷಕರು, ಜಿಲ್ಲಾ ಕಾರಾಗೃಹ, ರಾಯಚೂರು | ಶಿಸ್ತು ಕ್ರಮ |

ವಿವಿಧ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾದ ದೃಶ್ಯಗಳ ತುಣುಕುಗಳಲ್ಲಿ ಮತ್ತು ಸುವರ್ಣ ನ್ಯೂಸ್‌ನ ಸುದ್ದಿ ಸಂಪಾದಕರಾದ ಶ್ರೀ ಅಜಿತ್ ಹನುಮಕ್ಕನವರ್ ರವರು ನೀಡಿರುವ ಸಿ.ಡಿ. ಯಲ್ಲಿರುವ ಕಚ್ಚಾ ತುಣುಕುಗಳಲ್ಲಿ ಗುರುತಿಸಲ್ಪಟ್ಟಿರುವ 25 ಬಂಧಿಗಳಲ್ಲಿ 11 ಬಂಧಿಗಳು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ದೃಢಪಟ್ಟಿರುತ್ತದೆ. ಹಾಗಾಗಿ ಸದರಿ ಬಂಧಿಗಳ ವಿರುದ್ಧ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇರುತ್ತದೆ.

Table 2: *ಬಂಧಿಗಳ ಮೇಲೆ ತೆಗೆದುಕೊಳ್ಳಬಹುದಾದ ಕ್ರಮಗಳು:*

| ಬಂಧಿಗಳ ವಿವರ | ತೆಗೆದುಕೊಳ್ಳಬಹುದಾದ ಕ್ರಮಗಳು |
|---|---|
| ಜಮೀರ್ @ ಬಚ್ಚನ್ ತಂದೆ ಚಾಂದಪೀರ್, ವಿಚಾರಣಾ ಬಂಧಿ ಸಂಖ್ಯೆ: 18123/22, ಕೇಂದ್ರ ಕಾರಾಗೃಹ, ಕಲಬುರಗಿ (ಇತನ ವಿರುದ್ಧ ಒಟ್ಟು 54 ಪ್ರಕರಣಗಳಿದ್ದು, ರೌಡಿ ಶೀಟರ್ ಹಾಗೂ ಕೋಕಾ ಪ್ರಕರಣದ ಬಂಧಿಯಾಗಿರುತ್ತಾನೆ) | ತೀವ್ರತರದ ಕಾನೂನು ಹಾಗೂ ಆಡಳಿತಾತ್ಮಕ ಕ್ರಮ ಹಾಗೂ ಮುಂದಿನ ದಿನಗಳಲ್ಲಿ ಕೇಂದ್ರ ಕಾರಾಗೃಹ, ಬೆಂಗಳೂರು ಹಾಗೂ ಶಿವಮೊಗ್ಗ ಗಳಲ್ಲಿ ಸದರಿ ಬಂಧಿಯು ದಾಖಲಾಗದಂತೆ ಕ್ರಮವಹಿಸುವುದು |
| ಸೈಯದ್ ಮುಬಾರಕ್, ಬಿಡುಗಡೆಗೊಂಡ ವಿಚಾರಣಾ ಬಂಧಿ ಸಂಖ್ಯೆ: 4463/2021 ಕೇಂದ್ರ ಕಾರಾಗೃಹ, ಬೆಂಗಳೂರು (ಬಾಂಬೆ ಸಲಿಂ ಗ್ಯಾಂಗ್) | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ಅಜ್ಮತ್ ಉಲ್ಲಾ, ಬಿಡುಗಡೆಗೊಂಡ ವಿಚಾರಣಾ ಬಂಧಿ ಸಂಖ್ಯೆ: 8373/20,ಕೇಂದ್ರ ಕಾರಾಗೃಹ, ಬೆಂಗಳೂರು (ಇತನ ವಿರುದ್ಧ ಒಟ್ಟು 3 ಪ್ರಕರಣಗಳು ದಾಖಲಾಗಿದ್ದು, ಬಾಂಬೆ ಸಲೀಂ ಸಹೋದರನಾಗಿರುತ್ತಾನೆ) | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ಗಂಗಾಧರ್, ಬಿಡುಗಡೆಗೊಂಡ ಸಜಾ ಬಂಧಿ ಸಂಖ್ಯೆ: 18774, ಕೇಂದ್ರ ಕಾರಾಗೃಹ, ಬೆಂಗಳೂರು: | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ಶಿವಕುಮಾರ್, ಬಿಡುಗಡೆಗೊಂಡ ಸಜಾ ಬಂಧಿ ಸಂಖ್ಯೆ: 7936, ಕೇಂದ್ರ ಕಾರಾಗೃಹ, ಬೆಂಗಳೂರು | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ನಯಾಜ್, ಬಿಡುಗಡೆಗೊಂಡ ವಿಚಾರಣಾ ಬಂಧಿ ಸಂಖ್ಯೆ: 5325/20 ಕೇಂದ್ರ ಕಾರಾಗೃಹ, ಬೆಂಗಳೂರು: | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ಬಸವರಾಜ್, ಬಿಡುಗಡೆಗೊಂಡ ಸಜಾ ಬಂಧಿ ಸಂಖ್ಯೆ: 17055, ಕೇಂದ್ರ ಕಾರಾಗೃಹ, ಬೆಂಗಳೂರು | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ನಾರಾಯಣ @ ಜೆ.ಸಿ.ಬಿ. ನಾರಾಯಣ, ಬಿಡುಗಡೆಗೊಂಡ ವಿಚಾರಣಾ ಬಂಧಿ ಸಂಖ್ಯೆ: 8946/2018, ಕೇಂದ್ರ ಕಾರಾಗೃಹ, ಬೆಂಗಳೂರು (ರೌಡಿ ಶೀಟರ್) | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ನಜೀರ್ ಟಿ., ಸಜಾ ಬಂಧಿ ಸಂಖ್ಯೆ: 1928, ಕೇಂದ್ರ ಕಾರಾಗೃಹ, ಬೆಂಗಳೂರು | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ಲಿಯಾಕತ್ ಹುಸೇನ್, ಸಜಾ ಬಂಧಿ ಸಂಖ್ಯೆ: 10076, ಕೇಂದ್ರ ಕಾರಾಗೃಹ, ಬೆಂಗಳೂರು | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ಜಾನ್ ಆಸಿರ್, ಸಜಾ ಬಂಧಿ ಸಂಖ್ಯೆ: 12442, ಕೇಂದ್ರ ಕಾರಾಗೃಹ, ಬೆಂಗಳೂರು | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ಸೈಯದ್ ಅಬ್ದುಲ್ ರೆಹಮಾನ್, ವಿಚಾರಣಾ ಬಂಧಿ ಸಂಖ್ಯೆ: 12525/14, ಕೇಂದ್ರ ಕಾರಾಗೃಹ, ಬೆಂಗಳೂರು | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |
| ಸತ್ಯಪ್ರಕಾಶ, ವಿಚಾರಣಾ ಬಂಧಿ ಸಂಖ್ಯೆ: 1688/13, ಕೇಂದ್ರ ಕಾರಾಗೃಹ, ಬೆಂಗಳೂರು | ಕಾನೂನು ಹಾಗೂ ಆಡಳಿತಾತ್ಮಕ ಕ್ರಮ |

**ಬೆಂಗಳೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರು ಹಾಗೂ ಅಧೀಕ್ಷಕರ ವಿರುದ್ಧ ತೆಗೆದುಕೊಳ್ಳಬಹುದಾದ ಕ್ರಮ:**

| ಅಧಿಕಾರಿಯ ವಿವರ | ತೆಗೆದುಕೊಳ್ಳಬಹುದಾದ ಕ್ರಮಗಳು |
|---|---|
| ಶ್ರೀಮತಿ ಆರ್.ಲತಾ, ಅಧೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಶಿಸ್ತು ಕ್ರಮ |
| ಡಾ|| ಪಿ.ರಂಗನಾಥ, ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು | ಮುಂದಿನ ಕ್ರಮ |

# ಸಲಹೆಗಳು ಮತ್ತು ತೆಗೆದುಕೊಳ್ಳಬೇಕಾದ ಕ್ರಮಗಳು

ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಸಂಬಂಧಿಸಿದಂತೆ ಕೆಲವು ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾದ ವಿಡಿಯೋಗಳ ಕುರಿತು ಕಾರಾಗೃಹದ ಅಧಿಕಾರಿ / ಸಿಬ್ಬಂದಿ, ಕೆ.ಎಸ್.ಐ.ಎಸ್.ಎಫ್ ಅಧಿಕಾರಿ / ಸಿಬ್ಬಂದಿ ಹಾಗೂ ಬಂಧಿಗಳ ವಿಚಾರಣಾ ಹೇಳಿಕೆಗಳನ್ನು ವಿಶ್ಲೇಷಿಸಿ, ಕೆಲವು ಆಡಳಿತಾತ್ಮಕ ಸುಧಾರಣೆಗಳನ್ನು ಕಾರಾಗೃಹದ ಭದ್ರತೆ, ಆಡಳಿತ, ತಂತ್ರಜ್ಞಾನ ಮತ್ತು ಆಧುನೀಕರಣಗಳಿಗನುಸಾರವಾಗಿ ಈ ಕೆಳಗಿನಂತೆ ವಿವರಿಸಲಾಗಿದ್ದು, ಸಂಬಂಧಿಸಿದವರು ಅನುಸರಿಸಬೇಕಾಗಿರುತ್ತದೆ.

**ಭದ್ರತೆ:**

1. **ಸರಕು ಸಾಗಣೆ ಮತ್ತು ಸರಕು ಸಾಗಣೆ ವಾಹನಗಳ ತಪಾಸಣೆ:**

ಸರಕು ಸಾಗಣೆ ವಾಹನಗಳಲ್ಲಿಯೂ ನಿಷೇಧಿತ ವಸ್ತುಗಳನ್ನು ಕಾರಾಗೃಹದೊಳಗೆ ಸಾಗಿಸಿರುವುದು ವ್ಯಾಪಕವಾಗಿ ಚರ್ಚಿಸಲ್ಪಡುತ್ತಿದ್ದು, ಮುಂದಿನ ದಿನಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳತಕ್ಕದ್ದು,

a) ಕಾರಾಗೃಹಕ್ಕೆ ಅಗತ್ಯ ಸರಕು ಸಾಮಗ್ರಿಗಳನ್ನು ಪೂರೈಸುವ ಗುತ್ತಿಗೆ ದಾರರ ಗೋಡಾನ್‌ಗಳಿಗೆ ಒಬ್ಬ ಅಧಿಕಾರಿಯನ್ನು ನೇಮಿಸಿ, ಸಾಮಗ್ರಿಗಳನ್ನು ಪ್ಯಾಕಿಂಗ್ ಮಾಡಿ ವಾಹನಗಳಿಗೆ ತುಂಬಿಸುವುದನ್ನು ವೀಕ್ಷಿಸಿ Camera ದಲ್ಲಿ ಚಿತ್ರೀಕರಣ ಮಾಡುವುದು. ಚಿತ್ರೀಕರಿಸಿರುವ ದೃಶ್ಯಾವಳಿಗಳನ್ನು ಪ್ರತಿನಿತ್ಯ ಹಿರಿಯ ಅಧಿಕಾರಿಗಳು ಮೇಲ್ವಿಚಾರಣೆ ನಡೆಸುವುದು.

b) ಸರಕು ಸಾಗಣೆ ವಾಹನವು ಕಾರಾಗೃಹ ಸಂಕೀರ್ಣಕ್ಕೆ ಬಂದ ನಂತರ ಕೆ.ಎಸ್.ಐ.ಎಸ್.ಎಫ್ ಸಿಬ್ಬಂದಿಯವರು ವಾಹನವನ್ನು ಟ್ರಾಫಿಕ್ ಪಾಯಿಂಟ್ ಅಥವಾ ಪ್ರವೇಶ ದ್ವಾರದಲ್ಲಿ ತಪಾಸಣೆ ಮಾಡುವುದು. ತಪಾಸಣೆ ನಡೆಸುವುದನ್ನು ತಪ್ಪದೇ ಚಿತ್ರೀಕರಿಸುವುದು.

c) ವಾಹನದಲ್ಲಿರುವ ಸರಕು ಸಾಮಗ್ರಿಗಳನ್ನು ಕೆ.ಎಸ್.ಐ.ಎಸ್.ಎಫ್ ಸಿಬ್ಬಂದಿಗಳು Cargo Scanner ನ ಮೂಲಕ ತಪಾಸಣೆ ನಡೆಸುವುದು.

d) ಸರಕು ಸಾಮಗ್ರಿಗಳ ವಾಹನಗಳು ಅಗತ್ಯ ಸಂದರ್ಭದಲ್ಲಿ ಕಾರಾಗೃಹದ ಒಳ ಪ್ರವೇಶಿಸುವಾಗ, ಆ ವಾಹನವು ಕಾರಾಗೃಹದ ಒಳ ಪ್ರವೇಶಿಸಿ ಹಿಂದಿರುಗುವ ವರೆಗೆ ವಾಹನದ ಪರಿವೀಕ್ಷಣೆಗೆ ಒಬ್ಬ ಜೈಲರ್‌ರನ್ನು ನೇಮಿಸುವುದು. ಸಿ.ಸಿ.ಟಿ.ವಿ ಕ್ಯಾಮೆರಾವನ್ನು ಅಳವಡಿಸಿರುವಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಿ, ಸರಕು ಸಾಮಗ್ರಿಗಳನ್ನು ಇಳಿಸುವುದು. ಸದರಿ ದೃಶ್ಯಾವಳಿಗಳನ್ನು Camera ದಲ್ಲಿ ಚಿತ್ರೀಕರಣ ಮಾಡುವುದು.

e) ಸರಕು ಸಾಮಗ್ರಿ ವಾಹನಗಳನ್ನು ಕಾರಾಗೃಹಗಳ ಉಪ ಮಹಾ ನಿರೀಕ್ಷಕರು, ದಕ್ಷಿಣ ವಲಯ / ಕೆ.ಎಸ್.ಐ.ಎಸ್.ಎಫ್. ನ ಕೇಂದ್ರ ಕಛೇರಿಯ ಪೊಲೀಸ್ ಅಧೀಕ್ಷಕರವರ ಮಟ್ಟದ ಅಧಿಕಾರಿಗಳು ಅನಿರೀಕ್ಷಿತ ತಪಾಸಣೆ ನಡೆಸುವುದು.

2. **Courier ನಿರ್ವಹಣೆ:**

ಪ್ರಸ್ತುತ ಯಾರು ಬೇಕಾದರೂ Courier ಮೂಲಕ ವಸ್ತುಗಳನ್ನು ಕಾರಾಗೃಹದಲ್ಲಿರುವ ಬಂಧಿಗಳಿಗೆ ಕಳುಹಿಸಬಹುದಾಗಿದ್ದು, ಇದರಿಂದ ನಿಷೇಧಿತ ವಸ್ತುಗಳು ಕಾರಾಗೃಹದೊಳಗೆ ಪ್ರವೇಶಿಸಿರುವುದು ಕಂಡು ಬಂದಿದ್ದು, ಎಫ್.ಐ.ಆರ್ ಕೂಡಾ ದಾಖಲಾಗಿರುತ್ತವೆ. ಆದ್ದರಿಂದ ಮುಂದಿನ ದಿನಗಳಲ್ಲಿ ಬಂಧಿಗಳ ರಕ್ತ ಸಂಬಂಧಿಕರಿಂದ ಮಾತ್ರ ಕಳುಹಿಸಲ್ಪಟ್ಟ ನಿರ್ದಿಷ್ಟ ಪ್ರಮಾಣದ ವಸ್ತುಗಳನ್ನು Courier ನಿಂದ ಪಡೆಯಲು ಅನುಮತಿಸುವುದು ಮತ್ತು ಈ ಉದ್ದೇಶಕ್ಕಾಗಿ ಇಲಾಖೆ ವತಿಯಿಂದ ಸೂಕ್ತ ಕಾನೂನಿನ ರಚನೆ ಮಾಡುವುದು ಅಗತ್ಯವಾಗಿರುತ್ತದೆ.

### 3. ಗರಿಷ್ಠ ಭದ್ರತಾ ಕೊಠಡಿಗಳಿಗೆ ಸಿ.ಸಿ.ಟಿ.ವಿ. ಕ್ಯಾಮೆರಾಗಳ ಅವಶ್ಯಕತೆ:

ಗರಿಷ್ಠ ಭದ್ರತಾ ವಿಭಾಗವು ಒಂದು ಸೂಕ್ಷ್ಮ ಸ್ಥಳವಾಗಿದ್ದು, ಇಲ್ಲಿ ಗೂಂಡಾ ಬಂಧಿಗಳು, ನಕ್ಸಲ್ ಬಂಧಿಗಳು ಮತ್ತು ಬಾಂಬ್ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಬಂಧಿಗಳನ್ನು ಬಂಧಿಸಿಡಲಾಗುತ್ತದೆ. ಇಂತಹ ಬಂಧಿಗಳಿಗೆ ಮೊಬೈಲ್‌ನಂತಹ ಸಂವಹನ ಸಾಧನಗಳು ಹಾಗೂ ಇತರೆ ನಿಷೇಧಿತ ವಸ್ತುಗಳು ದೊರೆತಲ್ಲಿ ಸಮಾಜದ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಸಂಭವವಿರುತ್ತದೆ. ಇಂತಹ ಬಂಧಿಗಳು ದಾಖಲಾಗಿರುವ ಕೊಠಡಿಗಳಿಗೆ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸುವುದು ಅಗತ್ಯವಾಗಿರುತ್ತದೆ.

### 4. ಕಾರಾಗೃಹ ಸಿಬ್ಬಂದಿಗಳಿಗೆ ಊಟದ ವ್ಯವಸ್ಥೆ:

ಕಾರಾಗೃಹದಲ್ಲಿ ಕರ್ತವ್ಯನಿರತ ಸಿಬ್ಬಂದಿಗಳಿಗೆ ಪ್ರಸ್ತುತ ರಾತ್ರಿ ಪಹರೆಯಲ್ಲಿ ಮಾತ್ರ ಇಲಾಖೆ ವತಿಯಿಂದ ಆಹಾರವನ್ನು ನೀಡಲಾಗುತ್ತಿದ್ದು, ಇದನ್ನು ಹಗಲು ಪಹರೆಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೂ ವಿಸ್ತರಿಸಿದಲ್ಲಿ ಸಿಬ್ಬಂದಿಗಳು ಊಟದ ಬಾಕ್ಸ್ ಹಾಗೂ ಇನ್ನಿತರೆ ವೈಯಕ್ತಿಕ ವಸ್ತುಗಳನ್ನು ಕಾರಾಗೃಹದೊಳಗೆ ತೆಗೆದುಕೊಂಡು ಹೋಗುವುದನ್ನು ಸಂಪೂರ್ಣವಾಗಿ ನಿಲ್ಲಿಸಬಹುದಾಗಿದೆ.

### 5. ಕೆ.ಎಸ್.ಐ.ಎಸ್.ಎಫ್ ಮತ್ತು ಕಾರಾಗೃಹ ಸಿಬ್ಬಂದಿಗಳು ಪ್ರತ್ಯೇಕ ಸ್ಥಳಗಳಲ್ಲಿ ತಪಾಸಣಾ ಕರ್ತವ್ಯ ನಿರ್ವಹಿಸುವುದು:

ಕೆ.ಎಸ್.ಐ.ಎಸ್.ಎಫ್.ನ ಅಧಿಕಾರಿ / ಸಿಬ್ಬಂದಿಗಳಲ್ಲಿ ಹಲವಾರು ಸಿಬ್ಬಂದಿಗಳು ಕಳೆದ 5 ವರ್ಷಗಳಿಂದ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಕರ್ತವ್ಯ ನಿರ್ವಹಿಸುತ್ತದ್ದು, ಕಾರಾಗೃಹದ ಅಧಿಕಾರಿ / ಸಿಬ್ಬಂದಿಗಳ ಜೊತೆ ಶಾಮೀಲಾಗಿ ಕಾರಾಗೃಹದಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ನಿಯಂತ್ರಿಸಲು ವಿಫಲರಾಗಿರುವುದು ಕಂಡು ಬಂದಿರುತ್ತದೆ. ಸರ್ಕಾರದ ಮಟ್ಟದಲ್ಲಿ ಒಂದು ಕಾನೂನು ರಚಿಸಿ, ಕೆ.ಎಸ್.ಐ.ಎಸ್.ಎಫ್.ನ ಅಧಿಕಾರಿಗಳನ್ನು 6 ತಿಂಗಳಿನಿಂದ ಗರಿಷ್ಠ ಒಂದು ವರ್ಷದೊಳಗೆ ವರ್ಗಾವಣೆ ಮಾಡುವುದು.

ಮುಂದಿನ ದಿನಗಳಲ್ಲಿ ಕಾರಾಗೃಹಕ್ಕೆ ಪ್ರವೇಶಿಸುವ ವ್ಯಕ್ತಿಗಳ ಹಾಗೂ ಸರಕು ಸಾಮಗ್ರಿಗಳನ್ನು ಮೊದಲ ಹಂತದಲ್ಲಿ ಕೆ.ಎಸ್.ಐ.ಎಸ್.ಎಫ್ ಸಿಬ್ಬಂದಿಗಳು ತಪಾಸಣಾ ಕೊಠಡಿಯಲ್ಲಿ ತಪಾಸಣೆಗೊಳಪಡಿಸಿದಾಗ, ಬಂಧಿಯ ಪರಿಚಯ ಕೆ.ಎಸ್.ಐ.ಎಸ್.ಎಫ್ ಸಿಬ್ಬಂದಿಗಳಿಗೆ ಇಲ್ಲದಿರುವ ಕಾರಣ ಪಕ್ಷಪಾತವಿಲ್ಲದೇ ತಪಾಸಣೆ ಕೈಗೊಳ್ಳಬಹುದಾಗಿರುತ್ತದೆ. ನಂತರ ಆ ವ್ಯಕ್ತಿಯು ಕಾರಾಗೃಹದ ಮುಖ್ಯ ದ್ವಾರದೊಳಗೆ ಪ್ರವೇಶ ಪಡೆದು ಕಾರಾಗೃಹದ ಅಧಿಕಾರಿ / ಸಿಬ್ಬಂದಿಗಳ ಸಮಕ್ಷಮದಲ್ಲಿ ಮತ್ತೊಮ್ಮೆ ತಪಾಸಣೆಗೊಳಪಡುವುದರಿಂದ 2 ಹಂತಗಳಲ್ಲಿ ಪರಿಣಾಮಕಾರಿಯಾಗಿ ತಪಾಸಣೆ ನಡೆಸಿದಂತಾಗುತ್ತದೆ.

ಕೆ.ಎಸ್.ಐ.ಎಸ್.ಎಫ್ ಅಧಿಕಾರಿಗಳು ಕಾರಾಗೃಹದ ಭದ್ರತೆ ಹಾಗೂ ತಪಾಸಣೆಗೆ ಸಂಬಂಧಿಸಿದಂತೆ ಕಾರಾಗೃಹದ ಮುಖ್ಯ ಅಧೀಕ್ಷಕರ ಬದಲಾಗಿ ಕೆ.ಎಸ್.ಐ.ಎಸ್.ಎಫ್ ನ ಕೇಂದ್ರ ಕಛೇರಿಯಲ್ಲಿರುವ ಪೊಲೀಸ್ ಅಧೀಕ್ಷಕರ ಮಟ್ಟದ ಹಿರಿಯ ಅಧಿಕಾರಿಗಳಿಗೆ ವರದಿ ಮಾಡತಕ್ಕದ್ದು. ಕಾರಾಗೃಹದೊಂದಿಗಿನ ಸಮನ್ವಯವು ಕೇವಲ ಕಾರ್ಯಾಚರಣೆ / ಕರ್ತವ್ಯಕ್ಕೆ ಸೀಮಿತವಾಗಿರತಕ್ಕದ್ದು.

### 6. ಭದ್ರತಾ ಲೆಕ್ಕ ಪರಿಶೋಧನೆ (Security Audit):

ನೂತನವಾಗಿ ನಿರ್ಮಿಸಿರುವ ಮಹಿಳಾ ಕಾರಾಗೃಹವು ಪ್ರಸ್ತುತ ಕೆ.ಎಸ್.ಐ.ಎಸ್.ಎಫ್. ಘಟಕದ ವ್ಯಾಪ್ತಿಗೆ ಒಳಪಡದಿರುವುದರಿಂದ ಭದ್ರತಾ ಲೆಕ್ಕ ಪರಿಶೋಧನೆಯನ್ನು (Security Audit) ನಡೆಸಿ, ಹೊಸ ಸೆಕ್ಯುರಿಟಿ ಪಾಯಿಂಟ್‌ಗಳನ್ನು ಗುರುತಿಸಿ ಸಿಬ್ಬಂದಿಯನ್ನು ನಿಯೋಜಿಸುವುದು.

ಕೇಂದ್ರ ಕಾರಾಗೃಹ, ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆ.ಎಸ್.ಐ.ಎಸ್.ಎಫ್. ಘಟಕದ ಭದ್ರತಾ ಲೆಕ್ಕ ಪರಿಶೋಧನೆಯನ್ನು (Security Audit) ವಿವಿಧ ಹಂತಗಳಲ್ಲಿ ತ್ರೈಮಾಸಿಕವಾಗಿ ಮಾಡಬಹುದಾಗಿರುತ್ತದೆ.ಈ ಕೆಳಕಂಡ ಅಂಶಗಳ ಬಗ್ಗೆ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳುವುದು.

a. ಭದ್ರತೆಗೆ ಅಗತ್ಯವಿರುವ ಮಾನವ ಸಂಪನ್ಮೂಲದ ಲೆಕ್ಕ ಪರಿಶೋಧನೆ
b. ಭದ್ರತಾ ಉಪಕರಣಗಳ ಲೆಕ್ಕ ಪರಿಶೋಧನೆ
c. ಕಾರಾಗೃಹದಲ್ಲಿ ಸಂಭವಿಸಿರುವ ವಿವಿಧ ಪ್ರಕರಣಗಳ ಲೆಕ್ಕ ಪರಿಶೋಧನೆ
    - ನಿಷೇಧಿತ ವಸ್ತುಗಳ ಬಳಕೆ / ಸಾಗಾಣಿಕೆ ಪ್ರಕರಣಗಳು
    - ಹಲ್ಲೆ ಪ್ರಕರಣಗಳು
    - ಪರಾರಿ / ಪರಾರಿಗೆ ಯತ್ನ ಪ್ರಕರಣಗಳು
    - ಆತ್ಮಹತ್ಯೆಗೆ ಯತ್ನದ ಪ್ರಕರಣಗಳು

ಈ ಭದ್ರತಾ ಲೆಕ್ಕ ಪರಿಶೋಧನಾ ವರದಿಯನ್ನು ತ್ರೈಮಾಸಿಕವಾಗಿ ಜಂಟಿ ಪೊಲೀಸ್ ಆಯುಕ್ತರು, ಬೆಂಗಳೂರು ರವರ ನೇತೃತ್ವದಲ್ಲಿ ನಡೆಯುವ ಭದ್ರತಾ ಸಲಹಾ ಸಮಿತಿಯಲ್ಲಿ *(Order No.CRM-3/03/2022, Dated 17.02.2022)* ಚರ್ಚಿಸುವುದು.

**ಆಡಳಿತ:**

1. **ಕಾರಾಗೃಹದಲ್ಲಿ ಅಪರಾಧಿಕ ಕೃತ್ಯಕ್ಕೆ ಸಂಬಂಧಿಸಿದಂತೆ ಎಫ್.ಐ.ಆರ್ ದಾಖಲಿಸುವ ಕುರಿತು:**

ಬಂಧಿಗಳು ಅಪರಾಧಿಕ ಕೃತ್ಯಗಳಲ್ಲಿ ತೊಡಗಿರುವುದು ಕಂಡು ಬಂದ ತಕ್ಷಣ ಕಾರಾಗೃಹದ ಮುಖ್ಯಸ್ಥರು ಎಫ್.ಐ.ಆರ್ ದಾಖಲಿಸುವುದು, ವಿಳಂಬವಾದಲ್ಲಿ ಸೂಕ್ತ ಕಾರಣಗಳನ್ನು ನೀಡತಕ್ಕದ್ದು. ಎಫ್.ಐ.ಆರ್ ದಾಖಲಿಸುವ ಸಂದರ್ಭದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಪೂರಕ ದಾಖಲಾತಿಗಳನ್ನು ತನಿಖಾಧಿಕಾರಿಗಳಿಗೆ ಒದಗಿಸುವುದು (C.C.T.V. Camera ದೃಶ್ಯಾವಳಿಗಳು, Body-worn camera ಗಳ ದೃಶ್ಯಾವಳಿಗಳು, ಇತ್ಯಾದಿಗಳು). ಘಟನೆಗಳ ಬಗ್ಗೆ ಕಾರಾಗೃಹ ಇಲಾಖೆ ವತಿಯಿಂದ *ಆಂತರಿಕ ವಿಚಾರಣೆ* ನಡೆಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ವಿಚಾರಣಾ ವರದಿಯನ್ನು ತನಿಖೆಗೆ ಅನುಕೂಲವಾಗುವ ದೃಷ್ಟಿಯಿಂದ ತನಿಖಾಧಿಕಾರಿಗಳಿಗೆ ಯಾವುದೇ ವಿಳಂಬವಿಲ್ಲದೇ ಒದಗಿಸುವುದು.

2. **ಕೆ.ಎಸ್.ಐ.ಎಸ್.ಎಫ್ ಘಟಕಕ್ಕೆ ಮೂಲಭೂತ ಸೌಕರ್ಯ ಒದಗಿಸುವುದು:**

ಕೇಂದ್ರ ಕಾರಾಗೃಹಕ್ಕೆ ವಿಚಾರಣೆಗಾಗಿ ಭೇಟಿ ನೀಡಿದಾಗ ಕೆ.ಎಸ್.ಐ.ಎಸ್.ಎಫ್. ಘಟಕದ ಕಛೇರಿ ಹಾಗೂ ಶಸ್ತ್ರಾಗಾರಗಳನ್ನು ಪರಿಶೀಲಿಸಲಾಗಿ, ಕಛೇರಿಯ ಕೆಳಮಹಡಿಯು ನೀರಿನಿಂದ ಮುಳುಗಡೆಯಾಗಿದ್ದು, ಸೋಂಕು ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ ಮತ್ತು ಅಧಿಕಾರಿಗಳ ಕಛೇರಿಯು ಅತ್ಯಂತ ಕಳಪೆ ಸ್ಥಿತಿಯಲ್ಲಿರುತ್ತದೆ. ಸಿಬ್ಬಂದಿಗಳಿಗೆ ಸರಿಯಾದ ಗಾರ್ಡ್ ರೂಮ್, ಆಯುಧಗಳ ರಕ್ಷಣೆಗೆ ಪ್ರತ್ಯೇಕವಾದ ಶಸ್ತ್ರಾಗಾರ (Armoury) ವ್ಯವಸ್ಥೆ ಇಲ್ಲದಿರುವುದು ಕಂಡುಬಂದಿರುತ್ತದೆ. ಆಯುಧಗಳನ್ನು ಸಂರಕ್ಷಿಸಿಡಲು ಡಾರ್ಕ್ ರೂಮ್ ವ್ಯವಸ್ಥೆ ಮತ್ತು ಇತ್ಯಾದಿಗಳನ್ನು ಪೊಲೀಸ್ ತರಬೇತಿ ಶಾಲೆಯ ಮಾದರಿಯಲ್ಲಿ ನಿರ್ಮಿಸುವುದು ಹಾಗೂ ಅಧಿಕಾರಿಗಳಿಗೆ ನೂತನವಾಗಿ ನಿರ್ಮಿಸಿದ ಪ್ರತ್ಯೇಕವಾದ ಕಛೇರಿಗಳ ವ್ಯವಸ್ಥೆ ಕಲ್ಪಿಸಬೇಕಾಗಿದೆ.

3. **ಬಂಧಿಗಳ ವರ್ಗಾವಣೆ:**

ಕಾರಾಗೃಹದಲ್ಲಿರುವ ಬಂಧಿಗಳನ್ನು ಆಡಳಿತಾತ್ಮಕ, ಶಿಸ್ತು ಕ್ರಮ ಹಾಗೂ ಇತರೆ ಕಾರಣಗಳ ಮೇಲೆ ರಾಜ್ಯದ ವಿವಿಧ ಕಾರಾಗೃಹಗಳಿಗೆ ವರ್ಗಾವಣೆ ಮಾಡಬಹುದಾಗಿರುತ್ತದೆ. ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿದ್ದು, ಕೆಲವು ಬಂಧಿಗಳು ತಮ್ಮ ಸಹಚರರಿಂದ ಸಮಾಜದ ಅಪರಾಧಿಕ ಕೃತ್ಯಗಳಲ್ಲಿ ಪರೋಕ್ಷವಾಗಿ ಭಾಗಿಯಾಗುವುದನ್ನು ತಡೆಗಟ್ಟಲು, ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಬೆಂಗಳೂರು ರವರು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿರುವ ಕೆಲವು ವಿಚಾರಣಾಧೀನ ಬಂಧಿಗಳನ್ನು ವರ್ಗಾಯಿಸುವಂತೆ ಪೊಲೀಸ್ ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆ, ಬೆಂಗಳೂರು ರವರಿಗೆ ಕೋರಿರುತ್ತಾರೆ. ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಬೆಂಗಳೂರು ರವರ ಕೋರಿಕೆಯಂತೆ ಮತ್ತು ಕಾರಾಗೃಹದ ನಿಯಮಗಳನ್ನು ಉಲ್ಲಂಘಿಸಿರುವ ಇತರೆ ಬಂಧಿಗಳನ್ನು ಪೊಲೀಸ್ ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆ, ಬೆಂಗಳೂರು ರವರ ಆದೇಶದಂತೆ ಶಿಸ್ತು ಕ್ರಮದ ಮೇರೆಗೆ ಕಳೆದ ಒಂದು ವರ್ಷದಲ್ಲಿ (ದಿನಾಂಕ: 01-02-2021 ರಿಂದ 01-02-2022) 51 ವಿಚಾರಣಾ ಬಂಧಿಗಳನ್ನು ರಾಜ್ಯದ ವಿವಿಧ ಕಾರಾಗೃಹಗಳಿಗೆ ವರ್ಗಾವಣೆ ಮಾಡಲಾಗಿರುತ್ತದೆ. ವರ್ಗಾವಣೆಗೊಂಡ 51 ಬಂಧಿಗಳಲ್ಲಿ 19 ಬಂಧಿಗಳು ಸಂಬಂಧಪಟ್ಟ ವರ್ಗಾವಣೆಯ ವಿರುದ್ಧ ಗೌರವಾನ್ವಿತ ನ್ಯಾಯಾಲಯದ ಮೊರೆ ಹೋಗಿ ಗೌರವಾನ್ವಿತ ನ್ಯಾಯಾಲಯಗಳ ಆದೇಶದಂತೆ ಮರು ವರ್ಗಾವಣೆಗೊಂಡಿರುತ್ತಾರೆ.

ವಿವಿಧ ಗೌರವಾನ್ವಿತ ನ್ಯಾಯಾಲಯವು 19 ಬಂಧಿಗಳನ್ನು ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಮರು ವರ್ಗಾವಣೆಗೊಳಿಸುವಂತೆ ನೀಡಿರುವ ಆದೇಶಗಳನ್ನು ಪರಿಶೀಲಿಸಲಾಗಿ, ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ಪ್ರಕರಣ ಸಂಖ್ಯೆ: *2013 Crl. LJ 214 in case of State of Maharastra and others*

*vs. Saeed Sohail Shaik* ರಲ್ಲಿರುವಂತೆ ರಿಮ್ಯಾಂಡ್ ನ್ಯಾಯಾಲಯದ ಅನುಮತಿಯಿಲ್ಲದೆ ವಿಚಾರಣಾಧೀನ ಬಂಧಿಯನ್ನು ಕಾರಾಗೃಹದ ಅಧಿಕಾರಿಗಳು ವರ್ಗಾಯಿಸುವಂತಿಲ್ಲ. ಅಲ್ಲದೆ ಬಂಧಿಗಳು ದೂರದ ಕಾರಾಗೃಹಕ್ಕೆ ವರ್ಗಾವಣೆಯಾದಲ್ಲಿ ವಿಚಾರಣಾಧೀನ ಬಂಧಿಗಳು ನ್ಯಾಯಾಲಯಕ್ಕೆ ಸರಿಯಾದ ಸಮಯಕ್ಕೆ ವಿಚಾರಣೆಗೆ ಹಾಜರುಪಡಿಸಲು ಕಷ್ಟ ಸಾಧ್ಯವಾಗಿರುತ್ತದೆ ಮತ್ತು ಬಂಧಿಗಳ ಪರ ವಕೀಲರಿಗೆ ಹಾಗೂ ಅವರ ಕುಟುಂಬದವರಿಗೆ ಬಂಧಿಯನ್ನು ಭೇಟಿಯಾಗಲು ತೊಂದರೆಯಾಗುತ್ತದೆಂಬ ಕಾರಣದ ಮೇರೆಗೆ ಮರು ವರ್ಗಾವಣೆ ಮಾಡಿರುತ್ತಾರೆ.

ಬಂಧಿಗಳನ್ನು ಮರುವರ್ಗಾವಣೆಗೊಳಿಸಿದ ವಿವಿಧ ನ್ಯಾಯಾಲಯಗಳ ಆದೇಶಗಳನ್ನು ಪರಿಶೀಲಿಸಿದಾಗ ಕಾರಾಗೃಹದ ಮುಖ್ಯಸ್ಥರು ಬಂಧಿಗಳನ್ನು ವರ್ಗಾವಣೆ ಮಾಡುವ ವಿಷಯ, ಸನ್ನಿವೇಶದ ಮಾಹಿತಿ, ವರ್ಗಾವಣೆ ಮಾಡಲು ಅಗತ್ಯ ದಾಖಲಾತಿಗಳಾದ ಶಿಕ್ಷಾ ಪುಸ್ತಕ ಮತ್ತು ಇತರೆ ದಾಖಲಾತಿಗಳನ್ನು ನ್ಯಾಯಾಲಕ್ಕೆ ಒಪ್ಪಿಸದಿರುವುದು ಕಂಡು ಬಂದಿರುತ್ತದೆ. ಕರ್ನಾಟಕ ಕಾರಾಗೃಹ ನಿಯಮಗಳು, ಕಾರಾಗೃಹದ ಕೈಪಿಡಿ ಪ್ರಕಾರ ಪೊಲೀಸ್ ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆ, ಬೆಂಗಳೂರು ರವರು ಬಂಧಿಗಳ ವರ್ಗಾವಣೆ ಮಾಡುವ ಅಧಿಕಾರ ಹೊಂದಿದ್ದು ಅದು ಸರ್ಕಾರ / ಇಲಾಖೆಯ ವ್ಯಾಪ್ತಿಗೊಳಪಡುತ್ತದೆಂಬ ವಿಷಯವನ್ನು ಗೌ॥ ನ್ಯಾಯಾಲಯಕ್ಕೆ ಮನವರಿಕೆ ಮಾಡದಿರುವುದು ಕಂಡುಬಂದಿರುತ್ತದೆ ಹಾಗೂ ಬಂಧಿಗಳ ಮರು ವರ್ಗಾವಣೆಯ ವಿರುದ್ಧ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನೂ ಸಹ ಸಲ್ಲಿಸಿರುವುದಿಲ್ಲ.

ವಿವಿಧ ಕಾಯ್ದೆಗಳಲ್ಲಿ ಹಾಗೂ ಗೌರವಾನ್ವಿತ ನ್ಯಾಯಾಲಯದ ತೀರ್ಪುಗಳಲ್ಲಿ ಬಂಧಿಗಳನ್ನು ಇತರೆ ಕಾರಾಗೃಹಗಳಿಗೆ ವರ್ಗಾವಣೆ ಮಾಡುವ ಕುರಿತು ಇರುವ ಅವಕಾಶಗಳನ್ನು ವಿಶ್ಲೇಷಿಸಲಾಗಿ, ಗೌರವಾನ್ವಿತ ಉಚ್ಚ ನ್ಯಾಯಾಲಯ, ಜಮ್ಮು ಮತ್ತು ಕಾಶ್ಮೀರದ ಪ್ರಕರಣ ಸಂಖ್ಯೆ *CRM(M) No: 210/2019 in case of State of Jammu and Kashmir Vs. Bashir Ahmad Mir and another* on 15 July, 2021 ರಲ್ಲಿರುವಂತೆ ಅಪರಾಧ ಪ್ರಕ್ರಿಯ ಸಂಹಿತೆ (Code of Criminal Procedure), ಸೆಕ್ಷನ್ 417(1) ಪ್ರಕಾರ ಒಬ್ಬ ಬಂಧನದಲ್ಲಿಡಬೇಕಾದ ವ್ಯಕ್ತಿಯನ್ನು ಯಾವ ಸ್ಥಳದಲ್ಲಿ ಬಂಧಿಸಿಡಬೇಕೆಂಬುದನ್ನು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾಗಿರುತ್ತದೆ ಹಾಗೂ ಒಬ್ಬ ವಿಚಾರಣಾ ಬಂಧಿಯನ್ನು ಕೂಡ ತುರ್ತು ಪರಿಸ್ಥಿತಿ, ಶಿಸ್ತು ಕ್ರಮ ಮುಂತಾದ ಆಡಳಿತಾತ್ಮಕ ವಿಷಯಗಳ ಮೇರೆಗೆ ಒಂದು ಕಾರಾಗೃಹದಿಂದ ಮತ್ತೊಂದು ಕಾರಾಗೃಹಕ್ಕೆ ರಾಜ್ಯ ಸರ್ಕಾರ ಅಥವಾ ಕಾರಾಗೃಹ ಇಲಾಖೆಯ ಮುಖ್ಯಸ್ಥರು ವರ್ಗಾಯಿಸಬಹುದಾಗಿರುತ್ತದೆ. ವಿಚಾರಣಾಧೀನ ಬಂಧಿಯನ್ನು, ಪ್ರತಿಬಂಧಕ ಬಂಧನದಲ್ಲಿರುವ (Preventive Detention) ಬಂಧಿಯನ್ನು ವರ್ಗಾವಣೆ ಮಾಡುವ ರೀತಿಯಲ್ಲಿಯೇ ವರ್ಗಾವಣೆ ಮಾಡಬಹುದು ಹಾಗೂ ಬಂಧಿಗಳ ವರ್ಗಾವಣೆ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಗೌರವಾನ್ವಿತ ನ್ಯಾಯಾಲಯಗಳಿಗೆ ಮಾಹಿತಿ ಒಪ್ಪಿಸುವುದು ಅವಶ್ಯವಿರುತ್ತದೆ.

ಮುಂದಿನ ದಿನಗಳಲ್ಲಿ ಬಂಧಿಗಳನ್ನು ವರ್ಗಾವಣೆ ಮಾಡುವ ಸಂದರ್ಭದಲ್ಲಿ ಕಾರಾಗೃಹದ ಮುಖ್ಯಸ್ಥರು ಬಂಧಿಯ ಶಿಕ್ಷಾ ಪುಸ್ತಕ, ಚರಿತ್ರೆ ಹಾಳೆ, ಬಂಧಿಯ ಹಿನ್ನೆಲೆ ಮುಂತಾದ ದಾಖಲಾತಿಗಳನ್ನು ಪ್ರಧಾನ ಕಛೇರಿಗೆ ಸಲ್ಲಿಸಿ, ಕಾರಾಗೃಹ ಇಲಾಖೆಯ ಮುಖ್ಯಸ್ಥರು ಅಪರಾಧ ಪ್ರಕ್ರಿಯ ಸಂಹಿತೆ (Code of Criminal Procedure), ಸೆಕ್ಷನ್ 417(1); ಕರ್ನಾಟಕ ಕಾರಾಗೃಹ ನಿಯಮಗಳ, ನಿಯಮ 155; ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ, ಸೆಕ್ಷನ್ 185(v), 539, 543, 562, 744 ಗಳಲ್ಲಿ ತಮಗೆ ಪ್ರದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ, ಬಂಧಿಗಳನ್ನು ಒಂದು ಕಾರಾಗೃಹದಿಂದ ಮತ್ತೊಂದು ಕಾರಾಗೃಹಕ್ಕೆ ವರ್ಗಾಯಿಸಬಹುದಾಗಿರುತ್ತದೆ ಹಾಗೂ ಕಾರಾಗೃಹದ ಮುಖ್ಯಸ್ಥರು ವರ್ಗಾವಣೆ ಸಂದರ್ಭದಲ್ಲಿ ಸಂಬಂಧಪಟ್ಟ ಗೌರವಾನ್ವಿತ ನ್ಯಾಯಾಲಯಗಳಿಗೆ ಮಾಹಿತಿ ಒಪ್ಪಿಸುವುದು ಅವಶ್ಯವಿರುತ್ತದೆ. ಕಾರಾಗೃಹದಿಂದ ರಾಜ್ಯದ ವಿವಿಧ ಕಾರಾಗೃಹಗಳಿಗೆ ವರ್ಗಾವಣೆಯಾದ ಬಂಧಿಗಳು ಮೇಲ್ಕಾಣಿಸಿದ ಅಂಶಗಳನ್ನು ಮೀರಿ ಸಂಬಂಧಪಟ್ಟ ಗೌರವಾನ್ವಿತ ನ್ಯಾಯಾಲಯಗಳಿಗೆ ಮೊರೆ ಹೋಗಿ

ಮರುವರ್ಗಾವಣೆಯಾದಲ್ಲಿ ಸರ್ಕಾರಿ ಅಭಿಯೋಜಕ ರವರಿಂದ (Public Prosecutor) ಕಾನೂನಾತ್ಮಕ ಸಲಹೆ ಪಡೆದು ಆಯ್ದ ಪ್ರಕರಣಗಳಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವುದು. ಇಂತಹ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯದಲ್ಲಿ ಯಶಸ್ವಿಯಾಗಿ ಅಭಿಯೋಜನೆ / ವಾದ ಮಂಡಿಸಲು ಅಭಿಯೋಜನಾ ಇಲಾಖೆ, ಸ್ಥಳೀಯ ಪೊಲೀಸರು ಮತ್ತು ಕಾರಾಗೃಹದ ಅಧಿಕಾರಿಗಳ ನಡುವೆ ಪರಸ್ಪರ ಸಹಕಾರ / ಸಮನ್ವಯತೆ ಇರುವುದು ಅತ್ಯವಶ್ಯಕವಾಗಿರುತ್ತದೆ.

ನಾಗರಾಜ್. ಜೆ @ ವಿಲ್ಸನ್ ಗಾರ್ಡನ್ ನಾಗ ತಂದೆ ಜಯರಾಜ್ (ಸೈಲೆಂಟ್ ಸುನೀಲ್ ಗ್ಯಾಂಗ್) ಹಾಗೂ ಇತರೆ 18 ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಮರು ವರ್ಗಾವಣೆಗೊಂಡಿರುವ ಬಂಧಿಗಳು ಪ್ರಸ್ತುತ ಕಾರಾಗೃಹದಲ್ಲಿದ್ದು ತಮ್ಮ ಅಕ್ರಮ ಚಟುವಟಿಕೆಗಳನ್ನು ಮುಂದುವರೆಸಿರುವ ಮಾಹಿತಿ ತಿಳಿದುಬಂದಿದ್ದು, ಸದರಿ ಬಂಧಿಗಳನ್ನು ಅಧ್ಯಾಯ-3 ರಲ್ಲಿ ವಿವರಿಸಿರುವ ಎಲ್ಲಾ ನಿಯಮಗಳನ್ನು ಪಾಲಿಸಿ, ಇತರೆ ಕಾರಾಗೃಹಗಳಿಗೆ ಬಂಧಿಗಳನ್ನು ಮತ್ತೊಮ್ಮೆ ವರ್ಗಾವಣೆ ಮಾಡಬಹುದಾಗಿರುತ್ತದೆ.

### 4. ಶಿಕ್ಷಾ ಪುಸ್ತಕದ ನಿರ್ವಹಣೆ:

ಕಾರಾಗೃಹದಲ್ಲಿನ ಯಾವುದೇ ಬಂಧಿಗಳು ಅಪರಾಧಿಕ ಕೃತ್ಯಗಳಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಕರ್ತವ್ಯ ನಿರತ ಸಿಬ್ಬಂದಿಗಳು ತಪ್ಪದೇ ಘಟನೆಯನ್ನು ಜೈಲರ್‌ರವರ ಗಮನಕ್ಕೆ ತಂದು ಪಹರೆ ಪುಸ್ತಕದಲ್ಲಿ ನಮೂದಿಸುವುದು. ನಂತರ ಅಧೀಕ್ಷಕರು ಘಟನಾ ಸಂದರ್ಭದಲ್ಲಿನ ಕರ್ತವ್ಯ ನಿರತ ಸಿಬ್ಬಂದಿ, ಬಂಧಿ ಮತ್ತು ಜೈಲರ್‌ರವರ ವಿಚಾರಣೆ ನಡೆಸಿ, ಬಂಧಿಯು ಅಪರಾಧಿಕ ಕೃತ್ಯದಲ್ಲಿ ಭಾಗಿಯಾಗಿರುವುದು ದೃಢಪಟ್ಟಲ್ಲಿ ತಪ್ಪದೇ ಶಿಕ್ಷಾ ಪುಸ್ತಕದಲ್ಲಿ ನಮೂದಿಸುವುದು. ಪೊಲೀಸ್ *ಉಪ ಮಹಾ ನಿರೀಕ್ಷಕರು, ಕಾರಾಗೃಹ ಮತ್ತು ಸುಧಾರಣಾ ಸೇವೆ,* ಕಾರಾಗೃಹಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಶಿಕ್ಷಾ ಪುಸ್ತಕದ ನಿರ್ವಹಣೆ ಬಗ್ಗೆ ಪರಿಶೀಲಿಸಿ ಲೋಪ ದೋಷಗಳಿದ್ದಲ್ಲಿ ಕಾರಣ ಕೇಳಿ ನೋಟೀಸ್ ನೀಡುವುದು.

### 5. ಬಂಧಿಗಳಿಗೆ ಕೊಠಡಿ ಹಂಚಿಕೆ (Room Allotment):

ಕಾರಾಗೃಹಕ್ಕೆ ಹೊಸದಾಗಿ ಬಂಧಿಯು ದಾಖಲಾದ ತಕ್ಷಣ ಬಂಧಿಯ ಪೂರ್ವಾಪರವನ್ನು ತಿಳಿದುಕೊಂಡು *ಕೊಠಡಿಯನ್ನು ಹಂಚಿಕೆ* ಮಾಡುವ ಪ್ರಕ್ರಿಯೆಯನ್ನು ಗಣಕೀಕರಣಗೊಳಿಸಿ ಸ್ವಯಂಚಾಲಿತವಾಗಿ ಬಂಧಿಗಳಿಗೆ ಹಂಚಿಕೆಮಾಡತಕ್ಕದ್ದು. ಒಂದು ಸರಳವಾದ ಕಂಪ್ಯೂಟರ್ ಅಪ್ಲಿಕೇಷನ್ ಉಪಯೋಗಿಸಿ, ಕಾರಾಗೃಹದಲ್ಲಿ ಖಾಲಿ ಇರುವ ಕೊಠಡಿಯನ್ನು ಬಂಧಿಗಳು ಕಾರಾಗೃಹಕ್ಕೆ ದಾಖಲಾದಾಗ ಸ್ವಯಂ ಚಾಲಿತವಾತವಾಗಿ ಭರಿಸಬಹುದಾಗಿದೆ. ಇದು ಪಾರದರ್ಶಕತೆಯನ್ನು ಹೆಚ್ಚಿಸಿ, ಕಾರಾಗೃಹದೊಳಗೆ ಭ್ರಷ್ಟಾಚಾರವನ್ನು ತಡೆಯಲು ಸಹಕರಿಸುತ್ತದೆ. ಬಂಧಿಯ ವಿರೋಧಿ ಗುಂಪು ತನಗೆ ಹಂಚಿಕೆಯಾಗಿರುವ ಕೊಠಡಿಯಲ್ಲಿದ್ದಲ್ಲಿ ಕಾರಾಗೃಹದ ಮುಖ್ಯ ಅಧೀಕ್ಷಕರ ಲಿಖಿತ ಆದೇಶದ ಮೂಲಕ ಕೊಠಡಿಯನ್ನು ಬದಲಾಯಿಸತಕ್ಕದ್ದು.

### 6. ಕಾರಾಗೃಹದ ಕ್ಯಾಂಟೀನ್:

ಕಾರಾಗೃಹದ ಕ್ಯಾಂಟೀನ್‌ಗೆ ಭೇಟಿ ನೀಡಿದಾಗ ಅಲ್ಲಿ ಕ್ಯಾಂಟೀನ್‌ನಲ್ಲಿ ನಿಯಮಾನುಸಾರ ಮಾರಾಟ ಮಾಡಲು ಅವಕಾಶವಿರುವ ವಸ್ತುಗಳ ಜೊತೆಗೆ ಇನ್ನಿತರೆ ವಸ್ತುಗಳು ಸಹ ಮಾರಾಟ ಮಾಡುತ್ತಿರುವುದು ಕಂಡು ಬಂದಿದ್ದು, ಪ್ರಸ್ತುತ ಸಂದರ್ಭಕ್ಕನುಗುಣವಾಗಿ ಬಂಧಿಗಳಿಗೆ ಕಾರಾಗೃಹದ ಕ್ಯಾಂಟೀನ್‌ನಲ್ಲಿ ದೊರಕಬೇಕಾಗಿರುವ ವಸ್ತುಗಳನ್ನು ವಿಸ್ತರಣೆ ಮಾಡುವ ಕುರಿತಂತೆ ಮರು ಪರಿಶೀಲಿಸಿ, ಪಾರದರ್ಶಕತೆಯನ್ನು ಹೆಚ್ಚಿಸಲು ಕ್ಯಾಂಟೀನ್ ವ್ಯವಸ್ಥೆಯನ್ನು ಗಣಕೀಕರಣಗೊಳಿಸತಕ್ಕದ್ದು.

**7. Random Blood Test:**

ಬಂಧಿಗಳು ಕಾರಾಗೃಹದೊಳಗೆ ನಿಷೇಧಿತ ವಸ್ತುಗಳನ್ನು ಬಳಸುತ್ತಿರುವುದು ತಿಳಿದ ತಕ್ಷಣ ಅಥವಾ ಕಾರಾಗೃಹದ ಗುಪ್ತಚರ ತಂಡ ನೀಡುವ ವರದಿಯನ್ವಯ ಕಾರಾಗೃಹದ ಮುಖ್ಯ ಅಧೀಕ್ಷಕರು, ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಿಂದ ಮಾದಕ ವಸ್ತುಗಳನ್ನು ಬಳಸುವವರ ವಿರುದ್ಧ ಕೈಗೊಳ್ಳಲಾಗುತ್ತಿರುವ ಕ್ರಮಗಳನ್ನು ಅನುಸರಿಸಿ, ಕಾರಾಗೃಹದಲ್ಲಿನ ಶಂಕಿತ ಬಂಧಿಗಳ ವಿರುದ್ಧ ಲಿಖಿತವಾಗಿ ದಾಖಲೆಗಳಲ್ಲಿ ನಮೂದಿಸಿ, ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿ, ಠಾಣೆಯ ತನಿಖಾಧಿಕಾರಿಗಳು General Diary ಯಲ್ಲಿ ನಮೂದಿಸತಕ್ಕದ್ದು. ಕಾರಾಗೃಹದ ವೈದ್ಯಾಧಿಕಾರಿಯವರು ಠಾಣೆಯ ತನಿಖಾಧಿಕಾರಿಗಳು ಮತ್ತು ಕಾರಾಗೃಹದ ಅಧಿಕಾರಿಗಳ ಸಮಕ್ಷಮದಲ್ಲಿ ರಕ್ತದ ಮಾದರಿ (Blood Sample) ಹಾಗೂ ಮೂತ್ರದ ಮಾದರಿಯನ್ನು ಸಂಗ್ರಹಿಸತಕ್ಕದ್ದು. ಕಾರಾಗೃಹದ ಅಧಿಕಾರಿಗಳು ಸಂಗ್ರಹಿಸಲಾದ ರಕ್ತದ ಮಾದರಿಯನ್ನು ರಾಜ್ಯ ವಿಧಿ ವಿಜ್ಞಾನ ಪ್ರಯೋಗಾಲಯ ಅಥವಾ ಪೊಲೀಸ್ ಇಲಾಖೆಯ ಸಹಯೋಗವಿರುವಂತಹ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸಿಕೊಟ್ಟು, ಧನಾತ್ಮಕ (Positive) ವರದಿ ಬಂದಲ್ಲಿ ಅಂತಹ ಬಂಧಿಗಳ ವಿರುದ್ಧ Section 27(b) of NDPS Act-1985 ರಡಿಯಲ್ಲಿ ಪ್ರಕರಣ ದಾಖಲಿಸಿ, ಕಾರಾಗೃಹ ಇಲಾಖೆಯ ವತಿಯಿಂದ ಮಾದಕ ವಸ್ತು ಕಾರಾಗೃಹದ ಒಳಗೆ ಪ್ರವೇಶಿಸಿರುವ ಬಗ್ಗೆ ಆಂತರಿಕ ವಿಚಾರಣೆ ನಡೆಸುವುದು.

**8. ಕಾರಾಗೃಹದ ಕೈಗಾರಿಕೆಗಳು:**

ಬೆಂಗಳೂರು ಕೇಂದ್ರ ಕಾರಾಗೃಹದ ಕೈಗಾರಿಕೆಗಳಿಗೆ ಬೇಟಿ ನೀಡಿದ್ದಾಗ ಅಲ್ಲಿ 140 ಬಂಧಿಗಳು ಬೇಕರಿ, ಕೈಮಗ್ಗ, ಪಿಠೋಪಕರಣಗಳ ತಯಾರಿಕೆ ಮುಂತಾದ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ತಿಳಿದು ಬಂದಿರುತ್ತದೆ. ಬಂಧಿಗಳ ಆಲಸ್ಯವನ್ನು ಹೊಗಲಾಡಿಸಲು, ಇನ್ನು ಹೆಚ್ಚಿನ ಸಂಖ್ಯೆಗಳಲ್ಲಿ ಬಂಧಿಗಳು ಕೈಗಾರಿಕೆಗಳಲ್ಲಿ ಭಾಗಿಯಾಗಲು ಪ್ರೇರೆಪಿಸಿ, ಬಂಧಿಗಳಿಗೆ ಅವರ ಸಾಮರ್ಥ್ಯಕ್ಕೆ ತಕ್ಕ ತರಬೇತಿಯನ್ನು ನೀಡಿ ಕಾರಾಗೃಹದಲ್ಲಿ ಆಧುನಿಕ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ಬಂಧಿಗಳು ಮಾದಕ ವ್ಯಸನಗಳಿಗೆ ಒಳಗಾಗುವುದನ್ನು ತಡೆಗಟ್ಟಬಹುದಾಗಿದೆ. ಖಾಸಗಿ ಕಾರ್ಖಾನೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಕಾರಾಗೃಹದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿ, ಅಲ್ಲಿ ತಯಾರಾಗುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬಹುದಾಗಿರುತ್ತದೆ. ಕಾರಾಗೃಹದ ಕಾರ್ಖಾನೆಗಳಲ್ಲಿ ತಯಾರಾಗುವ ವಸ್ತುಗಳ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಹೆಚ್ಚಿನ ಮಹತ್ವ ನೀಡುವ ಅವಶ್ಯಕತೆಯಿದ್ದು, ಸರ್ಕಾರ ಕೂಡ ಕಾರಾಗೃಹದ ಕಾರ್ಖಾನೆಗಳಿಗೆ ಅಗತ್ಯವಿರುವ ತರಬೇತಿ, ಆಧುನೀಕರಣ ಮತ್ತು ಆರ್ಥಿಕ ನೆರವು ನೀಡುವ ಅವಶ್ಯಕತೆಯಿರುತ್ತದೆ. ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಬಂಧಿಗಳಿಗೆ ಕೂಲಿ ಹಣ ದೊರಕುವುದರಿಂದ ಅವರು ತಮ್ಮ ಕುಟುಂಬಕ್ಕೆ ಆಧಾರವಾಗಬಹುದು ಹಾಗೂ ಇದರಿಂದ ಕಾರಾಗೃಹದ ಚಿತ್ರಣ ಬದಲಾಗಿ ಕಾರಾಗೃಹಕ್ಕೆ ಅಂಟಿರುವ ಕಳಂಕವನ್ನು ಹೋಗಲಾಡಿಸಬಹುದಾಗಿದೆ.

**9. ವೃತ್ತಿಪರತೆ ಮತ್ತು ದಾಖಲಾತಿಗಳ ನಿರ್ವಹಣೆ:**

ಕಾರಾಗೃಹದ ಅಧಿಕಾರಿ / ಸಿಬ್ಬಂದಿಗಳ ವೃತ್ತಿಪರತೆ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಕಾಲಕಾಲಕ್ಕೆ ವೃತ್ತಿಪರ ತರಬೇತಿ ನೀಡುವ ಅವಶ್ಯಕತೆಯಿದ್ದು, ಸಿಬ್ಬಂದಿಗಳು ಕಾರಾಗೃಹದಲ್ಲಿ ನಿರ್ವಹಿಸುವ ಎಲ್ಲಾ ಕೆಲಸಗಳಿಗೂ, ಉದಾಹರಣೆಗೆ ಸಿ.ಸಿ.ಟಿ.ವಿ ನಿರ್ವಹಣೆ, ವಿ.ಸಿ ಕೋರ್ಟ್, ಆಧುನಿಕ ಉಪಕರಣಗಳಾದ Body-worn camera, Walkie-talkie, Baggage Scanner ಹಾಗೂ ಇತ್ಯಾದಿಗಳ ನಿರ್ವಹಣೆಯ ತರಬೇತಿಯ ಅವಶ್ಯಕತೆ ಇರುತ್ತದೆ. ಕಾರಾಗೃಹ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ನಿಯಮಾನುಸಾರ ನಿರ್ವಹಿಸಲು ಕ್ರಮಗಳನ್ನು ತೆಗೆದುಕೊಳ್ಳುವುದು, ದಾಖಲಾತಿಗಳ ನಿರ್ವಹಣೆ ಬಗ್ಗೆ ಸೂಕ್ತ ತರಬೇತಿಯನ್ನು ನೀಡಿ ಹಿರಿಯ ಅಧಿಕಾರಿಗಳು ಮೇಲ್ವಿಚಾರಣೆ ನಡೆಸತಕ್ಕದ್ದು.

## ತಂತ್ರಜ್ಞಾನ ಮತ್ತು ಆಧುನೀಕರಣ:

1. **Tower dump Analysis:**

ವಿಚಾರಣಾ ಸಂದರ್ಭದಲ್ಲಿ ಒಬ್ಬ ಶಂಕಿತ ಬಂಧಿಯ ಮೊಬೈಲ್ ನಂಬರ್ ದೊರೆತಿದ್ದು, ಅದನ್ನು CDR Analysis ಗೆ ಒಳಪಡಿಸಿದಾಗ ಅದರಿಂದ ಕಾರಾಗೃಹದೊಳಗೆ 64 ಸಿಮ್ ಕಾರ್ಡ್‌ಗಳು, 21 IMEI ನಂಬರ್ ಹಾಗೂ 11 ಮೊಬೈಲ್‌ಗಳು ಬಳಕೆಯಾಗುತ್ತಿರುವ ಬಗ್ಗೆ ಮಾಹಿತಿ ತಿಳಿದು ಬಂದಿರುತ್ತದೆ. ಪ್ರಸ್ತುತ ಕಾರಾಗೃಹದಲ್ಲಿ ಬಳಕೆಯಾಗುತ್ತಿರುವ ಮೊಬೈಲ್‌ಗಳನ್ನು ಪತ್ತೆಹಚ್ಚಲು ಕಾರಾಗೃಹದ ಅಧಿಕಾರಿಗಳಿಗೆ ತಾಂತ್ರಿಕ ಸೌಲಭ್ಯಗಳು ಇರುವುದಿಲ್ಲ. ಈ ನಿಟ್ಟಿನಲ್ಲಿ ಕಾರಾಗೃಹದೊಳಗೆ ಬಂಧಿಗಳು ಬಳಕೆಮಾಡುತ್ತಿರುವ ಮೊಬೈಲ್‌ಗಳನ್ನು ಕಂಡುಹಿಡಿಯಲು ಅನುಕೂಲವಾಗುವಂತೆ, ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಸಿಬ್ಬಂದಿಗಳಿಗೆ ತರಬೇತಿ ನೀಡಲು ಈಗಾಗಲೇ ಕಾರಾಗೃಹದ ಪ್ರಧಾನ ಕಛೇರಿಯಲ್ಲಿ ಸೃಜಿಸಿರುವ ಪೊಲೀಸ್ ವರಿಷ್ಠಾಧಿಕಾರಿಗಳು, ಐ.ಪಿ.ಎಸ್, ರವರಿಗೆ ಜವಾಬ್ದಾರಿಯನ್ನು ನೀಡುವುದು.

ಪೊಲೀಸ್ ವರಿಷ್ಠಾಧಿಕಾರಿಗಳು, ಐ.ಪಿ.ಎಸ್, ಕಾರಾಗೃಹದ ಪ್ರಧಾನ ಕಛೇರಿ ರವರು ಪೊಲೀಸ್ ಕಮಿಷನರ್, ಬೆಂಗಳೂರು ರವರ ಸಹಯೋಗದೊಂದಿಗೆ ಕಾರಾಗೃಹದ ಆವರಣದ ಸುತ್ತಲಿನ ಪ್ರದೇಶದಲ್ಲಿ ನಿಯಮಿತವಾಗಿ "Tower Dump" ಗಳನ್ನು ಪಡೆಯುವುದು. ಕಾರಾಗೃಹದ ಅಧಿಕಾರಿ / ಸಿಬ್ಬಂದಿಗಳು, ಕಾರಾಗೃಹ ಸುತ್ತ ಮುತ್ತ ವಾಸಿಸುವ ನಾಗರೀಕರು ಮತ್ತು ಕಾರಾಗೃಹಕ್ಕೆ ಭೇಟಿ ನೀಡುವವರ ಮೊಬೈಲ್ ನಂಬರ್‌ನ ಒಂದು ಡೇಟಾ ಬೇಸ್‌ನ್ನು ಸಿದ್ಧಪಡಿಸುವುದು. "Tower Dump" ನಲ್ಲಿ ಈ ಡೇಟಾ ಬೇಸ್‌ಗೆ ಸಂಬಂಧಿಸದ ಇತರೆ ಮೊಬೈಲ್ ನಂಬರ್‌ಗಳಲ್ಲಿ ಅನುಮಾನಾಸ್ಪದ ಮಾದರಿ ಇರುವಂತಹ (ನಕಲಿ ಗ್ರಾಹಕ ಅರ್ಜಿ ನಮೂನೆ, ತುಂಬಾ ದಿನಗಳಿಂದ ಕಾರಾಗೃಹದ ಆವರಣದ ಸುತ್ತಲಿನ ಪ್ರದೇಶದಲ್ಲಿ ಚಲನ-ವಲನವಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಮೊಬೈಲ್, ಇತ್ಯಾದಿ..) ಮೊಬೈಲ್ ನಂಬರ್‌ಗಳನ್ನು ಸಂಕ್ಷಿಪ್ತ ವಿಶ್ಲೇಷಣೆಗೊಳಪಡಿಸಿ, ಅವುಗಳನ್ನು ಸ್ಥಳೀಯ ಪೊಲೀಸ್ ಠಾಣೆಗೆ ವರದಿ ನೀಡಿ ಸೂಕ್ತ ಕ್ರಮ ಕೈಗೊಳ್ಳುವುದು. ಆಂತರಿಕ ಭದ್ರತಾ ವಿಭಾಗ / ರಾಜ್ಯ ಗುಪ್ತಚರ ಇಲಾಖೆ ಮತ್ತು ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಬೆಂಗಳೂರು ರವರಿಗೆ ಮಾಹಿತಿ ಒದಗಿಸಿ, ಅಗತ್ಯವಿದ್ದಲ್ಲಿ ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ ಅಂತಹ ಮೊಬೈಲ್ ನಂಬರ್‌ಗಳನ್ನು ಸ್ಥಗಿತಗೊಳಿಸಲು ಕ್ರಮವಹಿಸತಕ್ಕದ್ದು (ವಿಸ್ತತವಾಗಿ ಅಧ್ಯಾಯ-1 ರ REPORT ON CDR ANALYSIS ನಲ್ಲಿ ವಿವರಿಸಲಾಗಿದೆ).

2. **Body-worn camera ಗಳ ನಿರ್ವಹಣೆ:**

ಈಗಾಗಲೇ 20 ಸಂಖ್ಯೆಯ Body-worn camera ಗಳನ್ನು ಸಿಬ್ಬಂದಿಗಳಿಗೆ ವಿತರಿಸಲಾಗಿದ್ದು, ಮುಂದಿನ ದಿನಗಳಲ್ಲಿ ಬಂಧಿಗಳು ನಿಷೇಧಿತ ವಸ್ತುಗಳ ಬಳಕೆ ಹಾಗೂ ಇತರೆ ಗಲಭೆ ಪ್ರಕರಣಗಳಲ್ಲಿ ಭಾಗಿಯಾದ ಸಂದರ್ಭದಲ್ಲಿ ಸಾಕ್ಷ್ಯ ಕಲೆ ಹಾಕಲು ಸಹಕಾರಿಯಾಗಲು ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಕಾರಾಗೃಹದ ಎಲ್ಲಾ ಸೂಕ್ಷ್ಮ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ವಿತರಿಸಿ, ಅಧಿಕಾರಿ / ಸಿಬ್ಬಂದಿಗಳಿಗೆ Body-worn camera ಗಳ ನಿರ್ವಹಣೆ ಬಗ್ಗೆ ಸೂಕ್ತ ತರಬೇತಿ ನೀಡುವುದು. ಪ್ರತಿನಿತ್ಯ Body-worn camera ಗಳಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಪರಿಶೀಲನೆ ಮಾಡಲು ಸಹಾಯಕ ಅಧೀಕ್ಷಕರ ದರ್ಜೆಯ ಅಧಿಕಾರಿಯನ್ನು ನೇಮಿಸುವುದು ಮತ್ತು ಪರಿಶೀಲಿಸಿದ ದೃಶ್ಯಾವಳಿಗಳ ಬಗ್ಗೆ ಮುಖ್ಯ ಅಧೀಕ್ಷಕರಿಗೆ ಪ್ರತಿ ದಿನ ವರದಿ ನೀಡುವುದು.

**3. C.C.T.V. Camera ಗಳ ನಿರ್ವಹಣೆ:**

ಸಿ.ಸಿ.ಟಿ.ವಿ. ನಿಯಂತ್ರಣ ಕೊಠಡಿಯನ್ನು ಕೇಂದ್ರ ಕಛೇರಿ, ಕಾರಾಗೃಹ ಮತ್ತು ಸುಧಾರಣಾ ಸೇವೆ, ಬೆಂಗಳೂರಿನಲ್ಲಿ ಸ್ಥಾಪಿಸುವುದು. ಸಿ.ಸಿ.ಟಿ.ವಿ. ನಿಯಂತ್ರಣ ಕೊಠಡಿಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಸಿ.ಸಿ.ಟಿ.ವಿ. ನಿರ್ವಹಣೆಯ ಬಗ್ಗೆ ತರಬೇತಿ ನೀಡಲು ಕ್ರಮ ಕೈಗೊಳ್ಳುವುದು ಹಾಗೂ ಕಾರಾಗೃಹದ ಸೂಕ್ಷ್ಮ ಸ್ಥಳಗಳ ಬಗ್ಗೆ ಅನುಭವವಿರುವ ಸಹಾಯಕ ಜೈಲರ್‌ರನ್ನು ಹಗಲು ವೇಳೆಯಲ್ಲಿ ಹಾಗೂ ಮುಖ್ಯ ವೀಕ್ಷಕರನ್ನು ರಾತ್ರಿ ವೇಳೆಯಲ್ಲಿ ಸಿ.ಸಿ.ಟಿ.ವಿ. ನಿಯಂತ್ರಣ ಕೊಠಡಿಯ ಮೇಲ್ವಿಚಾರಣೆಗಾಗಿ ನಿಯೋಜಿಸತಕ್ಕದ್ದು. ಸಿ.ಸಿ.ಟಿ.ವಿ. ದೃಶ್ಯಗಳಲ್ಲಿ ಕಂಡು ಬರುವ ಕರ್ತವ್ಯ ನಿರತ ಸಿಬ್ಬಂದಿಗಳು, ತಮಗೆ ನಿಯೋಜಿಸಿರುವ ಬ್ಯಾರಕ್‌ಗಳನ್ನು ನಿಯಮಾನುಸಾರ ಸುತ್ತುವರೆಯುತ್ತಿರುವ ಬಗ್ಗೆ ಹಾಗೂ ಇತರೆ ಕರ್ತವ್ಯ ನಿರ್ವಹಣೆಯ ಪ್ರತಿಯೊಂದು ಘಟನೆಯ ವಿವರಗಳನ್ನು ಪ್ರತಿದಿನ ದಾಖಲಾತಿಯಲ್ಲಿ ನಮೂದಿಸಿ, ಸದರಿ ದಾಖಲಾತಿಯನ್ನು ದಿನಕ್ಕೊಮ್ಮೆ ಸಹಾಯಕ ಅಧೀಕ್ಷಕ ದರ್ಜೆಯ ಅಧಿಕಾರಿಯೊಬ್ಬರು ಪರಿಶೀಲಿಸಿ, ಅಧೀಕ್ಷಕರು, ಕೇಂದ್ರ ಕಛೇರಿ ರವರಿಗೆ ವರದಿ ನೀಡತಕ್ಕದ್ದು. Advance Analytical and Facial Recognition Software ಇರುವಂತಹ ಸಿ.ಸಿ.ಟಿ.ವಿ ಕ್ಯಾಮೆರಾ ಗಳನ್ನು ಅಳವಡಿಸಿ, ಸಿ.ಸಿ.ಟಿ.ವಿ ದೃಶ್ಯಾವಳಿಗಳು ಕನಿಷ್ಠ ಒಂದು ತಿಂಗಳವರೆಗೆ ಸಂಗ್ರಹವಾಗುವಂತೆ ಸಾಮರ್ಥ್ಯವನ್ನು ಹೊಂದಿರತಕ್ಕದ್ದು, ಅದರಲ್ಲಿ ಅಗತ್ಯವಿರುವ ಪ್ರಮುಖ ದೃಶ್ಯಾವಳಿಗಳನ್ನು ಬೇರೊಂದು ಕಡೆ ಶಾಶ್ವತವಾಗಿ ಸಂಗ್ರಹಿಸುವುದು.

**4. ಕೆ.ಎಸ್.ಐ.ಎಸ್.ಎಫ್. ಘಟಕದ ಆಧುನೀಕರಣ:**

- ಕೇಂದ್ರ ಕಾರಾಗೃಹದ ಆವರಣದ ಸುತ್ತ ಸಂಪೂರ್ಣವಾಗಿ ಸುತ್ತುವರೆದ ಒಂದು ಹೊರಗೋಡೆಯನ್ನು ನಿರ್ಮಿಸಿ ಕಾರಾಗೃಹದ ಮುಂಭಾಗದಲ್ಲಿ ಮಾತ್ರ ಆಗಮನ ಹಾಗೂ ನಿರ್ಗಮನಕ್ಕೆ ಅವಕಾಶ ಕಲ್ಪಿಸುವುದು ಮತ್ತು ಪ್ರಸ್ತುತ ಇರುವ 4 Static Point ಗಳ ಸಂಖ್ಯೆಯನ್ನು 6 ಕ್ಕೆ ಹೆಚ್ಚಿಸಿ, ಆ ಸ್ಥಳಗಳಲ್ಲಿ *ವಾಚ್ ಟವರ್‌ಗಳನ್ನು* ನಿರ್ಮಿಸುವುದರಿಂದ ಪ್ರವೇಶ ನಿಯಂತ್ರಣವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು.

- ಟ್ರಾಫಿಕ್ ಪಾಯಿಂಟ್‌ನಲ್ಲಿ ಕಾರಾಗೃಹದ ಸಂಕೀರ್ಣಕ್ಕೆ ಪ್ರವೇಶ ಪಡೆಯುವ ಎಲ್ಲಾ ವಾಹನಗಳನ್ನು HHMD (Hand-held Metal Detector) ನಿಂದ ತಪಾಸಣೆ ನಡೆಸುವುದು, ಸುಸಜ್ಜಿತವಾದ Guard Room, Automatic Boom Barrier, Search light, Body-worn camera, Public Address System ಗಳನ್ನು ಒದಗಿಸುವುದು ಮತ್ತು ಕೇಂದ್ರ ಕಾರಾಗೃಹದ ಸಮೀಪ ಯಾವುದೇ ವಾಹನಗಳ ನಿಲುಗಡೆ ಅವಕಾಶವನ್ನು ನೀಡದೆ, ಕಾರಾಗೃಹದ ಅಧಿಕಾರಿ / ಸಿಬ್ಬಂದಿಗಳ ವಾಹನ ನಿಲುಗಡೆಗಾಗಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆಯನ್ನು ಕಾರಾಗೃಹದ ಎದುರಿಗಿರುವ ಎರಡುಬದಿ ರಸ್ತೆಯ ಪಕ್ಕದಲ್ಲಿರುವ ಖಾಲಿ ಸ್ಥಳದಲ್ಲಿ ಕಲ್ಪಿಸುವುದು.

- ಪ್ರವೇಶ ದ್ವಾರದಲ್ಲಿ ಕಾರಾಗೃಹಕ್ಕೆ ಪ್ರವೇಶ ಪಡೆಯುವ ವ್ಯಕ್ತಿಗಳು / ವಾಹನಗಳ ತಪಾಸಣೆಗೆ ಅನುಕೂಲವಾಗುವಂತೆ Facial Recognition Mobile Application ನ್ನು ಅಳವಡಿಸುವುದು, ಅಪರಿಚಿತ ವ್ಯಕ್ತಿಗಳನ್ನು ಪ್ರವೇಶ ದ್ವಾರದಲ್ಲಿಯೇ ತಡೆಹಿಡಿದು ಕಾರಾಗೃಹದ ಅಧಿಕಾರಿಗಳ ಲಿಖಿತ ಅನುಮತಿ ಇದ್ದಲ್ಲಿ ಮಾತ್ರ ಪ್ರವೇಶಕ್ಕೆ ಅವಕಾಶ ನೀಡುವುದು ಮತ್ತು ತಪಾಸಣೆಗೆ ಅನುಕೂಲವಾಗಲು Automatic Boom Barrier, UVSM (Under Vehicle Search Mirror) ಗಳನ್ನು ಅಳವಡಿಸುವುದು.

- ತಪಾಸಣಾ ವಿಭಾಗ 2 ರಲ್ಲಿ ಕಾರಾಗೃಹಕ್ಕೆ ಪ್ರವೇಶಿಸುವ ವ್ಯಕ್ತಿಗಳ ಮತ್ತು ಸರಕು ಸಾಮಗ್ರಿಗಳ ತಪಾಸಣೆಗಾಗಿ ಪ್ರಸ್ತುತ HHMD, DFMD ಗಳನ್ನು ಬಳಸುತ್ತಿದ್ದು, ಇದರ ಜೊತೆಗೆ Body Scanner, ನುರಿತ ಶ್ವಾನದಳ / Sniffer Dogs, X-BIS / Cargo Scanner ಗಳನ್ನು ಅಳವಡಿಸುವುದರಿಂದ ಪರಿಣಾಮಕಾರಿಯಾಗಿ ತಪಾಸಣಾ ಕಾರ್ಯವನ್ನು ಕೈಗೊಳ್ಳಬಹುದು.

(ಎಸ್.ಮುರುಗನ್, ಐ.ಪಿ.ಎಸ್.)
ವಿಚಾರಣಾಧಿಕಾರಿಗಳು ಹಾಗೂ
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು
(ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ)
ಬೆಂಗಳೂರು.

# ವಿಚಾರಣಾ ವರದಿ
# *Enquiry Report*


**ವಿಚಾರಣಾಧಿಕಾರಿಗಳು**

**ಡಾ: ಚಂದ್ರಗುಪ್ತ, ಐಪಿಎಸ್**

ಅಪರ ಪೊಲೀಸ್ ಆಯುಕ್ತರು (ಅಪರಾಧಗಳು)

ಬೆಂಗಳೂರು ನಗರ

# ಬೆಂಗಳೂರು ನಗರ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಮೊ ಸಂ 250/2024 ಕೇಸಿನ ಆರೋಪಿತ ದರ್ಶನ್ ಮತ್ತು ಸಹಚರರಿಗೆ ಕೇಂದ್ರ ಕಾರಾಗೃಹದಲ್ಲಿ ವಿಶೇಷ ಸೌಲಭ್ಯಗಳನ್ನು ನೀಡಿರುವುದಾಗಿ ಸುದ್ದಿ ಮಾಧ್ಯಮಗಳಲ್ಲಿ ಜೈಲಿನ ಆಡಳಿತದ ವಿರುದ್ಧವಾಗಿ ಪ್ರಸಾರವಾಗಿದ್ದ ಸುದ್ದಿಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 116 ಸಿಓಡಿ 2024 ಬೆಂಗಳೂರು ದಿನಾಂಕ 31.08.2024 ರಲ್ಲಿನ ಆದೇಶದ ಪ್ರಕಾರ ನಡೆಸಿರುವ ವಿಚಾರಣಾ ವರದಿ

ಡಾ: ಚಂದ್ರಗುಪ್ತ, ಐಪಿಎಸ್,
ಅಪರ ಪೊಲೀಸ್ ಆಯುಕ್ತರು (ಅಪರಾಧಗಳು)
ಬೆಂಗಳೂರು ನಗರ

ತಿಳಿಸುವ ಬ್ಯಾಂಕ್ ಅಕೌಂಟ್ ಗಳಿಗೆ / ಫೋನ್ ಪೇ / ಗೂಗಲ್ ಪೇ ನಂಬರ್ ಗಳಿಗೆ ಸಂದಾಯ ಮಾಡಿಸಿಕೊಳ್ಳುವ ಪದ್ಧತಿಯನ್ನು ರೂಢಿಸಿಕೊಂಡಿರುತ್ತಾರೆ.

12.3) ವಿಚಾರಣಾ ಬಂಧಿಗಳು ಜೈಲಿನಲ್ಲಿ ಅವರ ಅಗತ್ಯಕ್ಕೆ ಸಂಬಂಧಿಕರುಗಳಿಂದ ತರಿಸಿಕೊಳ್ಳುವ ಹಣದಲ್ಲಿ ಶೇಕಡ 20% ರಷ್ಟು ಹಣವನ್ನು ಕಡಿತಗೊಳಿಸಿಕೊಂಡು ಉಳಿದ ಹಣವನ್ನು ಬಂಧಿಗಳಿಗೆ ವಿತರಿಸಲಾಗುತ್ತಿದೆ ಎಂಬುದಾಗಿ ಬಂಧಿಗಳು ತಮ್ಮ ಹೇಳಿಕೆಗಳಲ್ಲಿ ತಿಳಿಸಿರುತ್ತಾರೆ. (ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಮೊ ಸಂ 447/2024 ಕೇಸಿನ ತನಿಖಾಧಿಕಾರಿ ಎಸಿಪಿ, ಸಿಸಿಬಿ ರವರು ಸಲ್ಲಿಸಿರುವ **ಅನುಬಂಧ-25(ಎ)** ರಲ್ಲಿ ಅಡಕಗೊಳಿಸಿರುವ ವರದಿಯನ್ನು ಅವಲೋಕಿಸುವುದು)

12.4) ಕೇಂದ್ರ ಕಾರಾಗೃಹದಲ್ಲಿರುವ ಆಸ್ಪತ್ರೆಯ ವೈದ್ಯಾಧಿಕಾರಿಯವರಾದ ಡಾ: ಹರ್ಷವರ್ಧನ್ ರವರ ವಿಚಾರಣೆ ಮಾಡಲಾಯ್ತು. ಇವರು ತಮ್ಮ ಹೇಳಿಕೆಯಲ್ಲಿ ಕಾರಾಗೃಹದಲ್ಲಿನ ಖೈದಿಗಳು ಮಾಧಕ ವ್ಯಸನಿಗಳಾಗಿರುವುದಾಗಿಯೂ, ಕಾರಾಗೃಹದಿಂದ ಖೈದಿಗಳನ್ನು ಬೇರೆ ಕಡೆಗೆ ಚಿಕಿತ್ಸೆಗೆ ಕಳುಹಿಸುವಾಗ್ಗೆ ಜೈಲಿನ ಅಧೀಕ್ಷಕರ ಅನುಮತಿ ಮೇರೆಗೆ ಅಂಬಲೆನ್ಸ್ ನಲ್ಲಿ ಹೊರಗಡೆಗೆ ಕಳುಹಿಸುತ್ತಿರುವುದಾಗಿಯೂ, ಆಸ್ಪತ್ರೆಯ ಕೆಲಸಗಳಿಗೆ 12 ಜನ ವಿಚಾರಣಾ ಬಂಧಿಗಳನ್ನು ನೇಮಕ ಮಾಡಿಕೊಂಡಿರುವುದಾಗಿಯೂ ತಿಳಿಸಿರುತ್ತಾರೆ. ಅಂದರೆ, ಚಿಕಿತ್ಸೆ ನೆಪದಲ್ಲಿ ಅಂಬುಲೆನ್ಸ್ ಗಳಲ್ಲಿ ಹೋಗಿಬರುವ ಖೈಧಿಗಳ ಮುಖಾಂತರವು ನಿಷೇಧಿತ ವಸ್ತುಗಳು ಕಾರಾಗೃಹಕ್ಕೆ ಸೇರುವ ಸಾಧ್ಯತೆ ಇರುತ್ತದೆ. ಡಾ: ಹರ್ಷವರ್ಧನ್ ರವರ ಹೇಳಿಕೆಯನ್ನು **ಅನುಬಂಧ-23** ರಲ್ಲಿ ಅಡಕಗೊಳಿಸಲಾಗಿದೆ)

## **ಕೇಂದ್ರ ಕಾರಾಗೃಹದ ಸುಧಾರಣೆಗೆ ಕೈಗೊಳ್ಳಬಹುದಾದ ಕ್ರಮಗಳು**

### ಅ) ಅಲ್ಪಾವಧಿಯ ಕ್ರಿಯಾ ಯೋಜನೆಗಳು

1) ಕಾರಾಗೃಹದಲ್ಲಿ ಅಳವಡಿಸಲಾಗಿರುವ ಸಿಸಿ ಕ್ಯಾಮರಾ ಗಳ ದೃಶ್ಯಾವಳಿಗಳನ್ನು ಪರ್ಯಾಯವಾಗಿ ನೇರ ವೀಕ್ಷಣೆಗೆ ಅನುಕೂಲವಾಗುವಂತೆ ಸ್ಥಳೀಯ ಪೊಲೀಸ್ ಠಾಣೆಯಾದ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಅಥವಾ ಬೆಂಗಳೂರು ನಗರ ನಿಯಂತ್ರಣ ಕೋಣೆಗಾಗಲಿ, ನೇರ ಪ್ರಸಾರ ಒದಗಿಸಲು ಏರ್ಪಾಟು ಮಾಡುವುದು. ಈ ರೀತಿಯಾಗಿ ಮಾಡುವುದರಿಂದ, ಮುಖ್ಯ ದ್ವಾರದಲ್ಲಿನ ಸಿಬ್ಬಂದಿಗಳು, ಮೇಲಾಧಿಕಾರಿಗಳು

ಕಾರಾಗೃಹದಲ್ಲಿನ ಚಟುವಟಿಕೆಗಳನ್ನು ನೇರವಾಗಿ ಗಮನಿಸುತ್ತಿದ್ದಾರೆಂಬ ಭಾವನೆಯಿಂದಾಗಿ, ಅಕ್ರಮಗಳಿಗೆ ಅವಕಾಶವಾಗದಂತೆ, ಹೆಚ್ಚು ಜವಬ್ದಾರಿಯುತವಾಗಿ / ಜಾಗರೂಕತೆಯಿಂದ ಕ್ರಿಯಾಶೀಲರಾಗಿ ಕರ್ತವ್ಯ ನಿರ್ವಹಿಸಲು ಸಾದ್ಯವಾಗುತ್ತದೆ. ಅಲ್ಲದೆ, ಜೈಲಿನಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳ ವೀಕ್ಷಣೆಗೆ ಕೆಎಸ್ಐಎಸ್ಎಫ್ ಸಿಬ್ಬಂದಿ & ಜೈಲಿನ ಸಿಬ್ಬಂದಿಗಳನ್ನು ಜಂಟಿಯಾಗಿ ನಿಯೋಜಿಸಿದಲ್ಲಿ ಇಬ್ಬರಿಗೂ ಜವಬ್ದಾರಿವಹಿಸಿದಂತಾಗಲಿದೆ.

2) ಮುಖ್ಯ ದ್ವಾರದಲ್ಲಿ ಹಗಲಿರುಳು ಅಂದರೆ, ಮೂರು ಪಾಳಿಗಳಲ್ಲಿಯೂ ಪುರುಷ ಮತ್ತು ಮಹಿಳಾ (24x7) ಸಿಬ್ಬಂದಿಗಳನ್ನು ಕಡ್ಡಾಯವಾಗಿ ನಿಯೋಜಿಸುವುದು. ಕಾರಾಗೃಹದ ಮುಖ್ಯ ದ್ವಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಎಸ್ಐಎಸ್ಎಫ್ ಸಿಬ್ಬಂದಿಗಳಿಗೆ ಬಾಡಿವೋರ್ನ್ ಕ್ಯಾಮರ ಗಳನ್ನು ವಿತರಿಸುವುದು. ಬಾಡಿವೋರ್ನ್ ಕ್ಯಾಮರಾಗಳಲ್ಲಿ ಸೆರೆಯಾಗುವ ದೃಶ್ಯಗಳನ್ನು ನಿಗಧಿತ ಸಮಯದವರೆಗೆ (ಕನಿಷ್ಠ 90 ದಿನಗಳು) ಸಂಗ್ರಹಿಸಿಟ್ಟುಕೊಳ್ಳತಕ್ಕದ್ದು. ಜೈಲಿನ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಬಾಡಿವೊರ್ನ ಕ್ಯಾಮರಾಗಳನ್ನು ಒದಗಿಸುವುದು ಮತ್ತು ಕಡ್ಡಾಯವಾಗಿ ಕೆಲಸದ ವೇಳೆಯಲ್ಲಿ ಬಾಡಿವೊರ್ನ ಕ್ಯಾಮರಾ ತಪ್ಪದೆ ಧರಿಸುವುದು. ಜೈಲಿಗೆ ಆಗಮಿಸುವ ಎಲ್ಲರನ್ನು ಪೂರ್ಣ ಪ್ರಮಾಣದಲ್ಲಿ ತಪಾಸಣೆಗೊಳಪಡಿಸುವುದು. ಯಾವುದೇ ಹಂತದ ಅಧಿಕಾರಿಗಳಿಗೂ ತಪಾಸಣೆಯಿಂದ ವಿನಾಯಿತಿ ನೀಡಬಾರದು.

3) ಕಾರಾಗೃಹಕ್ಕೆ ದಿನಸಿ ಪದಾರ್ಥಗಳು, ತರಕಾರಿ / ಮಾಂಸ ಸರಬರಾಜು ಮಾಡುವ ಏಜೆನ್ಸಿಗಳಿಗೆ ನಿರ್ಧಿಷ್ಠ ಸಮಯದಲ್ಲಿ ನಿರ್ಧಿಷ್ಠ ಸ್ಥಳದವರೆಗೆ ಮಾತ್ರ ಪ್ರವೇಶ ನೀಡುವುದು. ಗೇಟಿನ ಹೊರಭಾಗ ನಿಲ್ಲಿಸಿ, ವಾಹನದಲ್ಲಿ ತರಲಾಗಿರುವ ಪದಾರ್ಥಗಳನ್ನು ಗುರುತಿಸಿ, ಪರಿಶೀಲನೆ ಮಾಡಲು ಓರ್ವ ಅಧಿಕಾರಿಯನ್ನು ನೇಮಕ ಮಾಡಿ, ತದನಂತರ ಗೇಟ್ ನಿಂದ ಸಾಮಾಗ್ರಿಗಳನ್ನು ಸರ್ಕಾರಿ ವಾಹನದಲ್ಲಿ ತೆಗೆದುಕೊಂಡು ಹೋಗುವ ವ್ಯವಸ್ಥೆಯನ್ನು ರೂಪಿಸಬೇಕು. ಯಾವುದೇ ಕಾರಣಕ್ಕೂ ಜೈಲಿನ ಒಳಭಾಗಕ್ಕೆ ಖಾಸಗಿ ವಾಹನಗಳಿಗೆ ಪ್ರವೇಶ ನೀಡಬಾರದು. ದಿನಸಿ ಸರಬರಾಜು ಮಾಡುವವರಿಗೆ ಫೋಟೋ ಸಹಿತ ಗುರ್ತಿನ ಚೀಟಿಗಳನ್ನು ನೀಡಬೇಕು.

4) ಜೈಲಿನಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳ ವೀಕ್ಷಣೆಗೆ ಕೆಎಸ್‌ಐಎಸ್‌ಎಫ್ ಸಿಬ್ಬಂದಿ & ಜೈಲಿನ ಸಿಬ್ಬಂದಿಗಳನ್ನು ಜಂಟಿಯಾಗಿ ನಿಯೋಜಿಸುವುದು.

5) ಜೈಲಿನ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿಗಳನ್ನು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಜೈಲಿನ ಆಸ್ಪತ್ರೆಯಲ್ಲಿ ಮುಂದುವರಿಸದೇ ಬದಲಾವಣೆ ಮಾಡುವ ವ್ಯವಸ್ಥೆ ಮಾಡುವುದು.

ಪ್ರಸ್ತುತ ಜೈಲಿನ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿಗಳು ಬಹಳ ವರ್ಷಗಳಿಂದಲೂ ಅದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಜೈಲಿನಲ್ಲಿರುವ (ವಿಚಾರಣಾ ಬಂಧಿ / ಸಜಾ ಬಂಧಿಗಳು) ಖೈದಿಗಳೊಂದಿಗೆ ನಿರಂತರ ಸಂಪರ್ಕ ಏರ್ಪಡುವುದರಿಂದ, ಇವರುಗಳು ಪರಸ್ಪರ ಹೊಂದಾಣಿಕೆ ಮಾಡಿಕೊಂಡು ನಿಷೇಧಿತ ವಸ್ತುಗಳನ್ನು ಜೈಲಿನೊಳಗೆ ಸಾಗಾಟ ಮಾಡುವಂತಹ ಅಕ್ರಮ ಚಟುವಟಿಕೆಗಳಿಗೆ ಅವಕಾಶವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇಂತಹ ಅಕ್ರಮ ಹೊಂದಾಣಿಕೆಯನ್ನು ತಪ್ಪಿಸಲು ಜೈಲಿನ ವೈದ್ಯಕೀಯ ಸಿಬ್ಬಂದಿಗಳನ್ನು ನಿರಂತರವಾಗಿ ಬದಲಾವಣೆ ಮಾಡುವುದು ಸೂಕ್ತವೆಂದು ಅಭಿಪ್ರಾಯಪಡಲಾಗಿದೆ.

6) ರಾತ್ರಿ ಪಾಳಿಯಲ್ಲಿ ಒಬ್ಬರು ಸಹಾಯಕ ಅಧೀಕ್ಷಕರನ್ನು ಜೈಲಿನ ಕರ್ತವ್ಯದ ಉಸ್ತುವಾರಿಗೆ ನೇಮಕ ಮಾಡುವುದು.

ಪ್ರಸ್ತುತ ರಾತ್ರಿ ಪಾಳಿಯಲ್ಲಿ ಜೈಲಿನ ಉಸ್ತುವಾರಿಯಲ್ಲಿ ಸಹಾಯಕ ಜೈಲರ್ / ಜೈಲರ್ ಮಟ್ಟದ ಅಧಿಕಾರಿ ಮಾತ್ರವೇ ಇರುತ್ತಿದ್ದು, ಇವರುಗಳು ಸಹಾ ಸ್ವತಹ ಮುಖ್ಯ ದ್ವಾರದಲ್ಲಿ ಖುದ್ದು ಹಾಜರಿರದೆ, ಗೇಟಿನಲ್ಲಿನ ಸಿಬ್ಬಂದಿಗಳ ಮೇಲೆ ಜವಾಬ್ದಾರಿಯನ್ನು ವರ್ಗಾಯಿಸುತ್ತಿದ್ದು, ಈ ಸಂದರ್ಭಗಳನ್ನು ದುರುಪಯೋಗಿಸಿಕೊಂಡು ಜೈಲಿನ ಮುಖ್ಯದ್ವಾರದ ಮುಖಾಂತರ ರಾತ್ರಿ ವೇಳೆ ಬಹುತೇಕ ನಿಷೇಧಿತ ವಸ್ತುಗಳು ಜೈಲಿಗೆ ಅಕ್ರಮವಾಗಿ ಒಳ ಹೋಗಲು ಅವಕಾಶವಾಗುತ್ತಿರುವ ಸಾಧ್ಯತೆ ಇರುತ್ತದೆ. ಗೇಟಿನ ಸಿಬ್ಬಂದಿಗಳು ಹಾಗೂ ಉಸ್ತುವಾರಿ ಜೈಲರ್ / ಸಹಾಯಕ ಜೈಲರ್ ಗಳು ಪರಸ್ಪರರು ತಮ್ಮ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಾಗಿರುತ್ತದೆ. ಆದ್ದರಿಂದ, ರಾತ್ರಿ ಪಾಳಿಯ ಉಸ್ತುವಾರಿಗೆ ಮುಖ್ಯದ್ವಾರದಲ್ಲಿ ಒಬ್ಬರು ಸಹಾಯಕ ಅಧೀಕ್ಷಕರ ಮಟ್ಟದ

ಅಧಿಕಾರಿಯವರನ್ನೇ ಜವಬ್ದಾರಿಯನ್ನಾಗಿಸಿದಲ್ಲಿ, ತಪಾಸಣೆ ಕಾರ್ಯವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಾಗುತ್ತದೆಂದು ಅಭಿಪ್ರಾಯಪಡಲಾಗಿದೆ.

7) ಕಾರಾಗೃಹದಲ್ಲಿ ಮೊಬೈಲ್ ಫೋನ್ ಬಳಕೆಯನ್ನು ಪರಿಣಾಮಕಾರಿಯಾಗಿ / ಪಾರದರ್ಶಕವಾಗಿ ಪತ್ತೆ ಹಚ್ಚುವ ಪ್ರಕ್ರಿಯೆಯಲ್ಲಿ ದೂರ ಸಂಪರ್ಕ ಇಲಾಖೆಯ ಅಧಿಕಾರಿಗಳು, ಟೆಲಿಕಾಂ ಸರ್ವಿಸ್ ಪ್ರೋವೈಡರ್‌ಗಳೊಂದಿಗೆ ಸ್ಥಳೀಯ ವಿಭಾಗೀಯ ಉಪ ಪೊಲೀಸ್ ಆಯುಕ್ತರು, ರವರ ಸಮ್ಮುಖದಲ್ಲಿ ಪ್ರತಿ 15 ದಿನಗಳಿಗೊಮ್ಮೆ ಅನಿರೀಕ್ಷಿತ ತಪಾಸಣೆ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸುವುದು.

8) ಜೈಲಿನಲ್ಲಿರುವ ಅಂಬುಲೆನ್ಸ್ ವಾಹನಗಳು, ಮತ್ತು ಜೈಲಿನ ಪೆಟ್ರೋಲಿಂಗ್ ವಾಹನಗಳು ಜೈಲಿನಿಂದ ಆಚೆಗೆ ಹೋಗಿ ವಾಪಸ್ಸು ಜೈಲಿಗೆ ಒಳ ಬರುವ ಸಂದರ್ಭದಲ್ಲಿ ಸಂಪೂರ್ಣ ತಪಾಸಣೆಗೊಳಪಡಿಸಬೇಕು.

9) ಜೈಲಿನ ಮುಖ್ಯದ್ವಾರದಲ್ಲಿ ಬಂಧಿಗಳಿಗೆ ತಂದು ಕೊಡುವ ಬಟ್ಟೆ ಮತ್ತು ಇತರೆ ವಸ್ತುಗಳಲ್ಲಿ ಸಿಮ್ ಕಾರ್ಡ್ ಗಳನ್ನು ಅಡಗಿಸಿಟ್ಟು ಕಳುಹಿಸುವುದನ್ನು ನಿಯಂತ್ರಿಸಲು ಬಂಧಿಗಳಿಗೆ ಕೊಡುವ ಬಟ್ಟೆಗಳನ್ನು ಸಂಪೂರ್ಣ ಸ್ಕ್ಯಾನ್ ಮಾಡಿದ ನಂತರ ಒಳಗಡೆ ಬಿಡತಕ್ಕದ್ದು.

### ಆ) ದೀರ್ಘಾವಧಿ ಕ್ರಿಯಾ ಯೋಜನೆಗಳು

1) ಕಾರಾಗೃಹದಲ್ಲಿ ವಿಚಾರಣಾ ಬಂಧಿಗಳು ಮತ್ತು ಸಜಾ ಬಂಧಿಗಳನ್ನು ಪ್ರತ್ಯೇಕಿಸುವುದು. ಸಜಾ ಬಂಧಿಗಳು ಯಾವುದೇ ಕಾರಣಕ್ಕೂ ವಿಚಾರಣಾ ಬಂಧಿಗಳನ್ನು ಭೇಟಿಯಾಗಲು ಅವಕಾಶವಾಗದಂತೆ ನೋಡಿಕೊಳ್ಳಬೇಕು.

ಪ್ರಸ್ತುತ ಸಜಾ ಬಂಧಿಗಳು, ವಿಚಾರಣಾ ಬಂಧಿಗಳ ಬ್ಯಾರಕ್ ಗಳಲ್ಲಿ ಮುಕ್ತವಾಗಿ ಹೋಗಿ ಬರಲು ಅವಕಾಶವಾಗುತ್ತಿದ್ದು, ಈ ಸಜಾ ಬಂಧಿಗಳು ಜೈಲಿನಲ್ಲಿ ಅಕ್ರಮವಾಗಿ ಹಣ ಮಾಡುವ ದಂಧೆಗಳಿಗೆ ಇಳಿದು ಮೊಬೈಲ್, ಮಾಧಕ ವಸ್ತುಗಳನ್ನು ಜೈಲಿಗೆ ಸರಬರಾಜು ಮಾಡುವ ಸಾಧ್ಯತೆಗಳಿರುವುದರಿಂದ, ಸಜಾ ಬಂಧಿಗಳನ್ನು ವಿಚಾರಣಾ ಬಂಧಿ ಗಳೊಂದಿಗೆ ಸಂಪರ್ಕವಾಗದಂತೆ ಪ್ರತ್ಯೇಕಿಸಿದಾಗ ಈ ಅಕ್ರಮವನ್ನು ಪರಿಣಾಮ - ಕಾರಿಯಾಗಿ ನಿಯಂತ್ರಿಸಲು ಸಾಧ್ಯವಾಗುತ್ತದೆ. ಆದ್ದರಿಂದ, ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ನೂತನ ಕಾರಾಗೃಹದ ಕಟ್ಟಡದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ವಿಚಾರಣಾ ಬಂಧಿಗಳು ಮತ್ತು ಸಜಾ ಬಂಧಿಗಳನ್ನು ಪ್ರತ್ಯೇಕವಾಗಿ

ಬಂಧನದಲ್ಲಿಡುವ ವ್ಯವಸ್ಥೆಯನ್ನು ಜಾರಿಗೊಳಿಸಿದರೆ, ನಿಷೇಧಿತ ವಸ್ತುಗಳಾದ ಗಾಂಜಾ, ಮೊಬೈಲ್ ಫೋನ್ ಗಳು ಕಾರಾಗೃಹಕ್ಕೆ ಸರಬರಾಜು ಆಗುವುದನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ.

2) ಜೈಲಿನ ಅಧಿಕಾರಿ / ಸಿಬ್ಬಂದಿಗಳಿಗೆ ಕನಿಷ್ಠ ಮೂರು ವರ್ಷಗಳಿಗೊಮ್ಮೆ ಆತ್ಮಸ್ಥೈರ್ಯ ಹೆಚ್ಚಿಸಲು ಪುನರ್ಮನನ ತರಬೇತಿಗಳನ್ನು ಆಯೋಜಿಸುವುದು.

ಪ್ರಸ್ತುತ ವಿಚಾರಣೆ ಕಾಲದಲ್ಲಿ ವಿಚಾರಣೆ ಮಾಡಲಾದ ಕಾರಾಗೃಹ ಸಿಬ್ಬಂದಿಗಳಲ್ಲಿ ಬಹುತೇಕರಿಗೆ ಪ್ರಸ್ತುತ ಪರಿಸ್ಥಿತಿಗಳಲ್ಲಿ ವೈವಿಧ್ಯಮಯ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಜೈಲು ಸೇರುತ್ತಿರುವ ಆರೋಪಿ / ಅಪರಾಧಿಗಳನ್ನು ಶಿಸ್ತಿನಿಂದ ನಿರ್ವಹಣೆ ಮಾಡಲು ಹಾಗೂ ಅವರುಗಳನ್ನು ಸಮರ್ಪಕವಾಗಿ ಸುಧಾರಣಾ ಪ್ರಕ್ರಿಯೆಗಳಿಗೆ ಒಳಪಡಿಸುವಂತ ಮಾನಸಿಕ ಸ್ಥಿರತೆ ಹಾಗೂ ಬೌದ್ಧಿಕ ಜ್ಞಾನದ ಕೊರತೆ ಇರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಸಿಬ್ಬಂದಿಗಳ ಮನೋ ವಿಕಾಸ, ಮಾನಸಿಕ ಸ್ಥೈರ್ಯ, ಹಾಗೂ ಸ್ವಯಂ ಶಿಸ್ತು ರೂಡಿಸಿಕೊಳ್ಳಲು ಅನುವಾಗುವಂತೆ ಮನೋವಿಜ್ಞಾನ ಪರಿಣಿತರುಗಳು / ವಿಷಯ ಪರಿಣಿತರುಗಳಿಂದ ಕಾರಾಗೃಹದ ಅಧಿಕಾರಿ / ಸಿಬ್ಬಂದಿಗಳಿಗೆ ನಿರಂತರವಾಗಿ ಪುನರ್ಮನನ ತರಬೇತಿಗಳನ್ನು ಆಯೋಜಿಸಿದರೆ, ಜೈಲಿನ ಅಧಿಕಾರಿ / ಸಿಬ್ಬಂದಿಗಳು ಬಗ್ಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅವಕಾಶವಾಗುತ್ತದೆ. ಕಾರಾಗೃಹದ ಅಧಿಕಾರಿ / ಸಿಬ್ಬಂದಿಗಳನ್ನು ವಿಚಾರಣಾ / ಸಜಾ ಬಂಧಿಗಳನ್ನು ಪರಿಣಾಮಕಾರಿಯಾಗಿ ಸುಧಾರಣಾ ಪ್ರಕ್ರಿಯೆಗಳಿಗೆ ಒಳಪಡಿಸಲು ಜೈಲರ್ ಗಿಂತ ಕೆಳಹಂತದ ಸಿಬ್ಬಂದಿಗಳಿಗೆ ಪ್ರತಿ 3 ವರ್ಷಕ್ಕೊಮ್ಮೆ ಪುನರ್ಮನನ ತರಬೇತಿಗಳನ್ನು ಆಯೋಜಿಸಲು ಶಿಫಾರಸ್ಸು ಮಾಡಲಾಗಿದೆ.

3) ಕಾರಾಗೃಹದಲ್ಲಿರುವ ಮದ್ಯ / ಮಾದಕ ವ್ಯಸನಿಗಳನ್ನು ಸಾಮಾನ್ಯ ಖೈದಿಗಳಿಂದ ಬೇರ್ಪಡಿಸುವುದು.

ಪ್ರಸ್ತುತ ಮದ್ಯ / ಮಾದಕ ವ್ಯಸನಿಗಳು ಹಾಗೂ ಸಾಮಾನ್ಯ ಖೈದಿಗಳನ್ನು ಒಟ್ಟಾಗಿಯೇ ಇರಿಸುತ್ತಿದ್ದು, ಇಂತಹ ವ್ಯಸನಿಗಳಿಂದಾಗಿ ಕಾರಾಗೃಹದಲ್ಲಿನ ಸಾಮಾನ್ಯ ಬಂಧಿಗಳು ಸಹಾ ಜೈಲಿನ ವಾತಾವರಣದಲ್ಲಿ ಖಿನ್ನತೆಗಳೊಗಾಗಿ ಅವರುಗಳು ಸಹಾ ಮದ್ಯ ಮಾಧಕ ಚಟಗಳಿಗೆ ಒಳಗಾಗಿ ಮದ್ಯ / ಮಾದಕ ವಸ್ಯನಿಗಳಾಗಿ ಬದಲಾಗುವ

ಸಾಧ್ಯತೆಗಳಿರುತ್ತದೆ. ಆದ್ದರಿಂದ, ಮದ್ಯ / ಮಾಧಕ ವ್ಯಸನಿಗಳನ್ನು ಸಾಮಾನ್ಯ ಖೈದಿಗಳಿಂದ ಪ್ರತ್ಯೇಕಿಸಿ ಇಟ್ಟಾಗ ಅವರುಗಳಿಂದ ಬೇರೆಯವರು ಪ್ರಭಾವಿತರಾಗಿ, ಮದ್ಯ ಮಾಧಕ ವಸ್ತುಗಳಿಗೆ ದಾಸರಾಗಿ ವ್ಯಸನಿಗಳಾಗುವುದನ್ನು ತಪ್ಪಿಸುವುದಲ್ಲದೇ, ಈಗಾಗಲೇ ಮದ್ಯ / ಮಾಧಕ ವ್ಯಸನಿಗಳಾಗಿರುವವರನ್ನು ಜೈಲಿನಲ್ಲಿ ಪ್ರತ್ಯೇಕವಾಗಿ ನಿಗಾವಣೆಯಲ್ಲಿಟ್ಟು ಅವರುಗಳಿಗೆ ಆಪ್ತ ಸಮಾಲೋಚರಿಂದ ಸೂಕ್ತ ಸಮಾಲೋಚನೆ / ಸೂಕ್ತ ಚಿಕಿತ್ಸೆಗಳನ್ನು ಏರ್ಪಡಿಸಿ, ಅವರುಗಳನ್ನು ವ್ಯಸನಮುಕ್ತರಾಗಿಸಲು ಸಹಕಾರಿಯಾಗುವುದರಿಂದ, ಈ ಸಲಹೆಯನ್ನು ಶಿಫಾರಸ್ಸು ಮಾಡಲಾಗಿದೆ.

4) ವಿದೇಶಿ ಖೈದಿಗಳನ್ನು ಸಾಮಾನ್ಯ ಖೈದಿಗಳಿಂದ ಪ್ರತ್ಯೇಕಿಸುವುದು.

ಸಾಮಾನ್ಯವಾಗಿ ಆಫ್ರಿಕ ಮೂಲದ ವಿದೇಶಿಯರುಗಳು ಹೆಚ್ಚಾಗಿ ಡ್ರಗ್ಸ್ ಅಪರಾಧಗಳಲ್ಲಿ ಕಾರಾಗೃಹಕ್ಕೆ ಸೇರ್ಪಡೆಯಾಗುತ್ತಿದ್ದು, ಇವರುಗಳಲ್ಲಿ ಬಹುತೇಕರು ಮದ್ಯ / ಮಾಧಕ ವಸ್ತುಗಳ ಸೇವನೆಗಳನ್ನು ರೂಡಿಸಿಕೊಂಡವರಾಗಿದ್ದು, ಇವರುಗಳಿಂದ ಪ್ರಭಾವಿತರಾಗಿ ಸಾಮಾನ್ಯ ಖೈದಿಗಳು ಸಹಾ ಜೈಲಿನಲ್ಲಿ ದುಶ್ಚಟಗಳನ್ನು ರೂಡಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಇಂತಹ ಮದ್ಯ ಮಾಧಕ ವಸ್ತು ಸೇವನೆಯ ಚಟಗಳಿಗೆ ಬಲಿಯಾಗುವ ಸಾಮಾನ್ಯ ಖೈದಿಗಳು, ಮದ್ಯ ಮಾಧಕ ವಸ್ತುಗಳನ್ನು ಸೇವಿಸುವ ತಮ್ಮ ಚಟಗಳನ್ನು ಪೂರೈಸಿಕೊಳ್ಳಲು ಅಕ್ರಮ ಮಾರ್ಗಗಳನ್ನು ಹುಡುಕುವುದಕ್ಕೆ ಮುಂದಾಗುತ್ತಾರೆ. ಆ ಮೂಲಕ ಜೈಲಿನಲ್ಲಿ ಕಾನೂನು ಬಾಹಿರ ಕೃತ್ಯಗಳು ಹೆಚ್ಚಾಗಲು ಅವಕಾಶವಾಗುತ್ತದೆ. ಆದ್ದರಿಂದ, ವಿದೇಶಿ ಬಂಧಿಗಳನ್ನು ಸ್ಥಳಿಯ ಸಾಮಾನ್ಯ ಖೈದಿಗಳಿಂದ ಪ್ರತ್ಯೇಕಿಸಿದಾಗ, ವಿದೇಶಿ ಖೈದಿಗಳ ಪ್ರಭಾವಕ್ಕೆ ಒಳಗಾಗುವುದನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಾಗುತ್ತದೆ.

5) ಜೈಲಿನಲ್ಲಿ ವಿಚಾರಣಾ / ಸಜಾ ಬಂಧಿಗಳು ಕಾನೂನು ಬಾಹಿರವಾಗಿ ಉಪಯೋಗಿಸುತ್ತಿರುವ ಮೊಬೈಲ್ ಫೋನ್ ಗಳನ್ನು ಪರಿಣಾಮಕಾರಿಯಾಗಿ ಪತ್ತೆ ಹಚ್ಚಲು ತಪಾಸಣೆ ಅಧಿಕಾರಿಗಳಿಗೆ ಆಧುನಿಕ ಉಪಕರಣಗಳಾದ Non-linear junction

detector ಒದಗಿಸುವುದು. ಹಾಗೂ ಕಾರಾಗೃಹದಲ್ಲಿ ಅತ್ಯಂತ ಆಧುನಿಕ ಮಾದರಿಯ ಮೊಬೈಲ್ ಜಾಮರ್ ಗಳನ್ನು ಅಳವಡಿಸುವುದು.

6) ಪ್ರಸ್ತುತ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ 5000 ಕ್ಕೂ ಹೆಚ್ಚಿನ ಬಂಧಿಗಳು ಇದ್ದು, ಕೇವಲ 8 ಸ್ಥಿರ ದೂರವಾಣಿ ಸೌಲಭ್ಯಗಳಿರುವುದು ಪ್ರಾಯೋಗಿಕವಾಗಿ ಸಮರ್ಪಕವಾಗಿಲ್ಲ. ಖೈದಿಗಳು ಅವರ ಕುಟುಂಬ ಸದಸ್ಯರು, ವಕೀಲರುಗಳೊಂದಿಗೆ ಸಂಪರ್ಕಿಸಲು ಎಲ್ಲಾ ಬ್ಯಾರಕ್ ಗಳಲ್ಲಿಯೂ ಬಂಧಿಗಳ ಸಂಖ್ಯೆಗೆ ಅನುಗುಣವಾಗಿ ಸ್ಥಿರ ದೂರವಾಣಿಯನ್ನು ಒದಗಿಸುವುದು.

ಪ್ರಸ್ತುತ ಬಂಧಿಖಾನೆ ಅಧಿನಿಯಮ-2023 ರ ಪ್ರಕಾರ ಪ್ರತಿಯೊಬ್ಬ ಖೈದಿಯು ವಾರಕ್ಕೆ ಮೂರು ಬಾರಿ ತನ್ನ ಕುಟುಂಬ ಸದಸ್ಯರು ಅಥವಾ ವಕೀಲರನ್ನು ಫೋನ್ ಮುಖಾಂತರ ಸಂಪರ್ಕಿಸಲು ಅವಕಾಶವಿರುತ್ತದೆ. ಅದರಂತೆ, ಕನಿಷ್ಠ 5000 ಖೈದಿಗಳಿಗೂ ತಲಾ ಮೂರು ಬಾರಿಯಂತೆ ವಾರಕ್ಕೆ ಕನಿಷ್ಠ 15000 ಫೋನ್ ಕರೆಗಳನ್ನು ಮಾಡಬೇಕಾಗಿರುತ್ತದೆ. ಹಾಲಿ ಕೇಂದ್ರ ಕಾರಾಗೃಹದಲ್ಲಿ ಒದಗಿಸಲಾಗಿರುವ 8 ಸ್ಥಿರ ದೂರವಾಣಿಗಳಿಂದ ಪ್ರತಿದಿನ ಒಂದು ಸ್ಥಿರ ದೂರವಾಣಿ ಸಂಪರ್ಕದಿಂದ ಕನಿಷ್ಠ 250 ಕರೆಗಳಂತೆ, 8 ಸ್ಥಿರ ದೂರವಾಣಿಗಳಿಂದ ಸರಾಸರಿ ಸುಮಾರು 2000 ಕ್ಕಿಂತಲು ಹೆಚ್ಚಿನ ಕರೆಗಳನ್ನು ಮಾಡಬೇಕಾಗಿರುತ್ತದೆ. ಆದರೆ, ವಾಸ್ತವದಲ್ಲಿ ಇಷ್ಟು ಕರೆಗಳನ್ನು ಹಾಲಿ ಇರುವ 08 ಸ್ಥಿರ ದೂರವಾಣಿಗಳಿಂದ ಟೆಲಿಫೋನ್ ಕರೆಗಳನ್ನು ನಿರ್ವಹಿಸಲು ಸಾಧ್ಯವಾಗದೆ ಇರುವುದರಿಂದ, ಖೈದಿಗಳು ವಾಮಮಾರ್ಗಗಳಲ್ಲಿ ಹೆಚ್ಚು ಹೆಚ್ಚು ಹಣ ಕೊಟ್ಟು ಅಕ್ರಮವಾಗಿ ಮೊಬೈಲ್ ಫೋನ್ ಗಳನ್ನು ಜೈಲಿನೊಳಕ್ಕೆ ತರಿಸಿಕೊಂಡು ತಾವುಗಳು ಉಪಯೋಗಿಸುವುದಲ್ಲದೆ, ಬೇರೆ ಖೈದಿಗಳಿಗೂ ಮರು ಮಾರಾಟ ಮಾಡುತ್ತಿರುವುದಕ್ಕೆ ಅವಕಾಶವಾಗಿರುತ್ತದೆ. ಅದಕ್ಕೆ ಬದಲಾಗಿ ಎಲ್ಲಾ ಬ್ಯಾರಕ್ ಗಳಲ್ಲಿ ಸ್ಥಿರ ದೂರವಾಣಿಗಳನ್ನು ಅಳವಡಿಸಿ, ನಿಯಮಗಳಿಗನುಸಾರವಾಗಿ ಎಲ್ಲಾ ಖೈದಿಗಳಿಗೂ ಸ್ಥಿರ ದೂರವಾಣಿಗಳು ಸುಲಭವಾಗಿ ಲಭ್ಯವಾದಲ್ಲಿ, ಅಕ್ರಮ ಮಾರ್ಗಗಳಲ್ಲಿ ಮೊಬೈಲ್ ಫೋನ್ ಗಳು ಸರಬರಾಜು ಆಗುವುದನ್ನು ತಕ್ಕಮಟ್ಟಿಗೆ ನಿಯಂತ್ರಿಸಬಹುದಾಗಿರುತ್ತದೆ.

## ಅಂತಿಮ ಅಭಿಪ್ರಾಯ

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆಯುತ್ತಿರುವ ಕಾನೂನು ಬಾಹಿರ ಚಟುವಟಿಕೆಗಳು / ಘಟನೆಗಳ ಬಗ್ಗೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೊ ಸಂ 418/2024, 419/2024 & 420/2024 ಪ್ರಕರಣಗಳಲ್ಲಿನ ಆರೋಪಗಳು ದೃಢಪಟ್ಟಿರುತ್ತದೆ. ಕಾರಾಗೃಹದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಕಾರಾಗೃಹಗಳ ಕೈಪಿಡಿಯಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಕರಾರುವಕ್ಕಾಗಿ ಜಾರಿಗೊಳಿಸದೆ ಇರುವುದು, ಮುಖ್ಯದ್ವಾರದಲ್ಲಿ ತಪಾಸಣೆಯನ್ನು ಬಿಗಿಗೊಳಿಸದೇ ಇರುವುದು ಹಾಗೂ ಸಂಪೂರ್ಣವಾಗಿ ಪಾರದರ್ಶಕತೆ / ದಕ್ಷತೆಯಿಂದ ಆಡಳಿತ ನಡೆಸದೆ, ವಿಚಾರಣಾ ಬಂಧಿ / ಸಜಾ ಬಂಧಿಗಳ ಸ್ವಚ್ಛಂದ ಓಡಾಟಗಳನ್ನು ನಿರ್ಭಂಧಿಸದೆ, ಹೈ ಸೆಕ್ಯುರಿಟಿ ಕಟ್ಟಡಗಳಲ್ಲಿನ ಕೊಠಡಿ ಹಂಚಿಕೆಯಲ್ಲಿ ಪಾರದರ್ಶಕ ರೀತಿಯಲ್ಲಿ ಅರ್ಹತಾ ಮಾನದಂಡಗಳನ್ನು ಅನುಸರಿಸದೆ, ಸಜಾ ಬಂಧಿಗಳು ಮತ್ತು ವರ್ಷಾನುಗಟ್ಟಲೆ ಜೈಲಿನಲ್ಲಿರುವ ಹಳೆ ಖೈದಿಗಳಿಂದ ವ್ಯವಸ್ಥಿತವಾಗಿ ಅಕ್ರಮವಾಗಿ ಹಣ ಮಾಡಿಕೊಳ್ಳುವ ಸಲುವಾಗಿ ಜೈಲಿನ ಎಲ್ಲಾ ಹಂತದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಾಗಿರುವುದರಿಂದ, ಜೈಲಿನಲ್ಲಿ ನಿಷೇಧಿತ ವಸ್ತುಗಳಾದ ಮೊಬೈಲ್ ಫೋನ್‌ಗಳು, ಮಾಧಕ ವಸ್ತುಗಳು ಸರಾಗವಾಗಿ ಸೇರ್ಪಡೆಯಾಗುತ್ತಿರುವುದು ಸ್ಪಷ್ಟವಾಗಿರುತ್ತವೆ.

ಈ ರೀತಿಯ ಮೊಬೈಲ್ ಗಳನ್ನು ಉಪಯೋಗಿಸಿ intenet ಮತ್ತು VoIP ಮತ್ತು ಕಾಲ್ ಗಳ ಮುಖಾಂತರ ಬಂಧಿಗಳು ತಮ್ಮ ಅಕ್ರಮಗಳನ್ನು ಎಗ್ಗಿಲ್ಲದೆ ನಡೆಸುತ್ತಿರುತ್ತಾರೆ. ಕಳವಳಕಾರಿ ಅಂಶವೇನೆಂದರೆ, ಭಯೋತ್ಪಾದನಾ ಪ್ರಕರಣಗಳಲ್ಲಿ ಬಂಧಿತರಾದ ಅಪರಾಧಿಗಳು ತಮ್ಮ ಕುಕೃತ್ಯಗಳಿಗೆ ಈ ರೀತಿಯಲ್ಲಿ ಸರಬರಾಜಾದ ಮೊಬೈಲ್ ಪೋನ್‌ಗಳನ್ನು ಬಳಸಿ, ತಮ್ಮ ಭಯೋತ್ಪಾದನಾ ಚಟುವಟಿಕೆಗಳ ಜಾಲವನ್ನು ಇತರೆ ರಾಜ್ಯಗಳ ಕಾರಾಗೃಹಗಳಿಗೂ ಸಹಾ ವಿಸ್ತರಿಸಿರುತ್ತಾರೆ. ಆದುದರಿಂದ ಮೊಬೈಲ್ ಅಕ್ರಮ ಬಳಕೆಯ ನಿಯಂತ್ರಣ ದೇಶದ ಆಂತರಿಕ ಭದ್ರತೆಯ ದೃಷ್ಟಿಯಿಂದಲೂ ಸಹ ಅತೀ ಪ್ರಾಮುಖ್ಯವಾದುದೆಂದು ಕಂಡು ಬಂದಿರುತ್ತದೆ.

(ಡಾ: ಚಂದ್ರಗುಪ್ತ, ಐಪಿಎಸ್)
ಅಪರ ಪೊಲೀಸ್ ಆಯುಕ್ತರು (ಅಪರಾಧಗಳು)
ಹಾಗೂ ವಿಚಾರಣಾಧಿಕಾರಿಗಳು,
ಬೆಂಗಳೂರು ನಗರ

# "ಕರ್ನಾಟಕ ಕಾರಾಗೃಹ ಸುಧಾರಣೆಗಳು"

## ಕಾನೂನು ಬಾಹಿರ ಚಟುವಟಿಕೆಗಳು, ಭದ್ರತಾ ಕ್ರಮಗಳು ಮತ್ತು ಕಾರಾಗೃಹ ಸುಧಾರಣೆಗಳ ಕುರಿತು ಉನ್ನತ ಮಟ್ಟದ ಸಮಿತಿ ವರದಿ


ಆರ್. ಹಿತೇಂದ್ರ, ಭಾ.ಪೊ.ಸೇ.

[illegible]

[illegible]

# ಶಿಫಾರಸ್ಸುಗಳು (Recommendations)

ಸಮಿತಿಯ ಸದಸ್ಯರು ಕರ್ನಾಟಕ ರಾಜ್ಯದ ಎಲ್ಲಾ ಕೇಂದ್ರ ಕಾರಾಗೃಹಗಳಿಗೆ ಭೇಟಿ ನೀಡಿ ಪರಿಶೀಲನೆ/ ವಿಚಾರಣೆ ನಡೆಸಿ, ಹಾಗೂ ತಿಹಾರ್ ಕಾರಾಗೃಹ ದೆಹಲಿ, ಮತ್ತು ಚಂಚಲಗುಡ ಕೇಂದ್ರ ಕಾರಾಗೃಹ, ತೆಲಂಗಾಣದ ರಾಜ್ಯಗಳಿಗೆ ಭೇಟಿ ನೀಡಿ, ಅಲ್ಲಿನ ಉತ್ತಮ ಅಭ್ಯಾಸಗಳನ್ನು ಪರಿಶೀಲಿಸಿದ್ದಲ್ಲದೇ, ಈ ಹಿಂದೆ ರಚಿಸಲಾದ ಸಮಿತಿಗಳ ವರದಿಗಳನ್ನೂ ಕೂಡ ಪರಾಮರ್ಶಿಸಿ ಕರ್ನಾಟಕ ರಾಜ್ಯದ ಕಾರಾಗೃಹಗಳಲ್ಲಿ ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆಗಳು ನಡೆಯದಂತೆ ಕ್ರಮ ಕೈಗೊಳ್ಳುವ ಸಂಬಂಧ ಸಮಿತಿಯ ಎಲ್ಲಾ ಸದಸ್ಯರುಗಳು ಸಭೆ ನಡೆಸಿ, ಚರ್ಚಿಸಿ ಒಮ್ಮತದ ಅಭಿಪ್ರಾಯದಿಂದ ಈ ಕೆಳಗಿನಂತೆ ಶಿಫಾರಸುಗಳನ್ನು ಮಾಡಲಾಗಿದೆ.

A. ಮಾನವ ಸಂಪನ್ಮೂಲ.

B. **ಮೂಲಭೂತ ಸೌಕರ್ಯಗಳ ಸುಧಾರಣೆಗಳು.**

C. ತಾಂತ್ರಿಕ ಉಪಕರಣಗಳ ಉನ್ನತೀಕರಣ.

D. ಕಲ್ಯಾಣ ಮತ್ತು ಸುಧಾರಣಾ ಕ್ರಮಗಳು.

E. ಆಡಳಿತಾತ್ಮಕ ಸುಧಾರಣೆಗಳು.

F. ಭದ್ರತಾ ಕ್ರಮಗಳು.

A. ಮಾನವ ಸಂಪನ್ಮೂಲ (Human Resource)

1. **ಕಾರಾಗೃಹಗಳಲ್ಲಿನ ಖಾಲಿ ಹುದ್ದೆ:** ಕರ್ನಾಟಕ ರಾಜ್ಯದ ಕಾರಾಗೃಹಗಳು ಸಿಬ್ಬಂದಿಯ ತೀವ್ರ ಕೊರತೆಯನ್ನು ಎದುರಿಸುತ್ತಿವೆ ಎಂದು ಸಮಿತಿಯು ಗಮನಿಸಿದೆ, ಸುಮಾರು 40–47% ರಷ್ಟು ಖಾಲಿ ಹುದ್ದೆಗಳಿವೆ, ಇದರ ಪರಿಣಾಮವಾಗಿ ಕೈದಿ-ಸಿಬ್ಬಂದಿ ಅನುಪಾತವು ಮಾದರಿ ಜೈಲು ಕೈಪಿಡಿಯಲ್ಲಿ ನಮೂದಿಸಿರುವಂತೆ (1:6) ಇಲ್ಲದೇ ಇರುವುದು ಕಂಡುಬಂದಿರುತ್ತದೆ. ಉದಾಹರಣೆಗೆ ಪರಪ್ಪನ ಅಗ್ರಹಾರ ಕಾರಾಗೃಹವು 4,834 ಕೈದಿಗಳನ್ನು ಹೊಂದಿದ್ದು, ಪ್ರಸ್ತುತ ಕೇವಲ 571 ಸಿಬ್ಬಂದಿಯನ್ನು ಹೊಂದಿದ್ದು, 388 ಸಿಬ್ಬಂದಿಯ ರಿಕ್ತ ಸ್ಥಾನ ಇರುತ್ತದೆ. ಕಾರಾಗೃಹದ ಸುರಕ್ಷತೆ, ಭದ್ರತೆ ಮತ್ತು ಪರಿಣಾಮಕಾರಿ ಜೈಲು ಆಡಳಿತವನ್ನು ಖಚಿತ ಪಡಿಸಿಕೊಳ್ಳಲು ಕಾರಾಗೃಹಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ತಕ್ಷಣದ ಕ್ರಮದ ಅಗತ್ಯವಿದೆ.

**ಅಧಿಕಾರಿ ಹಾಗೂ ಸಿಬ್ಬಂದಿಯವರ ಸಂಖ್ಯಾ ಬಲ ಹಾಗೂ ಕಾರಾಗೃಹ ಕೈಪಿಡಿ ಪ್ರಕಾರ ಇರಬೇಕಾಗಿರುವ ಅಧಿಕಾರಿ/ಸಿಬ್ಬಂದಿಯವರ ಸಂಖ್ಯಾ ಬಲದ ತುಲಾತ್ಮಕ ವಿವರ.**

| ಕಾರಾಗೃಹದ ಹೆಸರು | ಕೈದಿಗಳ ಸಂಖ್ಯಾ ಬಲ | ಸಿಬ್ಬಂದಿಯವರ ಸಂಖ್ಯಾ ಬಲ | ಸಿಬ್ಬಂದಿಯವರ ರಿಕ್ತ ಸ್ಥಾನ | ಸಿಬ್ಬಂದಿ ಹಾಗೂ ಕೈದಿಯ ಅನುಪಾತ | 3 ಹಂತದಲ್ಲಿ ಕರ್ತವ್ಯ ನಿರ್ವಹಿಸುವಾಗ ಸಿಬ್ಬಂದಿ ಹಾಗೂ ಕೈದಿಯ ಅನುಪಾತ |
|---|---|---|---|---|---|
| **ಕಾರಾಗೃಹ ಕೈಪಿಡಿ ಶಿಫಾರಸ್ಸಿನ ಪ್ರಕಾರ ಇರಬೇಕಾದ ಸಂಖ್ಯಾ ಬಲ** | | | | 1:6 | |
| ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ, ಬೆಂಗಳೂರು. | 4834 | 571 | 388 | 1:9 | 1:27 |
| ಮೈಸೂರು | 774 | 133 | 53 | 1:6 | 1:18 |
| ಶಿವಮೊಗ್ಗ | 805 | 97 | 35 | 1:8 | 1:24 |
| ಶಿವಮೊಗ್ಗ (ಮಹಿಳಾ) | 32 | 23 | 06 | 1:1 | 1:3 |
| ಬಳ್ಳಾರಿ | 457 | 93 | 51 | 1:5 | 1:15 |
| ಕಲಬುರಗಿ | 559 | 150 | 63 | 1:4 | 1:12 |
| ಬೆಳಗಾವಿ | 824 | 145 | 44 | 1:6 | 1:18 |
| ವಿಜಯಪುರ | 537+1 | 129 | 10 | 1:4 | 1:12 |
| ಧಾರವಾಡ | 473 | 97 | 29 | 1:5 | 1:15 |

2. **ದೀರ್ಘಾವಧಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು**: ದೀರ್ಘಾವಧಿಯಿಂದ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯನ್ನು ಪರಿಶೀಲಿಸಿ, ಅವರನ್ನು ಇತರೆ ಕಾರಾಗೃಹಗಳಿಗೆ ವರ್ಗಾಯಿಸಬೇಕು. ಹಾಗೂ ಅಧಿಕಾರಿ/ಸಿಬ್ಬಂದಿಯವರನ್ನು 3 ವರ್ಷಗಳಿಗಿಂತ ಹೆಚ್ಚು ಕಾಲ ಒಂದೇ ಸ್ಥಳದಲ್ಲಿ ಮುಂದುವರಿಯಲು ಅವಕಾಶ ನೀಡಬಾರದು ಹಾಗೂ ಕನಿಷ್ಠ 2 ವರ್ಷಗಳ ಕೂಲಿಂಗ್ ಪಿರಿಯಡ್ ಇರಬೇಕು.

3. **ಆಧುನಿಕ ತರಬೇತಿ**: ಕಾರಾಗೃಹ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಪ್ರತಿ ವರ್ಷ ಪುನರ್‌ಮನನ ತರಬೇತಿಯನ್ನು ಕಡ್ಡಾಯವಾಗಿ ಆಯೋಜಿಸಬೇಕು ಹಾಗೂ ಸದರಿ ತರಬೇತಿ ಅವಧಿಯಲ್ಲಿ ಅವರ ವೃತ್ತಿ ಪರತೆಯನ್ನು ಹೆಚ್ಚಿಸಲು ನವೀನ ಮಾದರಿಯ ಭದ್ರತಾ ಉಪಕರಣಗಳ ಬಗ್ಗೆ ಹಾಗೂ ಆಡಳಿತಾತ್ಮಕ ವಿಷಯಗಳ ಬಗ್ಗೆ ಹೆಚ್ಚಿನ ತರಬೇತಿ ನೀಡಬೇಕು.

**B.** ಮೂಲಭೂತ ಸೌಕರ್ಯಗಳ ಸುಧಾರಣೆಗಳು (Infrastructural Reforms)

4. **ಕಡ್ಡಾಯ ಬಫರ್‌ಝೋನ್ (Compulsory Buffer Zone)**: ಚಂಚಲಗುಡ ಕಾರಾಗೃಹ ಮತ್ತು ತಿಹಾರ್ ಕಾರಾಗೃಹದಲ್ಲಿ ಕಂಡು ಬರುವಂತೆ ಕಾರಾಗೃಹಗಳ ಸುತ್ತಲಿನ ಬಫರ್‌ಝೋನ್ (ನೋ ಮ್ಯಾನ್ ಲ್ಯಾಂಡ್) ಬಳ್ಳಾರಿ, ಮೈಸೂರು ಹಾಗೂ ಇತರೆ ಹಲವಾರು ಕಾರಾಗೃಹಗಳಲ್ಲಿ ಇಲ್ಲದಿರುವುದನ್ನು ಗಮನಿಸಲಾಗಿದೆ. ಆದ್ದರಿಂದ ಕರ್ನಾಟಕದ ಎಲ್ಲಾ ಕಾರಾಗೃಹಗಳಿಗೆ ಬಫರ್‌ಝೋನ್ ಸ್ಥಳವನ್ನು ಕಡ್ಡಾಯಗೊಳಿಸಬೇಕು.

5. **ಸಣ್ಣಕಣ್ಣಿನ ಬಲೆ ಅಳವಡಿಕೆ ಹಾಗೂ ಕಾರಾಗೃಹದ ಪರಿಧಿಯ ಭದ್ರತೆ (Anti-Throwing Nets and Perimeter Security)**: ಕಾರಾಗೃಹದ ಹೊರಗಡೆಯಿಂದ ನಿಷೇಧಿತ ವಸ್ತುಗಳನ್ನು ಕಾರಾಗೃಹದ ಒಳಭಾಗಕ್ಕೆ ಎಸೆಯುವುದನ್ನು ತಡೆಯಲು ಕಾಂಪೌಂಡ್ ಗೋಡೆಗೆ ಹೊಂದಿಕೊಂಡಂತೆ ಕಾರಾಗೃಹದ ಆವರಣದಲ್ಲಿ ಸಣ್ಣಕಣ್ಣಿನ ಬಲೆಯನ್ನು ಅಳವಡಿಸಬೇಕು ಹಾಗೂ ಕಾಂಪೌಂಡ್ ಸುತ್ತಲೂ ಸಿಸಿಟಿವಿ ಕವರೇಜ್‌ಅನ್ನು ವಿಸ್ತರಿಸಬೇಕು. ಶಿವಮೊಗ್ಗ ಕಾರಾಗೃಹವು 32 ಅಡಿಗಳಷ್ಟು ಎತ್ತರವ ಸುತ್ತುಗೋಡೆ (ಕಾಂಪೌಂಡ್) ಯನ್ನು ಹೊಂದಿದ್ದು, ಇತರೆ ಕೇಂದ್ರ ಕಾರಾಗೃಹಗಳು 20 ಅಡಿಗಳಿಗಿಂತ ಕಡಿಮೆ ಎತ್ತರದ ಸುತ್ತುವರಿದ ಗೋಡೆ (ಕಾಂಪೌಂಡ್) ಗಳನ್ನು ಹೊಂದಿವೆ ಇದರಿಂದ ಕಾರಾಗೃಹದ ಆವರಣದೊಳಗೆ ಹೊರಗಿನಿಂದ ನಿಷೇಧಿತ ವಸ್ತುಗಳನ್ನು ಎಸೆಯುವ ಅವಕಾಶವಿರುತ್ತದೆ. ಆದ್ದರಿಂದ ಎಲ್ಲಾ ಕಾರಾಗೃಹಗಳ ಸುತ್ತುಗೋಡೆಗಳ (ಕಾಂಪೌಂಡ್) ಎತ್ತರವನ್ನು ಕನಿಷ್ಠ 30 ಅಡಿಗಳಿಗೆ ಹೆಚ್ಚಿಸಬೇಕು. ಮತ್ತು ಎಲ್ಲಾ ಕಾರಾಗೃಹಗಳ ಕಾಂಪೌಂಡ್ ಗೋಡೆಗಳ ಮೇಲ್ಭಾಗದಲ್ಲಿ ಬಳ್ಳಾರಿ ಹಾಗೂ ಶಿವಮೊಗ್ಗ ಕಾರಾಗೃಹದ ಮಾದರಿಯ ರೀತಿಯಲ್ಲಿ ಸೋಲಾರ್ ಬೇಲಿ ಅಳವಡಿಸವ ಅವಶ್ಯಕತೆ ಇರುತ್ತದೆ.

6. **ವೀಕ್ಷಣಾ ಗೋಪುರ (Watch Tower)**: ಹಲವಾರು ಕಾರಾಗೃಹಗಳಲ್ಲಿ ಪ್ರಸ್ತುತ ಇರುವ ವೀಕ್ಷಣಾ ಗೋಪುರಗಳು ಅಗತ್ಯಕ್ಕಿಂತ ಕಡಿಮೆ ಎತ್ತರ ಇರುವುದರಿಂದ ವೀಕ್ಷಣಾ ಗೋಪುರಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯವರು ಪರಿಣಾಮಕಾರಿಯಾಗಿ ಕಾರಾಗೃಹದ ಎಲ್ಲಾ ಸ್ಥಳಗಳನ್ನು ಕಣ್ಗಾವಲಿನಲ್ಲಿ ಇಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ವೀಕ್ಷಣಾ ಗೋಪುರಗಳ ಎತ್ತರವನ್ನು ಕಾರಾಗೃಹದ ಎಲ್ಲಾ ಸ್ಥಳಗಳು ಸುಲಭವಾಗಿ ಕಣ್ಗಾವಲಿನಲ್ಲಿಡಲು ಸಾಧ್ಯವಾಗುವ ರೀತಿಯಲ್ಲಿ ಅಗತ್ಯಕ್ಕೆ ತಕ್ಕಂತೆ ಎತ್ತರಿಸುವ ಅವಶ್ಯಕತೆ ಇರುತ್ತದೆ.

7. **ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಪೂರ್ಣಗೊಳಿಸುವಿಕೆ**: ಶಿವಮೊಗ್ಗ, ಮಂಗಳೂರು, ವಿಜಯಪುರ ಮತ್ತು ಬೀದರ್‌ನಲ್ಲಿ ಹೊಸ ಬ್ಯಾರಕ್‌ಗಳ ನಿರ್ಮಾಣಕಾರ್ಯ ಬಾಕಿ ಉಳಿದಿರುವುದನ್ನು ಸಮಿತಿಯು ಗಮನಿಸಿದೆ. ಪ್ರಸ್ತುತ ಬ್ಯಾರೆಕ್ಸ್‌ಗಳಲ್ಲಿ ಹೆಚ್ಚುವರಿ ಬಂಧಿಗಳಿಂದಾಗಿ ಉಂಟಾಗಿರುವ ಸ್ಥಳದ ಅಭಾವವನ್ನು ಪರಿಹರಿಸಲು ಈ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವ ಅವಶ್ಯಕತೆ ಇರುತ್ತದೆ.

8. **ಹೊಸ ಕಾರಾಗೃಹಗಳು**: ಕಾರಾಗೃಹ ಇಲಾಖೆಯ ಅಗತ್ಯಗಳನ್ನು ಪೂರೈಸಲು ಉದ್ದೇಶಿತ ಹೊಸ ಕಾರಾಗೃಹಗಳ ನಿರ್ಮಾಣ ಮತ್ತು ಕಾರ್ಯಾರಂಭವನ್ನು ತ್ವರಿತಗೊಳಿಸಿ ಆದಷ್ಟು ಬೇಗ ಪೂರ್ಣಗೊಳಿಸಲು ಶಿಫಾರಸು ಮಾಡಲಾಗಿದೆ.

C. ತಾಂತ್ರಿಕ ಉಪಕರಣಗಳ ಉನ್ನತೀಕರಣ (Technical Equipment Enhancement)

9. **ಸಮಗ್ರ ಸಿಸಿಟಿವಿ ಹಾಗೂ AI ಕ್ಯಾಮರಾ ಕಣ್ಗಾವಲು**: ಕರ್ನಾಟಕ ರಾಜ್ಯದ ಕಾರಾಗೃಹಗಳನ್ನು ತಿಹಾರ್ ಕಾರಾಗೃಹ, ದೆಹಲಿಗೆ ಹೋಲಿಸಿದರೆ ಕಣ್ಗಾವಲು (ಸಿಸಿ ಕ್ಯಾಮರಾ) ಮೂಲ ಸೌಕರ್ಯದಲ್ಲಿ ಸಾಕಷ್ಟು ಅಂತರವಿರುವುದನ್ನು ಸಮಿತಿಯು ಗಮನಿಸಿದೆ. ತಿಹಾರ್ ಕಾರಾಗೃಹವು 8,600 ಸಿಸಿಟಿವಿ ಕ್ಯಾಮೆರಾಗಳನ್ನು ಹೊಂದಿದ್ದು, ಕಾರಾಗೃಹದ ಸುಮಾರು 53.75% ಕೈದಿಗಳನ್ನು ಕಣ್ಗಾವಲಿನಲ್ಲಿ ಇರಿಸಬಹುದಾಗಿರುತ್ತದೆ. ಆದರೆ ಪರಪ್ಪನ ಅಗ್ರಹಾರ ಕಾರಾಗೃಹವು ಕೇವಲ 332 ಸಿಸಿ ಕ್ಯಾಮರಾಗಳನ್ನು ಹೊಂದಿದ್ದು, ಇದು ಕೇವಲ 6.64% ಕೈದಿಗಳನ್ನು ಕಣ್ಗಾವಲಿನಲ್ಲಿ

ಇರಿಸಬಹುದಾಗಿರುತ್ತದೆ. ಆದ್ದರಿಂದ ತಿಹಾರ್ ಕಾರಾಗೃಹದ ಮಾದರಿಯಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಕಾರಾಗೃಹಗಳ ಬ್ಯಾರೆಕ್ಸ್‌ಗಳು ಹಾಗೂ ಬಂಧಿಗಳಿರುವ ಪ್ರತ್ಯೇಕ ಸೆಲ್‌ಗಳನ್ನು ಒಳಗೊಂಡಂತೆ 24/7 ಕಾಲ ಕಾರಾಗೃಹದ ಎಲ್ಲಾ ಭಾಗಗಳನ್ನು ಕಣ್ಗಾವಲಿನಲ್ಲಿರಿಸಲು ಹೆಚ್ಚಿನ ಸಂಖ್ಯೆಯ ಸಿಸಿ ಕ್ಯಾಮರಾ ಹಾಗೂ AI ಆಧಾರಿತ ಕ್ಯಾಮರಾಗಳನ್ನು ಅಳವಡಿಸುವುದು ಮತ್ತು ಕಂಟ್ರೋಲ್ ರೂಂನ್ನು ಸ್ಥಾಪಿಸುವುದು ಹಾಗೂ ಸದರಿ ಕಂಟ್ರೋಲ್ ರೂಂನಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಹೆಚ್ಚಿನ ತಾಂತ್ರಿಕ ತರಬೇತಿಗೆ ನಿಯೋಜಿಸುವ ಅವಶ್ಯಕತೆ ಕೂಡ ಇರುತ್ತದೆ.

೧೦. **ಬ್ಯಾರಕ್‌ಗಳ ಒಳಗೆ ಸಿಸಿಟಿವಿ:** ಸಮಿತಿಯ ಸದಸ್ಯರು ಕಾರಾಗೃಹಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕರ್ನಾಟಕ ಕಾರಗೃಹಗಳಲ್ಲಿ ಬಂಧಿಗಳನ್ನು ಇರಿಸಿರುವ ಬ್ಯಾರಕ್ಸ್‌ಗಳನ್ನು ಹಾಗೂ ಪ್ರತ್ಯೇಕ ಸೆಲ್‌ಗಳನ್ನು ಪರಿಶೀಲಿಸಲಾಗಿದ್ದು, ಸದರಿ ಬ್ಯಾರೆಕ್ಸ್ ಹಾಗೂ ಪ್ರತ್ಯೇಕ ಸೆಲ್‌ಗಳ ಒಳಭಾಗದಲ್ಲಿ ಯಾವುದೇ ಸಿಸಿ ಕ್ಯಾಮೆರಾಗಳನ್ನು ಅಳವಡಿಸದೇ ಇರುವುದು ಕಂಡು ಬಂದಿರುತ್ತದೆ ಇದರಿಂದ ಬಂಧಿಗಳ ಚಲನವಲನದ ಬಗ್ಗೆ ಕಣ್ಗಾವಲು ಇರಿಸುವುದು ಕಷ್ಟ ಸಾಧ್ಯವಾಗಿರುತ್ತದೆ. ಅಲ್ಲದೇ ಸದರಿ ಸ್ಥಳಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆದಾಗ ಸಾಕ್ಷಿಗಾಗಿ ಯಾವುದೇ ದಾಖಲೆಗಳು ಲಭ್ಯವಾಗದೇ ಇರುವುದು ಕಂಡುಬಂದಿರುತ್ತದೆ. ಆದರೆ ದೆಹಲಿಯ ತಿಹಾರ್ ಜೈಲು ಮತ್ತು ತೆಲಂಗಾಣದ ಚಂಚಲಗುಡ ಜೈಲುಗಳ ಬ್ಯಾರಕ್ಸ್ ಹಾಗೂ ಪ್ರತ್ಯೇಕ ಸೆಲ್‌ಗಳ ಒಳಗೆ ಸಿಸಿ ಕ್ಯಾಮರಾಗಳನ್ನು ಹಲವಾರು ವರ್ಷಗಳಿಂದ ಅಳವಡಿಸಿರುವುದು ಜಾರಿಯಲ್ಲಿದೆ. (ತಿಹಾರ್ ಕಾರಾಗೃಹದಲ್ಲಿನ ಬ್ಯಾರೆಕ್ಸ್ ಒಳಭಾಗದಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದ ಭಾವಚಿತ್ರವನ್ನು ಗಮನಿಸುವುದು) ಆದ್ದರಿಂದ ಕರ್ನಾಟಕ ರಾಜ್ಯದ ಎಲ್ಲಾ ಕಾರಾಗೃಹಗಳ ಬ್ಯಾರೆಕ್ಸ್ ಮತ್ತು ಪ್ರತ್ಯೇಕ ಸೆಲ್‌ಗಳಲ್ಲಿ ಶೌಚಾಲಯಗಳನ್ನು ಹೊರತುಪಡಿಸಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸುವ ಅವಶ್ಯಕತೆ ಇರುತ್ತದೆ. ಹಾಗೂ ಶೌಚಾಲಯಗಳಲ್ಲಿ ಧ್ವನಿ-ರೆಕಾರ್ಡಿಂಗ್ ಸಾಧನಗಳನ್ನು ಮಾತ್ರ ಅಳವಡಿಸುವ ಅವಶ್ಯಕತೆ ಇರುತ್ತದೆ. ಇದರಿಂದ ಕಾರಾಗೃಹದ ಬ್ಯಾರೆಕ್ಸ್ ಹಾಗೂ ಪ್ರತ್ಯೇಕ ಸೆಲ್‌ಗಳ ಒಳಗೆ ನಡೆಯುವ ಕಾನೂನು ಬಾಹಿರ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಸ್ಥಗಿತಗೊಳಿಸಬಹುದಾಗಿರುತ್ತದೆ. ಸಿಸಿ ಕ್ಯಾಮರಾಗಳು ದುರಸ್ಥಿಗೆ ಒಳಪಟ್ಟಲ್ಲಿ ಅಥವಾ ಅಸಮರ್ಪಕವಾಗಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಸದರಿ ಸಿಸಿ ಕ್ಯಾಮರಾಗಳನ್ನು ಆದ್ಯತೆ ಮೇರೆಗೆ ದುರಸ್ಥಿ ಸರಿಪಡಿಸಲು ಕ್ರಮ ಕೈಗೊಳ್ಳತಕ್ಕದ್ದು ಹಾಗೂ ಸಿಸಿ ಕ್ಯಾಮರಾಗಳ ದುರಸ್ಥಿ ಸಮಯ 24 ಗಂಟೆಗಳ ಮೀರದಂತೆ ನೋಡಿಕೊಳ್ಳುವುದು.

**ತಿಹಾರ್ ಕಾರಾಗೃಹ, ದೆಹಲಿ ಹಾಗೂ ಪರಪ್ಪನ ಅಗ್ರಹಾರ ಕಾರಾಗೃಹ, ಬೆಂಗಳೂರು**
**ಸಿಸಿ ಕ್ಯಾಮರಾಗಳ ತುಲನಾತ್ಮಕ ವಿವರ.**

| ಕ್ರ.ಸಂ | ಕಾರಾಗೃಹದ ಹೆಸರು | ಕೈದಿಗಳ ಸಾಮರ್ಥ್ಯ | ಸಿಸಿ ಕ್ಯಾಮರಾಗಳ ಸಂಖ್ಯೆ | ಶೇಕಡವಾರು |
|---|---|---|---|---|
| 1. | ತಿಹಾರ್‌ಕಾರಾಗೃಹ, ದೆಹಲಿ | 16,000 | 8,600 | 53.75% |
| 2. | ಪರಪ್ಪನಕಾರಾಗೃಹ, ಬೆಂಗಳೂರು | 5,000 | 332 | 6.64% |

**ತಿಹಾರ್ ಜೈಲಿನಲ್ಲಿರುವ ಬ್ಯಾರಕ್‌ನೊಳಗಿನ ಸಿಸಿಟಿವಿ**



11. **HCB3 ಟವರ್‌ಗಳು (ಮೊಬೈಲ್ ಜ್ಯಾಮರ್‌ಗಳು)**: ಅಸ್ತಿತ್ವದಲ್ಲಿರುವ ಹಾರ್ಮೋನಿಯಸ್ ಕಾಲ್ ಬ್ಲಾಕಿಂಗ್ ಸಿಸ್ಟಮ್ (HCBS) ಟವರ್‌ಗಳು 5G ಸಿಗ್ನಲ್‌ಗಳನ್ನು ನಿರ್ಬಂಧಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ, ಆದ್ದರಿಂದ 5G ಸಿಗ್ನಲ್‌ಗಳನ್ನು ನಿರ್ಬಂಧಿಸುವ ಸಾಮರ್ಥ್ಯವನ್ನು ಹೊಂದಿರುವ ಹೊಸ ಜಾಮರ್‌ಗಳನ್ನು ಸ್ಥಾಪಿಸಬೇಕು ಅಥವಾ ಅಸ್ತಿತ್ವದಲ್ಲಿರುವ ಜಾಮರ್‌ಗಳನ್ನು 5G ಸಿಗ್ನಲ್‌ಗೆ ಉನ್ನತೀಕರಿಸಬೇಕು ಎಂಬುದನ್ನು ಸಮಿತಿಯು ಗಮನಿಸಿದೆ. ಕಾರಾಗೃಹಗಳ ಒಳಭಾಗದಲ್ಲಿ ಮೊಬೈಲ್ ಫೋನ್ ಬಳಕೆಯನ್ನು ತಡೆಯಲು ಮತ್ತು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದಂತೆ ಹಾನಿಕಾರಕ ಚಟುವಟಿಕೆಗಳನ್ನು ತಡೆಯಲು ಕರ್ನಾಟಕ ರಾಜ್ಯ ಗೌ॥ ಉಚ್ಚ ನ್ಯಾಯಾಲಯಲವು ದಿನಾಂಕ: 28-07-2021 ರಡಬ್ಲ್ಯೂ.ಪಿ ಸಂಖ್ಯೆ: 582/2021 ರಲ್ಲಿ ಕಾರಾಗೃಹಗಳಲ್ಲಿ ಜಾಮರ್‌ಗಳನ್ನು ಅಳವಡಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿರುವುದನ್ನು ಗಮನಿಸಲಾಗಿದೆ.

12. **ಪೋರ್ಟಬಲ್ ಜಾಮರ್‌ಗಳು**: ಕೈದಿಗಳ ಅಕ್ರಮ ಮೊಬೈಲ್ ಫೋನ್ ಬಳಕೆಯನ್ನು ತಡೆಗಟ್ಟಲು ಕಾರಾಗೃಹದ ಆವರಣದಲ್ಲಿ ಗುರುತಿಸಲಾದ ಕಪ್ಪು ಸ್ಥಳ (Block Spots) ಗಳಲ್ಲಿ ಕಡಿಮೆ ತೀವ್ರತೆಯ ಪೋರ್ಟಬಲ್ ಜಾಮರ್‌ಗಳನ್ನು ಅಳವಡಿಸುವುದು ಅವಶ್ಯವಕಾಗಿರುತ್ತದೆ. ಹೆಚ್.ಸಿ.ಬಿ.ಎಸ್ ಮತ್ತು ಪೋರ್ಟಬಲ್ ಜಾಮಾರ್‌ಗಳನ್ನು ಅಳವಡಿಸುವುದರಿಂದ ಕಾರಾಗೃಹದ ಆವರಣದ ಎಲ್ಲಾ ಭಾಗಗಳಲ್ಲಿ ಸಂಪೂರ್ಣವಾಗಿ ಮೋಬೈಲ್ ಫೋನ್ ಬಳಕೆಯನ್ನು ತಡೆಗಟ್ಟಬಹುದಾಗಿರುತ್ತದೆ.

13. **ಪವರ್ ಬ್ಯಾಕಪ್ ಮತ್ತು ಜಾಮರ್‌ಗಳ ನಿಯಂತ್ರಣ**: ಎಲ್ಲಾ ಜಾಮರ್‌ಗಳು ಸಾಕಷ್ಟು ಪವರ್ ಬ್ಯಾಕಪ್‌ನೊಂದಿಗೆ ಪ್ರತ್ಯೇಕ ವಿದ್ಯುತ್ ಮೂಲವನ್ನು ಹೊಂದಿರಬೇಕು ಮತ್ತು ವಿಧ್ಯುತ್ ವ್ಯತ್ಯೇಯ ಉಂಟಾದ ಸಂದರ್ಭದಲ್ಲಿ ತಕ್ಷಣವೇ ಇತರೆ ಇಂಧನ ಮೂಲದಿಂದ ಸದರಿ ಜಾಮರ್‌ಗಳು ಸ್ವಯಂ

ಪ್ರೇರಿತವಾಗಿ ಕಾರ್ಯ ನಿರ್ವಹಿಸುವಂತಹ ವ್ಯವಸ್ಥೆಯನ್ನು ಅಳವಡಿಸಬೇಕು. ಹಾಗೂ ಜಾಮರ್‌ಗಳ ಸ್ವಿಚ್‌ಗಳ ನಿಯಂತ್ರಣವು ಮುಖ್ಯ ಅಧೀಕ್ಷಕರ ಅಧೀನದಲ್ಲಿ ಕಟ್ಟುನಿಟ್ಟಾಗಿ ಉಳಿಯಬೇಕು. ಬೇರೆ ಯಾವುದೇ ವ್ಯಕ್ತಿಗೆ ಅವುಗಳನ್ನು ಸ್ವಿಚ್ ಆಫ್ ಮಾಡಲು ಅವಕಾಶವಿಲ್ಲದಿರುವುದನ್ನು ಖಚಿತ ಪಡಿಸಿಕೊಳ್ಳಬೇಕು.

14. **ವೈ-ಫೈ ಮಾನಿಟರಿಂಗ್**: ಜೈಲು ಆವರಣದ ಒಳಗೆ ಮತ್ತು ಹೊರ ಭಾಗದಲ್ಲಿ ಅನಧಿಕೃತ ವೈ-ಫೈ ಸಿಗ್ನಲ್‌ಗಳನ್ನು ಪತ್ತೆಹಚ್ಚಲು ನಿಯಮಿತವಾಗಿ ಅನಿರೀಕ್ಷಿತ ತಪಾಸಣೆಗಳನ್ನು ನಡೆಸಬೇಕು ಮತ್ತು ಕೈದಿಗಳು ಅಕ್ರಮ ಇಂಟರ್ನೆಟ್ ಸಂಪರ್ಕವನ್ನು ಹೊಂದುವುದನ್ನು ಸಂಪೂರ್ಣವಾಗಿ ತಡೆಗಟ್ಟಬೇಕು.

15. **NLJD ಮೂಲಕ ತಪಾಸಣೆ**: KSISF ಸಿಬ್ಬಂದಿ ಮತ್ತು ಜೈಲು ಅಧಿಕಾರಿಗಳು ಕಾರಾಗೃಹದಲ್ಲಿ ಮರೆಮಾಚುವ ಎಲೆಕ್ಟ್ರಾನಿಕ್ ಸಾಧನಗಳನ್ನು ಪತ್ತೆ ಹಚ್ಚಲು ಬ್ಯಾರಕ್‌ಗಳು, ಶೌಚಾಲಯಗಳು, ತೆರೆದ ಪ್ರದೇಶಗಳು ಮತ್ತು ಇತರ ಸ್ಥಳಗಳಲ್ಲಿ NLJD (ನಾನ್ ಲೀನಿಯರ್ ಜಂಕ್ಷನ್ ಡಿಟೆಕ್ಟರ್ಸ್) ಉಪಕರಣಗಳನ್ನು ಬಳಸಿಕೊಂಡು ನಿಖರವಾದ ಮತ್ತು ಸಮಗ್ರ ಹುಡುಕಾಟಗಳನ್ನು ನಡೆಸಬೇಕು.

16. **ದೇಹ-ಧರಿಸಿರುವ ಕ್ಯಾಮೆರಾಗಳು**: ಕಾರಾಗೃಹದ ಒಳಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ದೇಹದ ಮೇಲೆ ಧರಿಸಿರುವ ಕ್ಯಾಮೆರಾಗಳನ್ನು (Body-worn Cameras) ಕಡ್ಡಾಯವಾಗಿ ಧರಿಸಬೇಕು ಇದರಿಂದ ಕರ್ತವ್ಯ ನಿರ್ವಹಣೆಯಲ್ಲಿ ಶಿಸ್ತು, ಮತ್ತು ಪಾರದರ್ಶಕತೆ ಕಂಡುಬರುತ್ತದೆ ಹಾಗೂ ಕಾರಾಗೃಹಗಳ ಒಳಗೆ ಏನಾದರೂ ಕಾನೂನು ಬಾಹಿರ ಚಟುವಟಿಕೆಗಳು ನಡೆದ ಸಂದರ್ಭದಲ್ಲಿ ಸಾಕ್ಷಿ ದೊರೆಕುವ ಸಾಧ್ಯತೆ ಹೆಚ್ಚಾಗಿರುತ್ತದೆ.

17. **ಧೂಮಪಾನ ಮತ್ತು ಸೆಲ್ ಫೋನ್ ಬಳಕೆಯನ್ನು ಪತ್ತೆಹಚ್ಚಲು ಕೃತಕ ಬುದ್ಧಿ ಮತ್ತೆ ಕ್ಯಾಮೆರಾಗಳು**: ಜೈಲುಗಳಲ್ಲಿ ಕೈದಿಗಳು ಧೂಮಪಾನ ಅಥವಾ ಸೆಲ್ ಫೋನ್‌ನಂತಹ ನಿಷೇಧಿತ ವಸ್ತುಗಳನ್ನು ಬಳಸಿದ ಸಂದರ್ಭದಲ್ಲಿ ಕೃತಕ ಬುದ್ಧಿಮತ್ತೆಯ (AI Camera) ಕ್ಯಾಮರಾಗಳು ಸದರಿ ನಿಷಿದ್ಧ ನಡವಳಿಕೆಗಳನ್ನು ಗುರುತಿಸಿ, ನೈಜ ಸಮಯದ ವೀಡಿಯೊ ತುಣುಕನ್ನು ಸ್ವಯಂ ಚಾಲಿತವಾಗಿ ವಿಶ್ಲೇಷಿಸಿ ಕರ್ತವ್ಯ ನಿರತ ಸಿಬ್ಬಂದಿಗೆ ರವಾನಿಸಿ ಎಚ್ಚರಿಕೆಗಳನ್ನು ನೀಡಬಹುದಾಗಿರುತ್ತದೆ. ಇದರಿಂದ ಕರ್ತವ್ಯ ನಿರತ ಸಿಬ್ಬಂದಿಯವರು ತ್ವರಿತವಾಗಿ ಸೂಕ್ತ ಕ್ರಮ ಕೈಗೊಳ್ಳಲು ಸಹಾಯ ಮಾಡುತ್ತದೆ. ಆದ್ದರಿಂದ ಪ್ರತಿಯೊಂದು ಕಾರಾಗೃಹಗಳಲ್ಲಿ ಕೃತಕ ಬುದ್ಧಿಮತ್ತೆಯ (AI Camera) ಕ್ಯಾಮರಾಗಳನ್ನು ಕಡ್ಡಾಯವಾಗಿ ಅಳವಡಿಸುವುದರಿಂದ ಕಾರಾಗೃಹಗಳಲ್ಲಿ ಕಣ್ಗಾವಲು ದಕ್ಷತೆಯನ್ನು ಹೆಚ್ಚಿಸ ಬಹುದಾಗಿರುತ್ತದೆ ಮತ್ತು ನಿಷೇಧಿತ ಚಟುವಟಿಕೆಗಳನ್ನು ತಡೆಯ ಬಹುದಾಗಿರುತ್ತದೆ.

18. **ಸೆಂಟ್ರಲ್ ಕ್ರೈಸಸ್‌ಕಮಾಂಡ್ ಸೆಂಟರ್**: ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳು, ಬಾಡಿವೋರ್ನ್ ಕ್ಯಾಮರಾಗಳನ್ನು ಕೇಂದ್ರೀಕೃತ ಕಣ್ಗಾವಲಿನಲ್ಲಿಸುವ ಸಂಬಂಧ ಕಾರಾಗೃಹ ಪ್ರಧಾನ ಕಛೇರಿಯಲ್ಲಿ ಕೇಂದ್ರೀಕೃತ ಕಮಾಂಡ್ ಸೆಂಟರ್‌ನ್ನು ಸ್ಥಾಪಿಸಿದ್ದಲ್ಲಿ ಕಾರಾಗೃಹಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆದ ಸಂದರ್ಭದಲ್ಲಿ ಅಧಿಕಾರಿ, ಸಿಬ್ಬಂದಿಯವರು ತುರ್ತಾಗಿ ಕಾರ್ಯಾಚರಣೆ ಹಾಗೂ ಘಟನೆಯ ಪರಿಶೀಲನೆ ನಡೆಸಲು ಅನುಕೂಲಕವಾಗಿರುತ್ತದೆ ಮತ್ತು ಘಟನೆಗೆ ಸಂಬಂಧಿಸಿದ ಸಾಕ್ಷ್ಯವನ್ನು ಸಂರಕ್ಷಿಸಲು ಅನುಕೂಲವಾಗುತ್ತದೆ. ಹಾಗೂ ನೈಜ ಸಮಯದಲ್ಲಿ ಮೇಲ್ವಿಚಾರಣೆಯನ್ನು ನಡೆಸಲು, ಹಾಗೂ

ಸಂಬಂಧಪಟ್ಟ ಕಾರಾಗೃಹಗಳ ಅಧಿಕಾರಿ/ಸಿಬ್ಬಂದಿಯವರೊಂದಿಗೆ ಸಮನ್ವಯ ಸಾಧಿಸಲು ಮತ್ತು ತುರ್ತು ಪರಿಸ್ಥಿತಿಗಳಲ್ಲಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವ ಸಂಬಂಧ ಕಾರಾಗೃಹದ ಪ್ರಧಾನ ಕಛೇರಿಯಲ್ಲಿ ಕೇಂದ್ರೀಕೃತ ಕಮಾಂಡ್ ಸೆಂಟರ್‌ನ್ನು ಸ್ಥಾಪಿಸಲು ಶಿಫಾರಸ್ಸು ಮಾಡಲಾಗಿದೆ.

19. **ಆಲ್ಕೋ-ಬ್ರೀತ್ ಮತ್ತು ಡ್ರಗ್ ಡಿಟೆಕ್ಷನ್ ಪರಿಕರಗಳು:** ಕಾರಾಗೃಹಗಳಲ್ಲಿ ಮದ್ಯಪಾನ ಹಾಗೂ ಮಾದಕ ವಸ್ತುಗಳ ಸೇವನೆಯನ್ನು ತಡೆಯಲು ಕರ್ತವ್ಯ ನಿರತ ಅಧಿಕಾರಿ ಹಾಗೂ ಸಿಬ್ಬಂದಿಯವರು ಆಲ್ಕೋ-ಬ್ರೀತ್ ಪರಿಕರಗಳನ್ನು ಉಪಯೋಗಿಸಿ ಪ್ರತಿದಿನ ಮತ್ತು ಅನಿರೀಕ್ಷಿತವಾಗಿ ಕೈದಿಗಳ ಉಸಿರಾಟದ ಮಾದರಿಯನ್ನು ಪರಿಶೀಲಿಸಿ ರಕ್ತದಲ್ಲಿರುವ ಆಲ್ಕೋಹಾಲ್ ಮಟ್ಟದ ಫಲಿತಾಂಶವನ್ನು ಸ್ಥಳದಲ್ಲೇ ತ್ವರಿತವಾಗಿ ಪಡೆಯ ಬಹುದಾಗಿರುತ್ತದೆ. ಹಾಗೂ ಮೂತ್ರದ ಮಾದರಿಯನ್ನು ಡ್ರಗ್ ಡಿಟೆಕ್ಷನ್ ಪರಿಕರಗಳಿಂದ ಪರೀಶೀಲಿಸಿ ಫಲಿತಾಂಶವನ್ನು ತ್ವರಿತವಾಗಿ ಸ್ಥಳದಲ್ಲಿಯೇ ಪಡೆಯ ಬಹುದಾಗಿರುತ್ತದೆ. ಆದ್ದರಿಂದ ಎಲ್ಲಾ ಕಾರಾಗೃಹಗಳಲ್ಲಿ ಆಲ್ಕೋ-ಬ್ರೀತ್ ಮತ್ತು ಡ್ರಗ್ ಡಿಟೆಕ್ಷನ್ ಪರಿಕರಗಳನ್ನು ಬಳಸುವುದನ್ನು ಕಡ್ಡಾಯಗೊಳಸಬೇಕು.

20. **ಕೈದಿಗಳ ಕರೆ ವ್ಯವಸ್ಥೆ (Prisoner Calling System - PCS):** ಕಾರಾಗೃಗಳಲ್ಲಿ ಪ್ರಸ್ತುತ ಸೀಮಿತ ಸಂಖ್ಯೆಯ ಪಿಸಿಎಸ್ ಘಟಕಗಳ ಇರುವುದರಿಂದ ಕೈದಿಗಳು ಮೊಬೈಲ್ ಫೋನ್‌ಗಳನ್ನು ಕಳ್ಳಸಾಗಣೆ ಮಾಡಲು ಪ್ರೇರೇಪಿಸಿದಂತಾಗಿದೆ ಎಂಬ ಅಂಶವನ್ನು ಸಮಿತಿಯು ಗಮನಿಸಿದೆ. ಆದ್ದರಿಂದ ಎಲ್ಲಾ ಕಾರಾಗೃಹಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಹೆಚ್ಚಿನ ಸಂಖ್ಯೆಯಲ್ಲಿ ಪಿಸಿಎಸ್ ಘಟಕಗಳನ್ನು ಸ್ಥಾಪಿಸುವುದರಿಂದ ಕೈದಿಗಳಲ್ಲಿ ಅಕ್ರಮ ಮೊಬೈಲ್ ಬಳಕೆಯನ್ನು ತಡೆಯ ಬಹುದಾಗಿರುತ್ತದೆ ಇದರಿಂದ ಕೈದಿಗಳು ತಮ್ಮ ಕುಟುಂಬಗಳು ಮತ್ತು ವಕೀಲರೊಂದಿಗೆ ಸಂವಹನ ನಡೆಸಲು ಅವಕಾಶ ಕಲ್ಪಿಸಬಹುದಾಗಿರುತ್ತದೆ. ಈ ವ್ಯವಸ್ಥೆಯಿಂದ ಕೈದಿಗಳಲ್ಲಿ ಧನಾತ್ಮಕ ವರ್ತನೆಯ ಬದಲಾವಣೆಗಳನ್ನು ಕಾಣಬಹುದಾಗಿರುತ್ತದೆ.

21. **ವಿದ್ಯುತ್ ಮತ್ತು ಚಾರ್ಜಿಂಗ್ ನಿಯಂತ್ರಣಗಳು:** ಕಾರಾಗೃಹಗಳಲ್ಲಿ ಮೊಬೈಲ್ ಫೋನ್ ಚಾರ್ಜಿಂಗ್ ತಡೆಗಟ್ಟಲು ವಿದ್ಯುತ್ ಮತ್ತು ದೂರದರ್ಶನದ ಸ್ವಿಚ್‌ಗಳನ್ನು ಬ್ಯಾರೆಕ್ಸ್‌ಗಳ ಹೊರಭಾಗದಲ್ಲಿ ಅಳವಡಿಸಬೇಕು, ಪ್ರಸ್ತುತ ಬ್ಯಾರೆಕ್ಸ್ ಒಳಭಾಗದಲ್ಲಿ ಅಸ್ತಿತ್ವದಲ್ಲಿರುವ ಸ್ವಿಚ್‌ಗಳಿಗೆ ಬಾಕ್ಸ್‌ಗಳನ್ನು ಅಳವಡಿಸಿ ಬೀಗಗಳಿಂದ ಭದ್ರಪಡಿಸಬೇಕು ಮತ್ತು ಬ್ಯಾರೆಕ್ಸ್‌ಗಳ ಒಳಭಾಗದಲ್ಲಿ ಯಾವುದೇ ರೀತಿಯ ತೆರೆದ ವೈರಿಂಗ್‌ಗೆ ಅವಕಾಶ ನೀಡಬಾರದು.

22. **ಎಫ್.ಎಂ. ರೇಡಿಯೋ ಮತ್ತು ಪಿಎ ಸಿಸ್ಟಂಗಳು:** ಕಾರಾಗೃಹದ ಒಳಭಾಗದಲ್ಲಿ ಆಂತರಿಕ ಎಫ್.ಎಂ. ರೇಡಿಯೋ ವ್ಯವಸ್ಥೆಗಳ ಮೂಲಕ ಸುಧಾರಣಾತ್ಮಕ ಮತ್ತು ಮಾಹಿತಿಪೂರ್ಣ ವಿಷಯವನ್ನು ಪ್ರಸಾರ ಮಾಡಬೇಕು ಹಾಗೂ ಎಲ್ಲಾ ಬ್ಯಾರೆಕ್ಸ್‌ಗಳಲ್ಲಿ ಮತ್ತು ಸಾಮಾನ್ಯ ಪ್ರದೇಶಗಳಲ್ಲಿ ಪಿಎ (Public Address) ಸ್ಪೀಕರ್‌ಗಳನ್ನು ಅಳವಡಿಸಬೇಕು.

23. **ಬಯೋಮೆಟ್ರಿಕ್:** ತಿಹಾರ್, ಚಂಚಲಗುಡ ಕಾರಾಗೃಹಗಳಲ್ಲಿರುವಂತೆ ಕೈದಿಗಳಿಗಾಗಿ ಬಯೋಮೆಟ್ರಿಕ್ ಸಕ್ರಿಯಗೊಳಿಸಿದ ಮಾರಾಟಮಳಿಗೆ (Store) ವ್ಯವಸ್ಥೆಯನ್ನು ಜಾರಿಗೆ ತರಬೇಕು. ಇದರಿಂದ ಅನಧಿಕೃತ ಹಣಕಾಸಿನ ವಹಿವಾಟನ್ನು ತಡೆಯ ಬಹುದಾಗಿರುತ್ತದೆ.

24. **ವಾರ್ಷಿಕ ನಿರ್ವಹಣೆ ಒಪ್ಪಂದ (Annual Maintenance Contract - AMC):** ಎಲೆಕ್ಟ್ರಾನಿಕ್ ಉಪಕರಣಗಳ ಸುಸ್ಥಿತಿ ಮತ್ತು ತಡೆರಹಿತ ಕಾರ್ಯ ನಿರ್ವಹಣೆಯನ್ನು ಖಚಿತ ಪಡಿಸಿಕೊಳ್ಳಲು ಕಾರಾಗೃಹಗಳಲ್ಲಿ ಅಳವಡಿಸಲಾದ ಎಲ್ಲಾ ಎಲೆಕ್ಟ್ರಾನಿಕ್ ಉಪಕರಣಗಳನ್ನು ವಾರ್ಷಿಕ ನಿರ್ವಹಣೆ ಒಪ್ಪಂದದ (AMC) ಅಡಿಯಲ್ಲಿ ತರಬೇಕು.

D. ಕಲ್ಯಾಣ ಮತ್ತು ಸುಧಾರಣಾ ಕ್ರಮಗಳು (Welfare and reformative Measures) :

25. **ಕಾರಾಗೃಹ ಅಭಿವೃದ್ಧಿ ಮಂಡಳಿ ಕಾರ್ಯಗಳ ಸಕ್ರಿಯಗೊಳಿಸುವಿಕೆ:** ಕಾರಾಗೃಹ ಅಭಿವೃದ್ಧಿ ಮಂಡಳಿ ಕಾಯಿದೆ-2021 ರ ಅಡಿಯಲ್ಲಿ ಸ್ಥಾಪಿತವಾದ ಕಾರಾಗೃಹ ಅಭಿವೃದ್ಧಿ ಮಂಡಳಿಯು ಪ್ರಸ್ತುತ ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆ. ಆದ್ದರಿಂದ ಕಾರಾಗೃಹಗಳಲ್ಲಿ ಕೈದಿಗಳು ಮತ್ತು ಜೈಲು ಸಿಬ್ಬಂದಿಯ ಕಲ್ಯಾಣ, ಜೈಲು ಕೈಗಾರಿಕೆಗಳ ವಿಸ್ತರಣೆ, ಕೈದಿಗಳ ಜೀವನ ಪರಿಸ್ಥಿತಿಗಳ ಸುಧಾರಣೆ ಮತ್ತು ಸಮಾಜಕ್ಕೆ ಕೈದಿಗಳ ಪುನರ್ವಸತಿ ಮತ್ತು ಮರು-ಒಗ್ಗೂಡಿಸುವಿಕೆಗಾಗಿ ಕಾರಾಗೃಹ ಅಭಿವೃದ್ಧಿ ಮಂಡಳಿಯನ್ನು ಪುನರುಜ್ಜೀವನಗೊಳಿಸಿ, ನಿಯಮಿತ ಸಭೆಗಳು, ಮೇಲ್ವಿಚಾರಣಾ ಕಾರ್ಯವಿಧಾನಗಳು ಮತ್ತು ಕಾರ್ಯ ಸಾಧ್ಯವಾದ ಅನುಷ್ಠಾನ ಯೋಜನೆಗಳೊಂದಿಗೆ ಸಂಪೂರ್ಣವಾಗಿ ಕಾರ್ಯಾಚರಣೆಗೆ ತರಲು ಶಿಫಾರಸು ಮಾಡಲಾಗಿದೆ.

26. **ಚಟುವಟಿಕೆಗಳಲ್ಲಿ ಕೈದಿಗಳ ತೊಡಗುವಿಕೆ: ವಿಚಾರಣಾಧೀನ ಕೈದಿಗಳ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸುವಿಕೆ:** ವಿಚಾರಣಾಧೀನ ಕೈದಿಗಳನ್ನು ಜೈಲು ಕೈಗಾರಿಕೆಗಳು/ಕಾರ್ಖಾನೆಗಳಲ್ಲಿ ಅವರ ಲಿಖಿತ ಒಪ್ಪಿಗೆ ಮತ್ತು ವೈದ್ಯಕೀಯ ಅರ್ಹತೆಗೆ ಒಳಪಟ್ಟು ಸ್ವಯಂ ಪ್ರೇರಿತ ಆಧಾರದ ಮೇಲೆ ಕೆಲಸದಲ್ಲಿ ತೊಡಗಿಸಿಕೊಳ್ಳಲು ಶಿಫಾರಸು ಮಾಡಲಾಗಿದೆ. ಇಂತಹ ತೊಡಗುವಿಕೆಯು ಮುಖ್ಯವಾಗಿ ಅರ್ಥಪೂರ್ಣವಾದ ಔದ್ಯೋಗಿಕ ಚಟುವಟಿಕೆಯನ್ನು ಒದಗಿಸುವುದು ಮತ್ತು ಕಾರಾಗೃಹ ಇಲಾಖೆಗೆ ಆದಾಯ ಉತ್ಪಾದನೆಯನ್ನು ಬೆಂಬಲಿಸುವ ಗುರಿಯನ್ನು ಹೊಂದಿರಬೇಕು. ಅನುಷ್ಠಾನದ ಮೊದಲು, ಕಾರಾಗೃಹ ಅಭಿವೃದ್ಧಿ ಮಂಡಳಿಯು (PDB) ಅಸ್ತಿತ್ವದಲ್ಲಿರುವ ನಿಬಂಧನೆಗಳನ್ನು ಪರಿಶೀಲಿಸಿ, ಕಾರಾಗೃಹ ನಿಯಮಗಳಿಗೆ ಅಗತ್ಯ ತಿದ್ದುಪಡಿಗಳನ್ನು ತಂದು, ವಿಚಾರಣಾಧೀನ ಕೈದಿಗಳನ್ನು ಜೈಲು ಕಾರ್ಖಾನೆಯ ಕೆಲಸದಲ್ಲಿ ತೊಡಗಿಸಿಕೊಳ್ಳಲು ಸೂಕ್ತವಾದ ಕಾನೂನು ಚೌಕಟ್ಟನ್ನು ಒದಗಿಸಬೇಕು ಈ ರೀತಿಯ ಭಾಗವಹಿಸುವಿಕೆಯು ಸ್ವಯಂಪ್ರೇರಿತ, ಬಲವಂತವಿಲ್ಲದ ಮತ್ತು ಶಾಸನಬದ್ಧ ಹಾಗೂ ಮಾನವ ಹಕ್ಕುಗಳ ಮಾನದಂಡಗಳಿಗೆ ಅನುಗುಣವಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.

**ಶಿಕ್ಷಾರ್ಹ ಕೈದಿಗಳನ್ನು ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸುವುದು:** ಕರ್ನಾಟಕದ ಕೇಂದ್ರ ಕಾರಾಗೃಹಗಳಲ್ಲಿ ಕೈದಿಗಳು ಕೌಶಲ್ಯ ಅಭಿವೃದ್ಧಿ ಅಥವಾ ಉತ್ಪಾದಕ ಚಟುವಟಿಕೆಗಳಲ್ಲಿ ಸಾಕಷ್ಟು ತೊಡಗಿಸಿಕೊಂಡಿಲ್ಲ ಎಂಬುದನ್ನು ಸಮಿತಿಯು ಗಮನಿಸಿದೆ. ಆದರೆ ತೆಲಂಗಾಣದ ಚಂಚಲಗುಡ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಂದ ಅನೇಕ ಕಾರ್ಖಾನೆಗಳನ್ನು ನಡೆಸಲಾಗುತ್ತಿದೆ. ಆದ್ದರಿಂದ ಕರ್ನಾಟಕದ ಕಾರಾಗೃಹಗಳಲ್ಲಿನ ಎಲ್ಲಾ ಕೈದಿಗಳು ನಿರಂತರವಾಗಿ ಅರ್ಥಪೂರ್ಣ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಕೈದಿಗಳನ್ನು ಕಾರ್ಯ ನಿರತರನ್ನಾಗಿ ಇಡುವುದರಿಂದ ಕಡಿಮೆ ಅಕ್ರಮ ಚಟುವಟಿಕೆಗಳಿಗೆ ಕಾರಣವಾಗುತ್ತದೆ ಮತ್ತು ಅವರ ವರ್ತನೆಯಲ್ಲಿ ಬದಲಾವಣೆಗೆ ಸಹಾಯ ಮಾಡುತ್ತದೆ.

**ಕೈದಿಗಳ ಉತ್ಪಾದಕತೆ (Inmate Productivity)**: ಕೈದಿಗಳ ಸಂಖ್ಯಾ ಬಲವನ್ನು ಗಮನದಲ್ಲಿಟ್ಟುಕೊಂಡು, ಹೆಚ್ಚಿನ ವಿಚಾರಣಾಧೀನ ಮತ್ತು ಶಿಕ್ಷಾರ್ಹ ಅಪರಾಧಿಗಳನ್ನು ಕಾರಾಗೃಹಗಳಲ್ಲಿನ ಕಾರ್ಖಾನೆಗಳಲ್ಲಿ ತೊಡಗಿಸಿಕೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು, NGO ಗಳ ಸಹಯೋಗದೊಂದಿಗೆ ಪೇಪರ್ ಬ್ಯಾಗ್‌ಗಳು, ಕೋಲ್ಡ್-ಪ್ರೆಸ್ಡ್ ಆಯಿಲ್ ಮತ್ತು ಇತರೆ ಉತ್ಪನ್ನಗಳಂತಹ ಉತ್ಪಾದನಾ ಚಟುವಟಿಕೆಗಳಿಗೆ ಕೈದಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಹೆಚ್ಚು ಶ್ರಮಿಕರ ಅವಶ್ಯಕತೆ ಹಾಗೂ ಶ್ರಮದಾಯಕ ಕೆಲಸ ಮತ್ತು ಕಡಿಮೆ ಬಂಡವಾಳದಂತಹ ಕಾರ್ಖಾನೆಗಳನ್ನು ಪ್ರಾರಂಭಿಸಬೇಕು.

27. **ಬಿಡುಗಡೆಯ ನಂತರದ ಪ್ರಯೋಜನಗಳು (Post-Release Benefits)**: ಬಿಡುಗಡೆಯಾದ ಕೈದಿಗಳಿಗೆ ಸರ್ಕಾರವು ನೀಡುವ ವಿವಿಧ ಪುನರ್ವಸತಿ ಪ್ರಯೋಜನಗಳು ಮತ್ತು ಸೌಲಭ್ಯಗಳನ್ನು ಒದಗಿಸಬೇಕು. ತೆಲಂಗಾಣದ ಚಂಚಲಗುಡದಲ್ಲಿರುವಂತೆಯೇ, ಹೆದ್ದಾರಿಗಳ ಬಳಿಯಲ್ಲಿ ಲಭ್ಯವಿರು ಪೊಲೀಸ್ ಭೂಮಿಗಳಲ್ಲಿ ಪೆಟ್ರೋಲ್ ಬಂಕ್‌ಗಳನ್ನು ಸ್ಥಾಪಿಸಬಹುದು ಮತ್ತು ಬಿಡುಗಡೆಯಾದ ಕೈದಿಗಳಿಗೆ ಸದರಿ ಪೆಟ್ರೋಲ್ ಬಂಕ್‌ಗಳಲ್ಲಿ ಕೆಲಸ ನೀಡಬಹುದು. ತೆಲಂಗಾಣದಲ್ಲಿ ಈ ರೀತಿಯಾಗಿ 31 ಪೆಟ್ರೋಲ್ ಬಂಕ್‌ಗಳು ಕಾರ್ಯನಿರ್ವಹಿಸುತ್ತಿವೆ.

28. **ಆರೋಗ್ಯ ಚಟುವಟಿಕೆಗಳು (Wellness Activities)**: ಕೈದಿಗಳ ಮಾನಸಿಕ ಮತ್ತು ದೈಹಿಕ ಯೋಗಕ್ಷೇಮವನ್ನು ಸುಧಾರಿಸಲು NGO ಗಳ ಸಹಯೋಗದೊಂದಿಗೆ ಪ್ರತಿದಿನ ಯೋಗ ಮತ್ತು ಧ್ಯಾನದಂತಹ ಚಟುವಟಿಕೆಗಳನ್ನು ಆಯೋಜಿಸಬೇಕು.

29. **ಸಲಹಾ ಸೇವೆಗಳು (Counselling Services)**: ಪ್ರಸ್ತುತ, ಕಾರಾಗೃಹಗಳಲ್ಲಿ ಅತಿಕಡಿಮೆ ಸಂಖ್ಯೆಯ ಸಮಾಲೋಚಕರು ಲಭ್ಯವಿದ್ದು, ಕೈದಿಗಳ ಉತ್ತಮ ಮಾನಸಿಕ ಆರೋಗ್ಯಕ್ಕಾಗಿ ಸಮಾಲೋಚಕರ ಸಂಖ್ಯೆಯನ್ನು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಇದರಿಂದ ಕೈದಿಗಳಲ್ಲಿ ಮಾನಸಿಕ ಆರೋಗ್ಯ ಉತ್ತಮಗೊಳಸಬಹುದು, ಹಾಗೂ ಕೈದಿಗಳಲ್ಲಿ ಉಂಟಾಗುವ ಖಿನ್ನತೆ, ಆತಂಕ, ಆಘಾತ ಮತ್ತು ಇತರ ಭಾವನಾತ್ಮಕ ಸವಾಲುಗಳನ್ನು ಪರಿಹರಿಸುವಲ್ಲಿ ಕೂಡ ನಿರ್ಣಾಯಕ ಪಾತ್ರ ವಹಿಸುತ್ತದೆ.

30. **ವೃತ್ತಿಪರ ತರಬೇತಿ (Vocational Training)**: NGO ಗಳ ಸಹಯೋಗದೊಂದಿಗೆ ಕಡಿಮೆ-ಬಂಡವಾಳದ ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಮತ್ತು ಕರಕುಶಲ ವಸ್ತುಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಬೇಕು.

31. **ಕೈಗಾರಿಕಾ ಅಭಿವೃದ್ಧಿ (Industrial Development)**: ಕಾರಾಗೃಹಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಮತ್ತು ವಿಸ್ತರಣೆಗಾಗಿ ಕ್ಷೇಮ ನಿಧಿಯಿಂದ (Benevolent Fund - B.F.) ಹೆಚ್ಚುವರಿ ಅನುದಾನವನ್ನು ಪಡೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

32. **ಕಾರ್ಖಾನೆಗಳ ಸ್ಥಾಪನೆ (Establishment of Factories)**: ಇತರೆ ರಾಜ್ಯಗಳಲ್ಲಿನ ಯಶಸ್ವಿ ಮಾದರಿಗಳಿಗೆ ಅನುಗುಣವಾಗಿ, ಕೈದಿಗಳ ಸುಧಾರಣೆ ಮತ್ತು ಮಾನವ-ದಿನಗಳ ಪರಿಣಾಮಕಾರಿ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಕರ್ನಾಟಕದ ಎಲ್ಲಾ ಕೇಂದ್ರ ಕಾರಾಗೃಹಗಳಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (Public-Private Partnership - PPP) ಮಾದರಿಯಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಬೇಕು.

## ಚಂಚಲಗೂಡ ಕಾರಾಗೃಹದಲ್ಲಿರುವ ಕಾರ್ಖಾನೆಗಳ ವಿವರ.

| [illegible] | [illegible] | [illegible] | [illegible] |
|---|---|---|---|
| 1 | Carpet/Durry unit | 14 | Tailoring |
| 2 | Carpentry | 15 | Nurseries |
| 3 | Steel industry | 16 | Ayurvedic Wellness centres |
| 4 | Phenyl making unit | 17 | Apiculture |
| 5 | Soap making unit | 18 | Waste to Wealth |
| 6 | Dyeing Unit | 19 | Vegetables |
| 7 | Hand Sanitizer | 20 | Dairy farm |
| 8 | Hand wash liquid | 21 | Poultry farm |
| 9 | Detergent Powder | 22 | Fishery |
| 10 | Weaving units | 23 | Fuel Outlets |
| 11 | Vermi Compost | 24 | Car Wash |
| 12 | Note books & Registers | 25 | Weigh bridge |
| 13 | Bakery products | | |

## ಚಂಚಲಗೂಡ ಕಾರಾಗೃಹದಲ್ಲಿರುವ ಕಾರ್ಖಾನೆಗಳ ಉತ್ಪಾದನೆಗಳು

| S.No | Products | S.No | Products |
|---|---|---|---|
| 1 | Carpets | 13 | Wooden chairs and Teapoys |
| 2 | Yoga mats | 14 | Sofa Set |
| 3 | Asan mats | 15 | Hand Sanitizer |
| 4 | Door mats | 16 | Hand wash liquid |
| 5 | Bed Sheets (Single & Double) | 17 | Phenyl (black & scented) |
| 6 | Towels | 18 | Floor cleaner |
| 7 | Hand Kerchiefs | 19 | Glass cleaner |
| 8 | Prisoners cloth | 20 | Soaps |
| 9 | Duel Desks | 21 | Cloth masks |
| 10 | Single cots and Bunker cots | 22 | School and Khaki uniforms |
| 11 | Tables & Chairs | 23 | Note books & Registers |
| 12 | Almirahs & Racks | 24 | Bakery products |

**ತೆಲಂಗಾಣ ರಾಜ್ಯದ ಕಾರಾಗೃಹದ ಮಳಿಗೆ:
ಸದರಿ ಮಳಿಗೆಯು 150 ವರ್ಷಗಳಷ್ಟು ಹಳೆಯದಾದ
ಚಂಚಲಗೂಡ ಕಾರಾಗೃಹದ ಪ್ರತಿಕೃತಿಯಾಗಿದೆ.**




ಈ ಮಳಿಗೆಯಲ್ಲಿ ಕಾರಾಗೃಹದ ಕೈದಿಗಳು ತಯಾರಿಸಿದ ವಿವಿಧ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ. ಇವುಗಳಲ್ಲಿ ಕೈಮಗ್ಗದ ಬೆಡ್‌ಶೀಟ್‌ಗಳು, ಟವೆಲ್‌ಗಳು, ಫಿನಾಯಿಲ್, ಸಾಬೂನುಗಳು ಮತ್ತು ಬೇಕರಿ ಉತ್ಪನ್ನಗಳು ಪ್ರಮುಖವಾಗಿ ಲಭ್ಯವಿವೆ. ಕಾರಾಗೃಹದ ಕೈದಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಿ ಈ ಉತ್ಪನ್ನಗಳನ್ನು ಮಾರಾಟ ಮಾಡಲು ಅನುಮತಿಸಲಾಗಿದೆ.

ಕೈದಿಗಳಿಗೆ ವೃತ್ತಿಪರ ಕೌಶಲ್ಯಗಳನ್ನು ಕಲಿಸುವುದು ಮತ್ತು ಅವರು ಬಿಡುಗಡೆಯಾದ ನಂತರ ಗೌರವಯುತ ಜೀವನವನ್ನು ನಡೆಸಲು ಸಹಾಯ ಮಾಡುವುದು ಈ ಮಳಿಗೆಯ ಮುಖ್ಯ ಉದ್ದೇಶವಾಗಿದೆ.

E. **ಆಡಳಿತಾತ್ಮಕ ಸುಧಾರಣೆಗಳು** (Administrative Reforms) :

33. **ಕೈದಿಗಳ ಪ್ರತ್ಯೇಕೀಕರಣ (Segregation of Prisoners)**: ಮೊದಲ ಬಾರಿಗೆ ಅಪರಾಧ ಎಸಗಿದ ಕೈದಿಗಳನ್ನು ಪ್ರತ್ಯೇಕ ಬ್ಯಾರೆಕ್ಸ್‌ಗಳಲ್ಲಿ ಇರಿಸಬೇಕು ಮತ್ತು ಅವರ ಊಟ ಮತ್ತು ಚಟುವಟಿಕೆಗಳು ಅದೇ ಪ್ರದೇಶಕ್ಕೆ ಸೀಮಿತವಾಗಿರಬೇಕು. ಸದರಿ ಕೈದಿಗಳನ್ನು ರೂಢಿಗತ ಅಪರಾಧಿಗಳು ಅಥವಾ ದೀರ್ಘಾವಧಿಯ ಶಿಕ್ಷೆಗೆ ಒಳಗಾಗಿರುವ ಅಪರಾಧಿಗಳೊಂದಿಗೆ ಯಾವುದೇ ಸಂವಹನಕ್ಕೆ ಅವಕಾಶ ನೀಡಬಾರದು. ಹಾಗೂ ಕೈದಿಗಳಿಗೆ ಅವರ ಹೆಸರಿನ ವರ್ಣಮಾಲೆಯ ಕ್ರಮದಲ್ಲಿ (Alphabetical Order) ಸೆಲ್/ಬ್ಯಾರೆಕ್ಸ್‌ಗಳನ್ನು ಹಂಚಿಕೆ ಮಾಡಬೇಕು. ರೂಢಿಗತ ಮತ್ತು ಕುಖ್ಯಾತ ಅಪರಾಧಿಗಳನ್ನು ಹೆಚ್ಚಿದ ಕಣ್ಗಾವಲಿನೊಂದಿಗೆ ಉನ್ನತ-ಭದ್ರತಾ ವ್ಯವಸ್ಥೆಯ ಬ್ಯಾರೆಕ್ಸ್‌ಗಳಲ್ಲಿ ಇಡಬೇಕು. ಹರಿಯಾಣದ ಜೈಲು ನಿಯಮಗಳ ಅಧಿಸೂಚನೆ (ದಿನಾಂಕ 30.12.2022) ಮಾದರಿಯಲ್ಲಿ ಕರ್ನಾಟಕದ ಕಾರಾಗೃಹ ನಿಯಮಗಳಿಗೆ ತಿದ್ದುಪಡಿಗಳನ್ನು ತರಬೇಕು. (ಪ್ರತಿ ಲಗತ್ತಿಸಿದೆ)

**ತಿಹಾರ್ ಜೈಲಿನಲ್ಲಿ ಕೈದಿಗಳ ಪ್ರತ್ಯೇಕೀಕರಣ: ತಿಹಾರ್ ಸಂಕೀರ್ಣದಲ್ಲಿ 9 ಜೈಲುಗಳಿವೆ, ಅವುಗಳನ್ನು ಈ ಕೆಳಗಿನಂತೆ ಪ್ರತ್ಯೇಕಿಸಲಾಗಿದೆ.**

| ಕಾರಾಗೃಹ ಸಂಖ್ಯೆ | ವಿಂಗಡಣೆ |
|---|---|
| 2 | ಶಿಕ್ಷಾರ್ಹ ಅಪರಾಧಿಗಳು ಹಾಗೂ ಕುಖ್ಯಾತಿ ಕೈದಿಗಳು |
| 4 | ಮೊದಲನೇ ಬಾರಿ ಅಪರಾಧ ಎಸಗಿದ ಅಪರಾಧಿಗಳು |
| 5 | ಯುವ ಅಪರಾಧಿಗಳು (18–21 ವರ್ಷ) |
| 6 | ಮಹಿಳಾ ಅಪರಾಧಿಗಳು |
| 7 | ಕುಖ್ಯಾತವಲ್ಲದ ಅಪರಾಧಿಗಳು<br>(ವಂಚನೆ, ವರದಕ್ಷಿಣೆ ಕಿರುಕುಳ, ಗಾಯದ ಪ್ರಕರಣ, ಇತ್ಯಾದಿ.) |
| 1,3,8&9 | ವಿಚಾರಣಾಧೀನ ಕೈದಿಗಳು (ಅವರ ಹೆಸರಿನ ವರ್ಣಮಾಲೆಯ ಆಧಾರದ ಮೇಲೆ ಬ್ಯಾರೆಕ್ಸ್‌ಗಳನ್ನು ಹಂಚಿಕೆ ಮಾಡಬೇಕು. ಕಾರಾಗೃಹದ ಅಧಿಕಾರಿ/ಸಿಬ್ಬಂದಿಯವರ ಮಧ್ಯಸ್ಥಿಕೆ ಇರಬಾರದು.) |

34. **ಇ-ಮುಲಾಕಾತ್ (E-Mulakat)**: ಕಾರಾಗೃಹಗಳಲ್ಲಿ ಕೈದಿಗಳಿಗೆ ಇ-ಮುಲಾಕಾತ್‌ನ್ನು ಪ್ರೋತ್ಸಾಹಿಸಬೇಕು. ಎಲೆಕ್ಟ್ರಾನಿಕ್ ಭೇಟಿಗಳನ್ನು (ಕೈದಿಗಳು ಮತ್ತು ಅವರ ಕುಟುಂಬ ಸದಸ್ಯರು, ವಕೀಲರ ನಡುವಿನ ವೀಡಿಯೊ ಅಥವಾ ಆನ್ಲೈನ್ ಸಭೆಗಳು) ಸಾಂಪ್ರದಾಯಿಕ ದೈಹಿಕ ಭೇಟಿಗಳಿಗೆ (ವಿಶೇಷವಾಗಿ ದೈಹಿಕ ಸಭೆಗಳು ಕಷ್ಟಕರವಾದಲ್ಲಿ) ಪರ್ಯಾಯವಾಗಿ ಇ-ಮುಲಾಕಾತ್‌ನ್ನು ಜಾರಿಗೊಳಿಸಬೇಕು.

35. **ಮಹಿಳಾ ಅಧಿಕಾರಿ, ಸಿಬ್ಬಂದಿಯವರ ಸ್ಥಳ ನಿಯೋಜನೆ ಮತ್ತು ನೇಮಕಾತಿ:** ಪುರುಷ ಕೈದಿಗಳ ಬ್ಯಾರಕ್‌ಗಳಲ್ಲಿ ಮಹಿಳಾ ಸಿಬ್ಬಂದಿ ಕರ್ತವ್ಯ ನಿರ್ವಹಿಸುವುದು ತುಂಬಾ ಕಷ್ಟಕರ ಮತ್ತು ಒತ್ತಡದಿಂದ ಕೂಡಿದೆ ಎಂಬುದನ್ನು ಗಮನಿಸಲಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ಮತ್ತು ಮಹಿಳಾ ಅಧಿಕಾರಿ/ಸಿಬ್ಬಂದಿಯವರ ದಕ್ಷತೆ ಮತ್ತು ಕ್ಷೇಮವನ್ನು ಖಚಿತ ಪಡಿಸಿಕೊಳ್ಳಲು, ಮಹಿಳಾ ಸಿಬ್ಬಂದಿಯನ್ನು ಮಹಿಳಾ ಕೈದಿಗಳ ಇರುವ ಬ್ಯಾರೆಕ್ಸ್/ಸೆಲ್‌ಗಳ ಕರ್ತವ್ಯಕ್ಕೆ ಮರು-ನಿಯೋಜಿಸಲು (Rea located) ಶಿಫಾರಸ್ಸು ಮಾಡಲಾಗಿದೆ. ಇದಲ್ಲದೆ ಭವಿಷ್ಯದಲ್ಲಿ ಮಹಿಳಾ ಜೈಲು ಸಿಬ್ಬಂದಿಯ ನೇಮಕಾತಿಯನ್ನು ಸಹಾ ಮಹಿಳಾ ಕೈದಿಗಳ ಬ್ಯಾರೆಕ್ಸ್/ಸೆಲ್‌ಗಳ ಸಂಖ್ಯೆಯನ್ನು ಆಧರಿಸಿ ಅಥವಾ ಮಹಿಳಾ ಕೈದಿಗಳ ಸಂಖ್ಯಾ ಬಲವನ್ನು ಆಧರಿಸಿ ನಡೆಸಬೇಕು. ಈ ತಂತ್ರವು ಸಂಪನ್ಮೂಲಗಳ ನಿಯೋಜನೆಯನ್ನು ಉತ್ತಮಗೊಳಸುತ್ತದೆ, ಸುರಕ್ಷತೆಯನ್ನು ಹೆಚ್ಚಿಸುತ್ತದೆ ಮತ್ತು ಮಹಿಳಾ ಅಧಿಕಾರಿಗಳು ಹೆಚ್ಚು ಅಗತ್ಯವಿರುವಲ್ಲಿ ಪರಿಣಾಮಕಾರಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತದೆ.

36. **ಎಫ್.ಐ.ಆರ್‌ಗಳ ವಿಮರ್ಶೆ:** ಕಾರಾಗೃಹಗಳಲ್ಲಿ ಹಲವಾರು ಎಫ್.ಐ.ಆರ್ ಗಳು ದಾಖಲಾಗಿದ್ದು, ಅವುಗಳಲ್ಲಿ ಕೆಲವು 'ಸಿ' ರಿಪೋರ್ಟ್ ಎಂದು ವರದಿ ಮಾಡಲಾಗಿದೆ. ಆದ್ದರಿಂದ, ಅಂತಹ ಎಲ್ಲಾ 'ಸಿ' ರಿಪೋರ್ಟ್ ವರದಿಯ ಪ್ರಕರಣಗಳನ್ನು ಕೂಲಂಕುಷವಾಗಿ ಮರು ಪರಿಶೀಲಿಸಬೇಕು.

| ಕ್ರ. ಸಂ | ಕಾರಾಗೃಹದ ಹೆಸರು | ದಾಖಲಾದ ಒಟ್ಟು ಎಫ್.ಐ.ಆರ್‌ಗಳ ಸಂಖ್ಯೆ | ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು | ಠಾಣಾ ವ್ಯಾಪ್ತಿಯಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ. (ವಿಚಾರಣೆಯ ಹಂತದಲ್ಲಿರುವುದು) | ಮುಕ್ತಾಯಗೊಂಡ ಪ್ರಕರಣಗಳು | ಬಿ-ರಿಪೋರ್ಟ್, ಸಿ-ರಿಪೋರ್ಟ್ ಆಗಿರುವ ಪ್ರಕರಣಗಳ ಸಂಖ್ಯೆ |
|---|---|---|---|---|---|---|
| 1. | ಬೆಂಗಳೂರು | 154 | - | 154 | - | - |
| 2. | ಮೈಸೂರು | 30 | 17 | 03 | - | 10 "ಸಿ"ರಿಪೋರ್ಟ್ |
| 3. | ಶಿವಮೊಗ್ಗ | 27 | 27 | - | - | - |
| 4. | ಶಿವಮೊಗ್ಗ (ಮಹಿಳಾ) | - | - | - | - | - |
| 5. | ಬಳ್ಳಾರಿ | 01 | - | 01 | - | - |

| | | | | | | |
|---|---|---|---|---|---|---|
| 6. | ಕಲಬುರಗಿ | 55 | 31 | 22 | 02 | - |
| 7. | ಬೆಳಗಾವಿ | 24 | 11 | 11 | - | 02 |
| 8. | ವಿಜಯಪುರ | 11 | 05 | 04 | 02 | "ಸಿ"ರಿಪೋರ್ಟ್<br>- |
| 9. | ಧಾರವಾಡ | 11 | 09 | 02 | - | - |

**ಜನವರಿ-2021 ರಿಂದ 15ನೇ ನವೆಂಬರ್-2025 ರವರೆಗೆ ಕೇಂದ್ರ ಕಾರಾಗೃಹಗಳಲ್ಲಿ ನಡೆದ ಕಾನೂನು ಬಾಹಿರ ಚಟುವಟಿಕೆಗಳ ವಿರುದ್ಧ ದಾಖಲಾತಿರುವ ಪ್ರಕರಣಗಳ ವಿವರ.**

37. **ಕಾರಾಗೃಹ ವೀಕ್ಷಕರ ಮಂಡಳಿ (PrisonVisitor Board):** ಜೈಲು ಸಂದರ್ಶಕರ ಮಂಡಳಿಯು (Prison Visitor Board) ಸಾಮಾನ್ಯವಾಗಿ ಜಿಲ್ಲಾ ಮಟ್ಟದಲ್ಲಿ ರಚನೆಯಾಗಿರುವ ಒಂದು ಕಾನೂನು ಬದ್ಧ ಸಂಸ್ಥೆಯಾಗಿದ್ದು, ಇದು ಕಾರಾಗೃಹಗಳ ಆಡಳಿತ ಮತ್ತು ಕಾರ್ಯ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುತ್ತದೆ ಮತ್ತು ಪರಿಶೀಲಿಸುತ್ತದೆ. ಇದು ಕೈದಿಗಳ ಯೋಗ ಕ್ಷೇಮವನ್ನು ಮತ್ತು ನಿಯಮಗಳ ಅನುಸರಣೆಯನ್ನು ಖಚಿತಪಡಿಸುತ್ತದೆ. ಈ ಮಂಡಳಿಯ ಸಂಯೋಜನೆಯು ಸಾಮಾನ್ಯವಾಗಿ ಬಹು-ಶಿಸ್ತಿನಿಂದ ಕೂಡಿದ್ದು, ಇದರಲ್ಲಿ ಜಿಲ್ಲಾ ದಂಡಾಧಿಕಾರಿ/ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ, ಮುಖ್ಯ ವೈದ್ಯಾಧಿಕಾರಿ ಹಾಗೂ ವಿವಿಧ ಸಮಾಜ ಸೇವಾ ವಲಯಗಳಿಂದ ಅಥವಾ ಗಣ್ಯ ನಾಗರಿಕರಿಂದ ನೇಮಕಗೊಂಡ ಸದಸ್ಯರು ಸೇರಿರುತ್ತಾರೆ. ಈ ಮಂಡಳಿಯು ತಪಾಸಣೆಗಳನ್ನು ನಡೆಸಲು ಮತ್ತು ಜೈಲಿನ ಕಾರ್ಯಾಚರಣೆಗಳನ್ನು ಪರಿಶೀಲಿಸಲು ತ್ರೈಮಾಸಿಕವಾಗಿ (ಪ್ರತಿ ಮೂರು ತಿಂಗಳಿಗೆ) ಸಭೆ ಸೇರಬೇಕಿದೆ. ಇದರ ಪ್ರಮುಖ ಕಾರ್ಯಗಳು, ಕಾರಾಗೃಹದ ಸಮಗ್ರ ಆಡಳಿತ ಮತ್ತು ಕಾರ್ಯನಿರ್ವಹಣೆಯನ್ನು ಪರಿಶೀಲಿಸುವುದು, ಅಗತ್ಯ ಮೂಲಸೌಕರ್ಯ ಸುಧಾರಣೆಗಳು ಮತ್ತು ಇತರ ಆಡಳಿತಾತ್ಮಕ ಬದಲಾವಣೆಗಳನ್ನು ಶಿಫಾರಸ್ಸು ಮಾಡುವುದು, ಹಾಗೂ ಅತ್ಯಂತ ಮುಖ್ಯವಾಗಿ, ಹಿಂದಿನ ತ್ರೈಮಾಸಿಕದಲ್ಲಿ ಗುರುತಿಸಲಾದ ನ್ಯೂನತೆಗಳನ್ನು ಪರಿಶೀಲಿಸಿ ಅವುಗಳಿಗೆ ಅಗತ್ಯ ಪರಿಹಾರ ಕ್ರಮಗಳನ್ನು ಶಿಫಾರಸು ಮಾಡುವುದಾಗಿದೆ. ಇದರಿಂದ ನಿರಂತರ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಬಹುದು. ಆದಾಗ್ಯೂ, ಹೆಚ್ಚಿನ ಜಿಲ್ಲೆಗಳಲ್ಲಿ ಈ ಸಭೆಯು ನಿಜವಾದ ಅರ್ಥದಲ್ಲಿ ನಡೆಯುತ್ತಿಲ್ಲ ಎಂಬುದು ಕಂಡುಬಂದಿದೆ. ಆದ್ದರಿಂದ ಸದರಿ ಮಂಡಳಿಯು ಕಟ್ಟುನಿಟ್ಟಾಗಿ ಪ್ರತಿ ಮೂರು ತಿಂಗಳಿಗೆ ಒಮ್ಮೆ ಸಭೆ ನಡೆಸಿ, ಕಡ್ಡಾಯವಾಗಿ ವರದಿಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಬೇಕಾಗಿದೆ.

38. **ಜೈಲುಗಳ ನಿರ್ವಹಣೆಗಾಗಿ ಎಲ್ಲಾ ಇಲಾಖೆಗಳನ್ನು (ಉದಾಹರಣೆಗೆ, ಸಮಾಜ ಕಲ್ಯಾಣ, ಆರೋಗ್ಯ, ಶಿಕ್ಷಣ, ಐಟಿ) ಸಂಯೋಜಿಸಬೇಕು (ತಿಹಾರ್ ಜೈಲಿನಲ್ಲಿ ಆಚರಣೆಯಲ್ಲಿದೆ):** ಉತ್ತಮ ಜೈಲು ನಿರ್ವಹಣೆಗೆ ಸಮಾಜ ಕಲ್ಯಾಣ, ಆರೋಗ್ಯ, ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನದಂತಹ ಇಲಾಖೆಗಳನ್ನು ಒಟ್ಟುಗೂಡಿಸಿ, ಸದರಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕೈದಿಗಳ ಆರೈಕೆ, ಪುನರ್ವಸತಿ, ಕೌಶಲ್ಯ ಅಭಿವೃದ್ಧಿ ಮತ್ತು ಆಡಳಿತದ ಸಮಗ್ರ ವ್ಯವಸ್ಥೆಯನ್ನು ಒದಗಿಸಬೇಕು.

39. **ಕಾರ್ಯಕ್ಷೇತ್ರದ ಸಾಮರಸ್ಯ (Workplace Harmony):** ಸುಗಮ ಮತ್ತು ಪರಿಣಾಮಕಾರಿ ಆಡಳಿತವನ್ನು ಖಚಿತಪಡಿಸಿಕೊಳ್ಳಲು ಹಿರಿಯ ಅಧಿಕಾರಿಗಳು ಅಧೀನ ಸಿಬ್ಬಂದಿಯೊಂದಿಗೆ ಸೌಹಾರ್ದಯುತ ಮತ್ತು ಸಾಮರಸ್ಯದ ವಾತಾವರಣವನ್ನು ನಿರ್ಮಿಸಬೇಕು. ಕಾರ್ಯಕ್ಷೇತ್ರದಲ್ಲಿ ಸಾಮರಸ್ಯವನ್ನು ಸೃಷ್ಟಿಸುವುದು ಎಂದರೆ ಹಿರಿಯ ಅಧಿಕಾರಿಯವರು ತಮ್ಮ ತಂಡಗಳನ್ನು ಗೌರವ,

ನ್ಯಾಯಸಮ್ಮತತೆ ಮತ್ತು ಮುಕ್ತ ಸಂವಹನದೊಂದಿಗೆ ನಡೆಸಿಕೊಳ್ಳುವುದು. ಇದು ಎಲ್ಲಾ ಶ್ರೇಣಿಗಳಲ್ಲಿ ವಿಶ್ವಾಸ, ಸಹಕಾರ ಮತ್ತು ಪರಸ್ಪರ ಬೆಂಬಲವನ್ನು ನಿರ್ಮಿಸಲು ಸಹಾಯ ಮಾಡುತ್ತದೆ.

40. **ಕೈದಿಗಳ ವರ್ಗಾವಣೆ** : ಕೈದಿಗಳ ವರ್ಗಾವಣೆಯನ್ನು ಪ್ರಿಸನ್ ಆಕ್ಟ್ ಮತ್ತು ಪ್ರಿಸನ್ ಮ್ಯಾನ್ಯುಯಲ್ ಅಡಿಯಲ್ಲಿ ಕಾನೂನು ಪ್ರಕ್ರಿಯೆಯೊಂದಿಗೆ ಕಟ್ಟುನಿಟ್ಟಾಗಿ ಕೈಗೊಳ್ಳಬೇಕು ಎಂದು ಸಮಿತಿಯು ಗಮನಿಸಿದೆ. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಸೆರೆಮನೆಗಳು ಮತ್ತು ಸುಧಾರಣಾ ಸೇವೆಗಳು) ಸುರಕ್ಷತೆ ಮತ್ತು ಆಡಳಿತಾತ್ಮಕ ಕಾರಣಗಳಿಗಾಗಿ ಕೈದಿಗಳನ್ನು ಒಂದು ಜೈಲಿನಿಂದ ಇನ್ನೊಂದಕ್ಕೆ ವರ್ಗಾಯಿಸಲು ಅಧಿಕಾರ ಹೊಂದಿದ್ದಾರೆ. ಆದಾಗ್ಯೂ, ಹಲವಾರು ಪ್ರಕರಣಗಳಲ್ಲಿ ಕೈದಿಗಳು ಗೌರವಾನ್ವಿತ ನ್ಯಾಯಾಲಯಗಳಿಂದ ಮಧ್ಯಂತರ ತಡೆಯಾಜ್ಞೆಗಳನ್ನು ಪಡೆಯುತ್ತಾರೆ ಮತ್ತು ಅದೇ ಜೈಲಿನಲ್ಲಿ ಉಳಿಯಲು ಮುಂದುವರಿಯುತ್ತಾರೆ. ಇದರಿಂದಾಗಿ ಅಂತಹ ವರ್ಗಾವಣೆಯ ಉದ್ದೇಶವು ವಿಫಲಗೊಳ್ಳುತ್ತದೆ ಮತ್ತು ಜೈಲು ಆಡಳಿತದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.ಆದ್ದರಿಂದ, ಪ್ರಿಸನ್ ಮತ್ತು ಸುಧಾರಣಾ ಸೇವೆಗಳ ಸಮಿತಿಯು ಶಿಫಾರಸ್ಸು ಮಾಡುವುದೇನೆಂದರೆ, ಸೂಕ್ತ ಪ್ರಕರಣಗಳಲ್ಲಿ, ವರ್ಗಾವಣೆ ಆದೇಶಗಳನ್ನು ರದ್ದುಗೊಳಿಸಲು ಅಥವಾ ಮಾರ್ಪಡಿಸಲು ಗೌರವಾನ್ವಿತ ನ್ಯಾಯಾಲಯಗಳ ಮುಂದೆ ತಕ್ಷಣ ಮೇಲ್ಮನವಿಗಳನ್ನು ಅಥವಾ ತಡೆಯಾಜ್ಞೆಗಳ ಮೇಲಿನ ರದ್ದತಿ/ಮಾರ್ಪಾಡಿಗೆ ಮನವಿ ಸಲ್ಲಿಸಬೇಕು. ಅಲ್ಲದೆ, ಕಾನೂನುಬದ್ಧ ವರ್ಗಾವಣೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಆಡಳಿತಾತ್ಮಕ ಅವಶ್ಯಕತೆಯನ್ನು ಖಚಿತಪಡಿಸಿಕೊಳ್ಳಲು ಸಂಬಂಧಿಸಿದ ಶಾಸನಬದ್ಧ ನಿಬಂಧನೆಗಳು, ಸುರಕ್ಷತಾ ಪರಿಗಣನೆಗಳು ಮತ್ತು ಆಡಳಿತಾತ್ಮಕ ಅಗತ್ಯಗಳನ್ನು ದಾಖಲಿಸಬೇಕು

## F. ಭದ್ರತಾ ಕ್ರಮಗಳು (Security Measures) :-

41. **ಹೊರಗಿನ ಆಹಾರದ ನಿಷೇಧ:** ಕಾರಾಗೃಹದ ಆವರಣದೊಳಗೆ ಯಾವುದೇ ರೀತಿಯ ಹೊರಗಿನ ಆಹಾರ ಪದಾರ್ಥಗಳನ್ನು ತರುವುದನ್ನು ಕಟ್ಟುನಿಟ್ಟಾಗಿ ಮತ್ತು ಸಂಪೂರ್ಣವಾಗಿ ನಿಷೇಧಿಸಬೇಕು. ಬದಲಾಗಿ ಎಲ್ಲಾ ಆಹಾರ ಪದಾರ್ಥಗಳು ಕಾರಾಗೃಹದ ಒಳಗಿರುವ ಅಂಗಡಿಯಲ್ಲಿ (Store) ಲಭ್ಯವಿರುವಂತೆ ವ್ಯವಸ್ಥೆ ಮಾಡಬೇಕು. ಹಣ್ಣುಗಳನ್ನು 48 ಗಂಟೆಗಳಿಗಿಂತ ಹೆಚ್ಚು ಕಾಲ ಬ್ಯಾರಕ್‌ಗಳಲ್ಲಿ ಸಂಗ್ರಹಿಸಲು ಅನುಮತಿಸಬಾರದು (ಏಕೆಂದರೆ ಇದನ್ನು ವೈನ್ ತಯಾರಿಸಲು ಬಳಸುವ ಅವಕಾಶವಿರುತ್ತದೆ). ಕೇವಲ ಬಣ್ಣವಿಲ್ಲದ (Tint), BPA-ಮುಕ್ತ ಪಾರದರ್ಶಕ ಪ್ಲಾಸ್ಟಿಕ್ ಬಾಟಲಿಗಳನ್ನು ಮಾತ್ರ ಬ್ಯಾರಕ್‌ಗಳಲ್ಲಿ ಬಳಸಲು ಅನುಮತಿಸಬೇಕು. ಈ ಬಾಟಲಿಗಳಲ್ಲಿ ಹಣ್ಣಿನ ರಸಗಳು ಮತ್ತು ಇತರ ದ್ರವ ಪದಾರ್ಥಗಳಿಗೆ ಅವಕಾಶ ನೀಡಬಾರದು.

42. **ಬಟ್ಟೆಗಳ ಪರಿಶೀಲನೆ:** ಹೊರಗಿನಿಂದ ಕಾರಾಗೃಹದ ಒಳಗೆ ಕೈದಿಗಳಿಗಾಗಿ ತಂದ ಬಟ್ಟೆಗಳಲ್ಲಿ ನಿಷಿದ್ಧ ವಸ್ತುಗಳ ಅಡಗಿಸುವಿಕೆಯನ್ನು ತಡೆಯಲು ಸದರಿ ಬಟ್ಟೆಗಳನ್ನು 24 ಗಂಟೆಗಳ ವರೆಗೆ ನೀರಿನಲ್ಲಿ ನೆನೆಸಿ, ನಂತರವೇ ಕೈದಿಗಳಿಗೆ ನೀಡಬೇಕು.

43. **ಬ್ಲಾಕ್ಮೇಲ್ ತಡೆಗಟ್ಟುವಿಕೆ:** ಕೈದಿಗಳು ಫೋಟೋಗಳು ಅಥವಾ ವೀಡಿಯೊಗಳನ್ನು ಬಳಸಿ ಸಿಬ್ಬಂದಿಯವರನ್ನು ಬ್ಲಾಕ್ಮೇಲ್ ಮಾಡುವುದನ್ನು ತಡೆಯುವ ಸಂಬಂಧ ಮುಖ್ಯ ಅಧೀಕ್ಷಕರು ಸಿಬ್ಬಂದಿಯ ಕುಂದುಕೊರತೆಗಳನ್ನು ಆಗಿಂದಾಗ್ಗೆ ಪರಿಶೀಲಿಸಿ, ಅವರಲ್ಲಿ ಧೈರ್ಯ ಹಾಗೂ ಸ್ಥೈರ್ಯವನ್ನು ಮೂಡಿಸಬೇಕು ಮತ್ತು ಬ್ಲಾಕ್ಮೇಲ್‌ನಲ್ಲಿ ತೊಡಗಿರುವ ಕೈದಿಗಳನ್ನು ಇತರೆ ಕಾರಾಗೃಹಗಳಿಗೆ ವರ್ಗಾಯಿಸಬೇಕು.

44. **ವೈದ್ಯಕೀಯ ಉಲ್ಲೇಖಗಳು (Medical Referrals)**: ಕೈದಿಗಳನ್ನು ಹೊರಗಿನ ಆಸ್ಪತ್ರೆಗಳಿಗೆ ಅನಗತ್ಯವಾಗಿ ಕಳುಹಿಸುವುದನ್ನು ತಪ್ಪಿಸಬೇಕು. ಈ ಸಂಬಂಧ ಜೈಲು ಅಧೀಕ್ಷಕರು ಕಟ್ಟುನಿಟ್ಟಿನ ಪರಿಶೀಲನೆಯನ್ನು ಮಾಡಬೇಕು ಮತ್ತು ಕೈದಿ ಹಾಗೂ ವೈದ್ಯರ ಮಧ್ಯೆ ವೀಡಿಯೊ ಸಮಾಲೋಚನೆಗಳನ್ನು ಪ್ರೋತ್ಸಾಹಿಸಬೇಕು.

45. **ಆಂತರಿಕ ಗುಪ್ತಚರ (Internal Intelligence)**: ಗೌಪ್ಯ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಸೂಕ್ತವಾದ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲು ಸಿಬ್ಬಂದಿ ಮತ್ತು ಆಯ್ದ ಕೈದಿಗಳನ್ನು ಒಳಗೊಂಡ ವ್ಯವಸ್ಥಿತ ಗುಪ್ತಚರ ಜಾಲವನ್ನು ಸ್ಥಾಪಿಸಬೇಕು. ಅಂತಹ ಮಾಹಿತಿಯನ್ನು ನೀಡುವ ಕೈದಿಗಳಿಗೆ ಅಡುಗೆ ಕೆಲಸದಂತಹ ಆದ್ಯತೆಯ ಕೆಲಸಗಳನ್ನು ಒದಗಿಸುವ ಮೂಲಕ ಪ್ರೋತ್ಸಾಹಿಸಬೇಕು ಹಾಗೂ ಮಾಹಿತಿ ನೀಡುವವರ ಮಾಹಿತಿಯನ್ನು ಗೌಪ್ಯವಾಗಿಡಬೇಕು.

46. **ವಕೀಲರು ಕೈದಿಗಳನ್ನು ಭೇಟಿ ಮಾಡಲು SOP ಹಾಗೂ ಪ್ರತ್ಯೇಕ ಕ್ಯಾಬಿನ್ ಮತ್ತು ಮೀಟಿಂಗ್ ಕೊಠಡಿಯಲ್ಲಿ ಸಿಸಿಟಿವಿ**: ವಕೀಲರು ಕೈದಿಗಳೊಂದಿಗೆ ಭೇಟಿ ಮಾಡಲು ಒಂದು ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್ (SOP) ಸಿದ್ಧಪಡಿಸಬೇಕು, ಹಾಗೂ ಭದ್ರತಾ ಉದ್ದೇಶಗಳಿಗಾಗಿ ಮತ್ತು ನಿಷಿದ್ಧ ವಸ್ತುಗಳ ವಿನಿಮಯವನ್ನು ತಡೆಯಲು, ಕೈದಿಗಳೊಂದಿಗೆ ಕಾನೂನು ಸಮಾಲೋಚನೆಗಳು ಜೈಲಿನ ಭೇಟಿ ಪ್ರದೇಶದೊಳಗಿನ ಗೊತ್ತುಪಡಿಸಿದ, ಸುರಕ್ಷಿತ ಕ್ಯಾಬಿನ್‌ನಲ್ಲಿ ನಡೆಯಬೇಕು ಮತ್ತು ಸದರಿ ಪ್ರದೇಶದಲ್ಲಿ ಸಿಸಿಟಿವಿ ಕಣ್ಗಾವಲು ಅಳವಡಿಸುವುದನ್ನು ಕಡ್ಡಾಯಗೊಳಿಸಬೇಕು.

47. **ಕೈದಿಗಳಿಗೆ ಜೈಲಿನಿಂದ ಹೊರಗೆ ಹೋಗಲು ಅವಕಾಶ ನೀಡಬಾರದು**: ಜಾನುವಾರು ಮೇಯಿಸುವಿಕೆ ಮತ್ತು ಇತರ ಚಟುವಟಿಕೆಗಳಿಗಾಗಿ ಕೈದಿಗಳಿಗೆ ಜೈಲು ಆವರಣದಿಂದ ಹೊರಹೋಗಲು ಕಡ್ಡಾಯವಾಗಿ ಅನುಮತಿ ನಿರಾಕರಿಸುವುದರಿಂದ ಕಟ್ಟುನಿಟ್ಟಾದ ಭದ್ರತೆ ಮತ್ತು ಹೊಣೆಗಾರಿಕೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

48. **ಕೊರಿಯರ್**: ಕೊರಿಯರ್ ಮೂಲಕ ಪಾರ್ಸಲ್/ಪತ್ರಗಳನ್ನು ಕೈದಿಗಳಿಗೆ ಕಳುಹಿಸಲು ಅನುಮತಿಸಲಾಗಿದೆ, ಆದರೆ ಇದನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಆದ್ದರಿಂದ, ಸಂಪೂರ್ಣ ಪರಿಶೀಲನೆ ಮತ್ತು ನಿರ್ದಿಷ್ಟ ಮಾರ್ಗಸೂಚಿಗಳನ್ನು ಪಾಲಿಸಿದ ನಂತರ ಅಸಾಧಾರಣ/ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಕೊರಿಯರ್‌ಗೆ ಅನುಮತಿಸಬೇಕು.

49. **ಪಡಿತರ ವಾಹನಗಳು ಮತ್ತು ಕಸದ ವಾಹನಗಳು**: ಪಡಿತರದ ವಾಹನವನ್ನು ಕಾರಾಗೃಹದ ಒಳಗೆ ಪ್ರವೇಶಿಸಲು ಅವಕಾಶ ನೀಡಬಾರದು. ಬದಲಿಗೆ ಸಿಸಿ ಕ್ಯಾಮರಾಗಳ ಕಣ್ಗಾವಲಿನಲ್ಲಿ ಪಡಿತರವನ್ನು ಜೈಲಿನೊಳಗೆ ತರಲು ಮತ್ತು ಕಸವನ್ನು ಹೊರಗೆ ಸಾಗಿಸಲು ಟ್ರಾಲಿಗಳನ್ನು ಬಳಸಬೇಕು. ಇದರಿಂದ ಆಂತರಿಕ ಭದ್ರತೆಯನ್ನು ಬಿಗಿಗೊಳಿಸಲು ಮತ್ತು ಜೈಲು ಆವರಣವನ್ನು ಪ್ರವೇಶಿಸುವ ದೊಡ್ಡ ವಾಹನಗಳ ಮೂಲಕ ನಿಷಿದ್ಧ ವಸ್ತುಗಳನ್ನು ಮತ್ತು ಅನಧಿಕೃತ ವಸ್ತುಗಳನ್ನು ಕಳ್ಳಸಾಗಣೆ ಮಾಡುವ ಅವಕಾಶಕ್ಕೆ ಕಡಿವಾಣ ಹಾಕಬಹುದಾಗಿರುತ್ತದೆ.

50. **ಭದ್ರತಾ ಉಪಕರಣಗಳ ವರ್ಧನೆ**: ಕಾರಾಗೃಹದ ಸಂಪೂರ್ಣ ಭದ್ರತೆಯನ್ನು ಹೆಚ್ಚಿಸಲು, ನಿಷಿದ್ಧ ವಸ್ತುಗಳ ಪ್ರವೇಶವನ್ನು ತಡೆಯಲು, ಅನುಮಾನಾಸ್ಪದ ನಡವಳಿಕೆಗಳನ್ನು ಪತ್ತೆಹಚ್ಚಲು, ಕಣ್ಗಾವಲು ಸುಧಾರಿಸಲು ಮತ್ತು ಒಟ್ಟಾರೆ ಸುರಕ್ಷತೆಯನ್ನು ಬಲಪಡಿಸಲು ನವೀನ ಮಾದರಿಯ ಆಧುನಿಕ ತಂತ್ರಜ್ಞಾನಯುಕ್ತ ಉಪಕರಣಗಳನ್ನು ಬಳಸಬೇಕಾಗಿರುತ್ತದೆ.

**ಭದ್ರತಾ ಉಪಕರಣಗಳ ವಿವರ**

| ಕ್ರ.ಸಂ | ಪರಿಕರಗಳು | ಉಪಯೋಗ |
|---|---|---|
| 1. | ವಾಕಿ-ಟಾಕಿ ಸೆಟ್ | ಸಂವಾಹನಕ್ಕಾಗಿ |
| 2. | ಹ್ಯಾಂಡ್ ಹೆಲ್ಡ್ ಮೆಟಲ್ ಡಿಟೆಕ್ಟರ್ (HHMD) | ದೇಹ ಶೋಧನೆಗಾಗಿ |
| 3. | ಡೋರ್ ಫ್ರೇಮ್ ಮೆಟಲ್ ಡಿಟೆಕ್ಟರ್ (DFMD) | ದೇಹ ಶೋಧನೆಗಾಗಿ |
| 4. | ನಾನ್ ಲೀನಿಯರ್‌ಜಂಕ್ಷನ್ ಡಿಟೆಕ್ಟರ್ (NLJD) | ಗ್ಯಾಡ್ಜೆಟ್ ಶೋಧನೆಗಾಗಿ |
| 5. | ಡೀಪ್ ಸರ್ಚ್ ಮೆಟಲ್ ಡಿಟೆಕ್ಟರ್ | ಲೋಹ ಶೋಧನೆಗಾಗಿ |
| 6. | ಬ್ಯಾಗೇಜ್ ಸ್ಕ್ಯಾನರ್ | ಚೀಲಗಳ ಶೋಧನೆಗಾಗಿ |
| 7. | ಬಾಡಿವೋರ್ನ್ ಕ್ಯಾಮರಾ | ಧ್ವನಿ, ದೃಶ್ಯ ಚಿತ್ರೀಕರಣಕ್ಕಾಗಿ |
| 8. | ಸೆಕ್ಯೂರಿಟಿ ಅಲರಾಮ್ | ತುರ್ತು ಸಂದರ್ಭಕ್ಕಾಗಿ |
| 9. | ಮೊಬೈಲ್ ಜಾಮರ್ | ನೆಟ್‌ವರ್ಕ್ ಸ್ಥಗಿತಗೊಳಿಸಲು |
| 10. | ಸಿಸಿ ಟಿವಿ ಕ್ಯಾಮರಾ | ಧ್ವನಿ, ದೃಶ್ಯ ಚಿತ್ರೀಕರಣಕ್ಕಾಗಿ |

51. **ವೀಕ್ಷಕರ ನಿರ್ವಹಣಾ ವ್ಯವಸ್ಥೆ (Visitor Management System)**: ಆಸ್ಪತ್ರೆ ಭೇಟಿಗಳು, ವೀಕ್ಷಕರ ವಿವರಗಳು, ಕೈದಿಗಳಿಗೆ ನೀಡಿದ ಬಟ್ಟೆಗಳು ಮತ್ತು ಇತರೆ ವಸ್ತುಗಳನ್ನು ಒಳಗೊಂಡಂತೆ ವೀಕ್ಷಕರು ಮತ್ತು ಕೈದಿಗಳ ನಡುವಿನ ಸಂವಹನಗಳ ಎಲ್ಲಾ ಅಂಶಗಳನ್ನು (ಸೂಚಿಸಲಾದ ಆಸ್ಪತ್ರೆ ಭೇಟಿಗಳು, ಪ್ರತಿ ವೀಕ್ಷಕರ ವೈಯಕ್ತಿಕ ವಿವರಗಳು, ಮತ್ತು ದಾಖಲಿತ ಅನುಮೋದನೆ ಮತ್ತು ತಪಾಸಣೆಯೊಂದಿಗೆ ಕೈದಿಗಳಿಗೆ ಹಸ್ತಾಂತರಿಸಿದ ಬಟ್ಟೆಗಳು ಅಥವಾ ವಸ್ತುಗಳು) ಡಿಜಿಟಲ್ ರೂಪದಲ್ಲಿ ಸೆರೆಹಿಡಿಯಬೇಕು ಮತ್ತು ಟ್ರ್ಯಾಕ್ ಮಾಡಬೇಕು. ಇದರಿಂದ ಸಂಪೂರ್ಣ ಪ್ರಕ್ರಿಯೆಯು ಡಿಜಿಟಲ್ ರೂಪದಲ್ಲಿ ದಾಖಲಾಗಿರುತ್ತದೆ. ಇದರಿಂದ ಅವಶ್ಯಕತೆ ಕಂಡುಬಂದಲ್ಲಿ ಪರಿಶೀಲಿಸಬಹುದಾಗಿದೆ ಮತ್ತು ಆಡಿಟ್ ಮಾಡಬಹುದಾಗಿದೆ.

52. **ವೀಕ್ಷಕರ ನಿರ್ವಹಣಾ ವ್ಯವಸ್ಥೆಯಡಿಯಲ್ಲಿ ಪ್ರತಿದಿನ ಸಿಸಿಟಿವಿ ಕಣ್ಗಾವಲಿನಲ್ಲಿ ಪಡಿತರ ಚೀಲಗಳ ಪರಿಶೀಲನೆಯನ್ನು ಮಾಡುವುದನ್ನು ಸೇರಿಸಬೇಕು**: ಡ್ರಗ್ಸ್, ಮೊಬೈಲ್ ಫೋನ್‌ಗಳು ಅಥವಾ ಇತರ ನಿಷಿದ್ಧ ವಸ್ತುಗಳ ಕಳ್ಳಸಾಗಣೆಯನ್ನು ತಡೆಯಲು ಪಡಿತರ ಚೀಲಗಳಂತಹ ಎಲ್ಲಾ ವಸ್ತುಗಳ ಚಲನೆಯನ್ನು ದಾಖಲಿಸಬೇಕು, ಸ್ಕ್ಯಾನ್ ಮಾಡಬೇಕು ಮತ್ತು ಸಿಸಿಟಿವಿ ಮೇಲ್ವಿಚಾರಣೆಯ ಅಡಿಯಲ್ಲಿ ತಪಾಸಣೆಗಳಿಗೆ ಒಳಪಡಿಸಬೇಕು.

53. **ಭದ್ರತಾ ಪರಿಶೀಲನೆ ಮತ್ತು ಫ್ರಿಸ್ಕಿಂಗ್ (Security Check & Frisking)**: ಕಾರಾಗೃಹದ ಭದ್ರತೆಯ ನಿರ್ಣಾಯಕ ಅಂಶವಾಗಿರುವ ಫ್ರಿಸ್ಕಿಂಗ್‌ಅನ್ನು ಕರ್ನಾಟಕ ಕಾರಾಗೃಹಗಳಲ್ಲಿ ಪರಿಣಾಮಕಾರಿಯಾಗಿ ಅಳವಡಿಸದೇ ಇರುವುದನ್ನು ಸಮಿತಿಯ ಸದಸ್ಯರು ಕಾರಾಗೃಹಗಳಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಗಮನಿಸಿರುತ್ತಾರೆ. ತಿಹಾರ್ ಕಾರಗೃಹದಲ್ಲಿ ತಮಿಳುನಾಡು ಪೋಲೀಸ್, ಸಿಆರ್‌ಪಿಎಫ್ ಮತ್ತು ಐಟಿಬಿಪಿ ಒಳಗೊಂಡ ಮೂರು-ಪದರದ (Three Layer) ಶೋಧನಾ ವ್ಯವಸ್ಥೆಯನ್ನು ಅನುಸರಿಸಲಾಗುತ್ತದೆ, ಇದರಿಂದಾಗಿ ಕಾರಾಗೃಹದ ಒಳಗೆ ಅನಧಿಕೃತ ವ್ಯಕ್ತಿಗಳ ಪ್ರವೇಶ ಮತ್ತು ಕಾನೂನು ಬಾಹಿರ ವಸ್ತುಗಳು ಪ್ರವೇಶ ತಡೆಯಬಹುದಾಗಿರುತ್ತದೆ.

ಆದ್ದರಿಂದ, ತಿಹಾರ್ ಕಾರಾಗೃಹದಲ್ಲಿ ಅಳವಡಿಸಿರುವ ಮೂರು ಪದರದ (Three Layer) ಶೋಧನಾ ವ್ಯವಸ್ಥೆಯ ಮಾದರಿಯಲ್ಲಿ ಕರ್ನಾಟಕ ರಾಜ್ಯದ ಕಾರಾಗೃಹಗಳಲ್ಲಿಯೂ ಕೂಡ ಪ್ರಸ್ತುತ ಮೊದಲನೇ ಪದರದ ಶೋಧನಾ ಕಾರ್ಯವನ್ನು ಕೆಎಸ್ಐಎಸ್ಎಫ್ ಅಧಿಕಾರಿ ಹಾಗೂ ಸಿಬ್ಬಂದಿಯವರು ನಿರ್ವಹಿಸುತ್ತಿದ್ದು, ಕೆಎಸ್ಆರ್‌ಪಿ ಅಥವಾ ಇತರೆ ಮೀಸಲು ಪಡೆಗಳಿಂದ ಎರಡನೇ ಹಂತದ ಶೋಧನೆಯನ್ನು ನಡೆಸುವ ಕರ್ತವ್ಯಕ್ಕೆ ನಿಯೋಜಿಸಬಹುದಾಗಿರುತ್ತದೆ. ನಂತರ ಮೂರನೇ ಪದರದ ಶೋಧನೆಯನ್ನು ಕಾರಾಗೃಹದ ಅಧಿಕಾರಿ/ಸಿಬ್ಬಂದಿಯವರಿಂದ ನಡೆಸಬಹುದಾಗಿರುತ್ತದೆ. ಈ ರೀತಿಯ ಮೂರು ಹಂತದ (Three Layer) ಶೋಧನೆ ಮಾದರಿಯನ್ನು ಜಾರಿ ಮಾಡಿದಲ್ಲಿ ಕಾರಾಗೃಹದ ಒಳಗೆ ಅನಧಿಕೃತ ವ್ಯಕ್ತಿಗಳ ಪ್ರವೇಶ ಮತ್ತು ಕಾನೂನು ಬಾಹಿರ ವಸ್ತುಗಳ ಪ್ರವೇಶವನ್ನು ಸಂಪೂರ್ಣವಾಗಿ ನಿರ್ಬಂಧಿಸಬಹುದಾಗಿರುತ್ತದೆ. ಹಾಗೂ ಪ್ರತಿದಿನ ಶೋಧನಾಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಯವರ ಸ್ಥಳ ಬದಲಾವಣೆಯನ್ನು ಕಡ್ಡಾಯವಾಗಿ ಮಾಡುವುದು ಹಾಗೂ ಕೆಎಸ್ಐಎಸ್ಎಫ್ ಹಾಗೂ ಕೆಎಸ್ಆರ್‌ಪಿ ಅಧಿಕಾರಿ/ಸಿಬ್ಬಂದಿಯವರ ತಂಡವನ್ನು ಪ್ರತಿ ಎರಡು ತಿಂಗಳಿಗೊಮ್ಮೆ ರೊಟೇಷನ್ ಮಾದರಿಯಲ್ಲಿ ಬದಲಾವಣೆ ಮಾಡುವುದು ಅವಶ್ಯವಾಗಿರುತ್ತದೆ.

ಆಧುನಿಕ ಭದ್ರತಾ ಸಾಧನಗಳಾದ ಡಿಎಫ್ಎಂಡಿ. ಎಚ್ಎಚ್ಎಂಡಿ. ಫುಲ್-ಬಾಡಿ ಸ್ಕ್ಯಾನರ್‌ಗಳು. ಎಕ್ಸ್-ರೇ ಬ್ಯಾಗೇಜ್ ಸ್ಕ್ಯಾನರ್‌ಗಳು. ಎನ್ಎಲ್‌ಜೆಡಿ ಮತ್ತು ಲೋಹ ಪತ್ತೆ ಮಾಡುವ ಪರಿಕರಗಳನ್ನು ಪರಿಣಾಮಕಾರಿಯಾಗಿ ಬಳಸಬೇಕು ಮತ್ತು ಫ್ರಿಸ್ಕಿಂಗ್ ನಡೆಸುವ ಹಂತಗಳ ಬಗ್ಗೆ ವಿವರವಾದ ಎಸ್ಒಪಿಯನ್ನು ರಚಿಸಬೇಕು. ಹಾಗೂ ಪ್ರತಿ 5 ವರ್ಷಕ್ಕೆ ಒಮ್ಮೆ ಎಲ್ಲಾ ಭದ್ರತಾ ಸಾಮಾಗ್ರಿಗಳನ್ನು ಉನ್ನತೀಕರಿಸುವ ಅವಶ್ಯಕತೆ ಇರುತ್ತದೆ.